
# ಪ್ರಸಾದ

## ದ್ವೈಮಾಸಿಕ

ಸಂಪುಟ ೩೬ ಸಂಚಿಕೆ ೩

ಮೇ–ಜೂನ್ ೨೦೨೧



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಬೆಂಗಳೂರು ಬಸವ ವೇದಿಕೆ ಡಿಜಿಟಲ್ ಮಾಧ್ಯಮದ ಮೂಲಕ ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸುತ್ತೂರು ಜಗದ್ಗುರುಗಳು, ಭಾಲ್ಕಿಯ ಡಾ. ಶ್ರೀ ಬಸವಲಿಂಗ ಪಟ್ಟದ್ದೇವರು, ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು, ಡಾ. ಗೊರುಚ, ಡಾ. ಸಿ. ಸೋಮಶೇಖರ್, ಡಾ. ಗಂಗಾಂಬಿಕೆ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಡಾ. ರಂಜಾನ್ ದರ್ಗಾ, ಡಾ. ನಿರ್ಮಲ ಸಿ. ಎಲಿಗಾರ್, ಶ್ರೀ ಎಸ್. ಷಡಕ್ಷರಿ, ಶ್ರೀಮತಿ ಸಂಗೀತ ಕಟ್ಟಿ, ಶ್ರೀ ಕೆ.ವಿ. ನಾಗರಾಜಮೂರ್ತಿರವರುಗಳಿದ್ದಾರೆ (14.5.2021)



ಚಾಮರಾಜನಗರ ಜೆಎಸ್ಎಸ್ ಆಸ್ಪತ್ರೆಗೆ ರೋಟರಿ ಬೆಂಗಳೂರು ಬ್ರಿಗೇಡ್ಸ್ ವತಿಯಿಂದ ಆಕ್ಸಿಜನ್ ಕಾನ್ಸನ್ಟ್ರೇಟರ್‌ಗಳನ್ನು ಸದಸ್ಯರಾದ ಶ್ರೀ ಅಕ್ಷಯ್ ಮಲ್ಲಪ್ಪ, ದುಗ್ಗಹಟ್ಟಿ ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿಯವರು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಎಸ್. ಸುರೇಶ್‌ಕುಮಾರ್‌ರವರ ಮೂಲಕ ನೀಡಿದರು. ಡಾ. ಎಂ.ಆರ್. ರವಿ, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಎನ್. ಮಹೇಶ್, ಶ್ರೀ ಆರ್. ಮಹೇಶ್ ಹಾಗೂ ಡಾ. ಕುಲದೀಪ್‌ರವರಿದ್ದಾರೆ (1.6.2021)

# ಪ್ರಸಾದ

**ಸಂಪುಟ 36 : ಸಂಚಿಕೆ 3** **ಮೇ–ಜೂನ್ 2021**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

ಮುಖಪುಟ ಚಿತ್ರ

ಕೋವಿಡ್–19ರ ಸ್ಥಿತಿಗತಿ ಕುರಿತು ಚರ್ಚಿಸಲು ಆಚಾರ್ಯ ಮಹಾಸಭಾದಿಂದ ಡಿಜಿಟಲ್ ಮಾಧ್ಯಮದ ಮೂಲಕ ಏರ್ಪಡಿಸಲಾಗಿದ್ದ ಸಭೆಯಲ್ಲಿ ಪರಮಪೂಜ್ಯ ಜಗದ್ಗುರುಗಳು, ಶ್ರೀ ಬಾಬಾ ರಾಮದೇವ್‌ರವರು, ಶ್ರೀ ಸ್ವಾಮಿ ಅವದೇಶಾನಂದ ಗಿರಿಯವರು, ಶ್ರೀ ಆದಿಚುಂಚನಗಿರಿ ಜಗದ್ಗುರುಗಳು, ಶ್ರೀ ಪರಮಾತ್ಮನಂದ ಸರಸ್ವತಿಜಿಯವರು, ಶಾಂತಿಕುಂಜ್‌ನ ಶ್ರೀ ಪ್ರಣವ್ ಪಾಂಡೆಜೀಯವರು, ಶ್ರೀ ಮಾಧ್ವಪ್ರಿಯ ದಾಸಜಿ ಸ್ವಾಮಿಗಳು, ಭಾಯ್ ಶ್ರೀ ರಮೇಶ್ ಭಾಯ್ ಓಝಾಜೀಯವರು, ಶ್ರೀ ಗೀತಮನಿಷಿ ಸ್ವಾಮೀಜಿಯವರು, ಶ್ರೀ ಮಿಲಮ್ ಬೊಮ್ಮಾಪುರಂ ಅಧೀನಂ ಶ್ರೀಗಳು ಹಾಗೂ ಆಚಾರ್ಯ ಕೃಷ್ಣಮಣಿ ಮಹಾರಾಜ್‌ರವರುಗಳಿದ್ದಾರೆ (11.5.2021)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

## ಪರಿವಿಡಿ


| | |
|---|---|
| ಗುರುವಾಣಿ | 5 |
| ಸಂಪಾದಕೀಯ | 7 |
| ವಿಶ್ವಭ್ರಾತೃತ್ವ | 11 |
| ವಚನ ನಾದಸಿರಿ | 16 |
| ಪುಟ್ಟಯ್ಯ–ಸಂಗೀತ, ಸಾಹಿತ್ಯಗಳ ಮೇರು ಬೆಟ್ಟಯ್ಯ! <br> **ಡಾ. ಆರ್.ಬಿ. ಚಿಲುಮಿ** | 17 |
| ಸಂಗೀತ ಮತ್ತು ಸೌಂದರ್ಯಮೀಮಾಂಸೆ <br> **ಡಾ. ಎನ್.ಎಂ. ಗಿರಿಜಾಪತಿ** | 23 |
| ಕಾಯಕ <br> **ಡಾ. ಬಸವರಾಜ ಸಬರದ** | 30 |
| ಅಭಿನವ ಕಾಳಿದಾಸ: ಆಸ್ಥಾನ ವಿದ್ವಾಂಸ ಬಸವಪ್ಪಶಾಸ್ತ್ರಿಗಳ ಕೆಲ ಗೀತೆಗಳು <br> **ಡಾ॥ ಬಿ. ನಂಜುಂಡಸ್ವಾಮಿ** | 38 |
| ವಾರ್ತಾವಿಹಾರ <br> **ಕುಮಾರಸ್ವಾಮಿ ವಿರಕ್ತಮಠ** | 45 |
| ಕೃತಿ–ಸ್ವೀಕೃತಿ | 66 |

## ಮನವಿ

ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1975 | ಮೂರನೇ ಸಂಚಿಕೆ |
| 7. | 1976 | ಮೂರನೇ ಸಂಚಿಕೆ |
| 8. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

'ಮಹಾಪ್ರಸ್ಥಾನ' ಎನ್ನುವುದು ವ್ಯಾಸ ಭಾರತವನ್ನು ಅಧ್ಯಯನ ಮಾಡಿದವರಿಗೆ ಚಿರಪರಿಚಿತವಾದ ಪ್ರಸಂಗ. ಈ ಪ್ರಸಂಗ 'ಧರ್ಮೋ ರಕ್ಷತಿ ರಕ್ಷಿತಃ' ಎನ್ನುವ ತತ್ವಕ್ಕೆ ಬರೆದ ಮಹಾಭಾಷ್ಯವೇ ಆಗಿದೆ. ಜನನದಿಂದ ಮರಣದ ತನಕ ಮನುಷ್ಯನ ಬದುಕೇ ಒಂದು ಪ್ರಯಾಣ. ಸಾಧಕರ ಪಾಲಿಗಂತೂ ಇಡೀ ಬದುಕೇ ಪವಿತ್ರ ಯಾತ್ರೆಯಾಗಿರುತ್ತದೆ. ಡಿ.ವಿ.ಜಿ.ಯವರು ಇದನ್ನು ಬಹಳ ಸಾರವತ್ತಾಗಿ ಹೀಗೆ ಹೇಳಿದ್ದಾರೆ.

ಯಾತ್ರಿಕರು ನಾವು, ದಿವ್ಯಕ್ಷೇತ್ರವೀ ಲೋಕ
ಸತ್ರದಲಿ ನೇಮದಿಂದಿರಲಿಕೆಡೆಯುಂಟು
ರಾತ್ರಿ ಮೂರಾಯ್ತು ಹೊರಡೆನೆ ತೆರಳಿದೊಡೆ, ಪಾರು–
ಪತ್ಯದವ ಮೆಚ್ಚುವನು – ಮಂಕುತಿಮ್ಮ

ಇಂತಹ ಪಯಣ ಅಥವಾ ಯಾತ್ರೆಯ ಕೊನೆಯಲ್ಲಿ, ಬದುಕು ಇನ್ನು ಸಾಕು ಎನಿಸಿದಾಗ, ಮನಸ್ಸನ್ನು ಲೌಕಿಕದಿಂದ ವಿಮುಕ್ತಗೊಳಿಸಿ, ಪರತತ್ವದಲ್ಲಿ ಐಕ್ಯಗೊಳಿಸಿ, ದೇಹಮೋಹವನ್ನು ತ್ಯಜಿಸಿ ಹಿಂದಿರುಗಿ ಬಾರದ ಲೋಕದೆಡೆ ಪಯಣಿಸುವುದೇ ಮಹಾಪ್ರಸ್ಥಾನ. ಮಹಾಭಾರತದಲ್ಲಿ ಪಾಂಡವರಿಗೆ ಶ್ರೀಕೃಷ್ಣನ ಅವತಾರಾಂತ್ಯವಾದಾಗ, ತಮ್ಮ ಇಹದಲ್ಲಿನ ಇರುವಿಕೆಗೆ ಇನ್ನು ಯಾವ ಅರ್ಥವೂ ಇಲ್ಲ ಎನಿಸುತ್ತದೆ. ಸಹಜವಾಗಿಯೇ 'ಮಹಾಪ್ರಸ್ಥಾನದ'ದ ಆಸೆ ಅವರೊಳಗೆ ಮೊಳೆತು ಮರವಾಗಿ ಬೆಳೆಯುತ್ತದೆ. ಪಂಚಪಾಂಡವರು ಪತ್ನಿಸಮೇತರಾಗಿ ಹೊರಡುತ್ತಾರೆ. ಅವರನ್ನು ಒಂದು ಶ್ವಾನವೂ ಅನುಸರಿಸಿ ನಡೆಯುತ್ತದೆ.

ಮಹಾಪ್ರಸ್ಥಾನದ ಮಾರ್ಗಮಧ್ಯದಲ್ಲಿಯೇ ದ್ರೌಪದಿ ನಿಧನಳಾಗುತ್ತಾಳೆ. ಇದನ್ನು ನೋಡಿ ಭೀಮನಿಗೆ ಕುತೂಹಲವುಂಟಾಗಿ, ವಿನಾಕಾರಣ ಆಕೆ ಏಕೆ ನಿಧನ ಹೊಂದಿದಳು ಎಂದು ಧರ್ಮರಾಯನನ್ನು ಕೇಳುತ್ತಾನೆ. ಅದಕ್ಕೆ ಧರ್ಮಜ 'ಆಕೆ ಪ್ರೀತಿಯಲ್ಲಿ ಒಲವರ ಮಾಡಿದಳು; ಐದು ಜನರಿಗೂ ಪತ್ನಿಯಾದ ಆಕೆ, ಎಲ್ಲರನ್ನು ಸಮಾನವಾಗಿ ಪ್ರೀತಿಸದೆ, ಅರ್ಜುನನನ್ನು ಮಾತ್ರ ಹೆಚ್ಚು ಪ್ರೀತಿಸುತ್ತಿದ್ದಳು. ಈ ವಂಚನೆ ಅವಳ ಸಾವಿಗೆ ಕಾರಣವಾಯಿತು' ಎನ್ನುತ್ತಾನೆ.

ಮುಂದೆ ಹೋಗುತ್ತಾ ನಕುಲನೂ ಕುಸಿದುಬಿದ್ದು ಸತ್ತನು. ಮತ್ತೆ ಭೀಮನಿಂದ ಅದೇ ಪ್ರಶ್ನೆ. ಆಗ ಧರ್ಮತನಯ 'ನಕುಲನಿಗೆ ತನ್ನ ಸೌಂದರ್ಯದ ಬಗ್ಗೆ ಅಪಾರವಾದ

ಅಹಂಕಾರವಿತ್ತು. ಅದೇ ಅವನ ಪತನಕ್ಕೆ ಹೇತುವಾಯಿತು' ಎಂದು ಹೇಳುತ್ತಾನೆ. ಅನಂತರ ಸಹದೇವನದೂ ಇದೆ ಕಥೆಯಾಯಿತು. ಹಾಗೆಯೇ ಮುಂದೆ ಹೋಗುತ್ತಾ ಹೋಗುತ್ತಾ ಅರ್ಜುನನ ಸರದಿ ಬಂತು. ಅದನ್ನು ಕಂಡು ಭೀಮನಿಗೆ ಅತೀವ ದುಃಖವುಂಟಾಯಿತು. ಮತ್ತದೇ ಪ್ರಶ್ನೆ. 'ತನ್ನ ಪರಾಕ್ರಮದ ಬಗ್ಗೆ ಅರ್ಜುನನಲ್ಲಿ ಅತಿಯಾದ ಅಹಂಕಾರ ಮನೆ ಮಾಡಿತ್ತು. ತನ್ನ ಪರಾಕ್ರಮ ಈ ಲೋಕದ ಎಲ್ಲರನ್ನೂ ಒಮ್ಮೆಲೇ ಜಯಿಸಿಬಿಡಬಲ್ಲುದು ಎಂದು ಜಂಭಕೊಚ್ಚುತ್ತಿದ್ದ. ಆದರೆ ಹಾಗೆ ಅವನು ಮಾಡಲೇ ಇಲ್ಲ. ಆ ಸುಳ್ಳೇ ಇಂದಿನ ಈ ಸ್ಥಿತಿಗೆ ಕಾರಣವಾಯಿತು' ಎಂದ ಧರ್ಮಜ.

ಸ್ವಲ್ಪ ದೂರ ಹೋಗುವುದರಲ್ಲಿಯೇ ಸ್ವತಃ ಭೀಮನೇ ಕುಸಿದು ಬಿದ್ದ. ಹತ್ತಿರ ಬಂದ ಧರ್ಮರಾಯನನ್ನು ಕಂಡು 'ಅಣ್ಣಾ, ನನಗೇಕೆ ಇಂತಹ ಸಾವು ಬರುತ್ತಿದೆ' ಎಂದ. ಆಗ ಧರ್ಮ ಪುತ್ರ 'ನೀನು ಅಗತ್ಯಕ್ಕಿಂತ ಹೆಚ್ಚು ತಿನ್ನುತ್ತಿದ್ದೆ. ಅದರ ಅವಶ್ಯಕತೆ ಇರಲಿಲ್ಲ. ಜಗತ್ತಿನಲ್ಲಿ ಅನ್ನವಿಲ್ಲದೆ ಎಷ್ಟೋ ಜನ ಸಾಯುತ್ತಿದ್ದಾರೆ. ಅವರನ್ನು ಮರೆತು ಅಗತ್ಯವಿಲ್ಲದಿದ್ದರೂ ಬಾಯಿ ರುಚಿಗಾಗಿ ತಿನ್ನುವುದು, ಹಸಿದ ಜೀವಿಗಳಿಗೆ ಮಾಡಿದ ಅನ್ಯಾಯ' ಎಂದು ಹೇಳುತ್ತಾನೆ.

ಅಷ್ಟರಲ್ಲಿ ಒಬ್ಬನೇ ಉಳಿದ ಧರ್ಮರಾಯನನ್ನು ಸ್ವರ್ಗಕ್ಕೆ ಕರೆದೊಯ್ಯಲು ಸಾಕ್ಷಾತ್ ದೇವೇಂದ್ರನೇ ರಥವನ್ನು ತೆಗೆದುಕೊಂಡು ಬಂದ. ಆಗ ಧರ್ಮರಾಯ ನನ್ನ ಜೊತೆ ತನ್ನನ್ನು ಆಶ್ರಯಿಸಿ ಬಂದಿರುವ ಶ್ವಾನಕ್ಕೂ ಅವಕಾಶ ಕೊಡಬೇಕೆಂದು ಕೋರಿಕೊಂಡ. ಆಗ ಇಂದ್ರ, ಸ್ವರ್ಗಕ್ಕೆ ಶ್ವಾನಗಳಿಗೆ ಪ್ರವೇಶವಿಲ್ಲ ಎಂದಾಗ, ಧರ್ಮರಾಯ ಆಶ್ರಯ ಬಯಸಿ ಬಂದವರನ್ನು ತ್ಯಜಿಸಿ ನಾನೊಬ್ಬನೆ ಬರುವುದಿಲ್ಲ ಅದು ಸ್ವಾರ್ಥವಾಗುತ್ತದೆ ಎಂದು ಹೇಳುತ್ತಾನೆ. ಇಂದ್ರ ಧರ್ಮರಾಜನ 'ಧರ್ಮಪ್ರಜ್ಞೆ'ಗೆ ತಲೆದೂಗಿದ. ಈಗ ಅಲ್ಲಿ 'ಶ್ವಾನ' ಇರಲಿಲ್ಲ, ಆ ಸ್ಥಾನದಲ್ಲಿ 'ಧರ್ಮ' ನಿಂತಿತ್ತು.

ಸ್ವರ್ಗಪ್ರಾಪ್ತಿಯ ಸಂದರ್ಭದಲ್ಲಿಯೂ 'ಆಶ್ರಿತ' ರಕ್ಷಣೆಗಾಗಿ ಯುಧಿಷ್ಠಿರ ಸ್ವರ್ಗವನ್ನೇ ತಿರಸ್ಕರಿಸಿದ. ಅದಕ್ಕೇ ಅವನು 'ಧರ್ಮರಾಯ' ಎನಿಸಿಕೊಂಡದ್ದು. ಮನುಷ್ಯ ಜೀವನದ ಮಹಾಪಯಣದಲ್ಲಿ ತೋಳ್ಬಲ, ರೂಪ, ಅಧಿಕಾರ, ಹಣ, ಅಂತಸ್ತು, ಅವಕಾಶ ಇಂತಹವು ಹೇಗೋ ಬಂದು ಕಾಲಕ್ರಮೇಣ ಹಾಗೆಯೇ ಮರೆಯಾಗಿ ಹೋಗುತ್ತವೆ. ಕೆಲವೊಮ್ಮೆ ಇವುಗಳೇ ಸುದೀರ್ಘ ಜೀವನ ಪಯಣವನ್ನು ಮೊಟಕುಗೊಳಿಸಿಬಿಡುತ್ತವೆ. ಆದರೆ ಇವುಗಳೆಲ್ಲದರ ಬೆನ್ನೆಲುಬಾಗಿ 'ಧರ್ಮ' ಇದ್ದರೆ, ಅದು ನಿರಂತರವಾಗಿ ಕಾಪಾಡುವ ಶಕ್ತಿಯಾಗುತ್ತದೆ. ಆ ಕಾರಣಕ್ಕೆ ಇಂದಿಗೂ ಎಂದಿಗೂ ಪ್ರಸ್ತುತವಾದ ಅಮೃತನುಡಿ ಎಂದರೆ 'ಧರ್ಮೋ ರಕ್ಷತಿ ರಕ್ಷಿತಃ'. ಧರ್ಮರಾಯನ ಬದುಕೇ ಇದಕ್ಕೆ ಉದಾಹರಣೆ. ಇದು ಎಲ್ಲರ ನಿತ್ಯ ಮಂತ್ರವಾಗಲಿ, ಎಲ್ಲರೂ ಪ್ರಸ್ತುತ ಕಷ್ಟದ ದಿನಗಳಿಂದ ಮುಕ್ತಿ ಪಡೆದು, ಶುಭದ ನಾಳೆಗಳನ್ನು ಕಾಣುವಂತಾಗಲಿ ಎಂದು ಹಾರೈಸುತ್ತೇವೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

**ಕೆ**ಲವು ದಿನಗಳ ಹಿಂದೆ ತಮಿಳುನಾಡಿನ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಮಂತ್ರಿಗಳು ನಾಡಿನ ಮುಜರಾಯಿ ಇಲಾಖೆಯ ಅಡಿಯಲ್ಲಿ ಬರುವ ಸುಮಾರು ಮೂವತ್ತಾರು ಸಾವಿರ ದೇವಸ್ಥಾನಗಳಿಗೆ ಮಹಿಳೆಯರನ್ನು ಅರ್ಚಕರನ್ನಾಗಿ ನೇಮಿಸಲಾಗುವುದು ಎಂದು ಘೋಷಣೆ ಮಾಡಿ, ಧಾರ್ಮಿಕ ವಲಯದಲ್ಲಿ ಬಹುದೊಡ್ಡ ಸಂಚಲನವನ್ನು ಉಂಟುಮಾಡಿದ್ದಾರೆ. ಇದು ನಿಜಕ್ಕೂ ಒಂದು ಕ್ರಾಂತಿಕಾರಕ ಹೆಜ್ಜೆಯೇ ಆಗಿರುವುದರಿಂದ ಇದನ್ನು ಎಲ್ಲರೂ ಸ್ವಾಗತಿಸಲೇಬೇಕು. ಆದರೆ ಈ ಪ್ರಕ್ರಿಯೆ ನಾವು ಅಂದುಕೊಂಡಷ್ಟು ಸುಲಭವಾಗಿ ಸಾಧಿತವಾಗುವ ಅಂಶವಾಗಿಲ್ಲ. ಸಂವಿಧಾನ, ಕಾನೂನು, ದಂಡಸಂಹಿತೆ ಇವುಗಳು ಏನೇ ಇದ್ದರೂ 'ಧಾರ್ಮಿಕ ಕ್ಷೇತ್ರ' ಎನ್ನುವುದು ಅಷ್ಟು ಸುಲಭವಾಗಿ ಒಳ ಪ್ರವೇಶಿಸಿ ಹೊರಬರಲಾಗದ ಒಂದು ಚಕ್ರವ್ಯೂಹ, ದುರ್ಗಮ ಕಾಡು ಎಂದರೆ ತಪ್ಪಾಗಲಾರದು.

ಸಾಮಾಜಿಕವಾದ ಯಾವುದೇ ಬದಲಾವಣೆಯನ್ನು ಒಂದು ಹಂತದಲ್ಲಿ 'ಆಯಿತು' ಎಂದು ಸ್ವೀಕರಿಸುವ ಸಮುದಾಯ ಧರ್ಮ, ದೇವರು, ಧಾರ್ಮಿಕ ಕೇಂದ್ರಗಳು ಮುಂತಾದುವುಗಳಲ್ಲಿ ಮಾಡುವ ಒಂದು ಸಣ್ಣ ಬದಲಾವಣೆ, ಪರ್ಯಾಯವನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಏನೋ ಆಗಿಹೋಯಿತು, ಏನೋ ಆಗಿಬಿಡುತ್ತದೆ ಎನ್ನುವ ಸ್ವಕಪೋಲಕಲ್ಪಿತ ಊಹೆಗಳ ಬೆನ್ನುಹತ್ತಿ ಒಂದು ರೀತಿಯ ಉನ್ಮಾದಕ್ಕೆ ಒಳಗಾಗುವ ಸಂಭವವೇ ಹೆಚ್ಚು. ಆದ್ದರಿಂದಲೇ ಎಂತಹ ಬುದ್ಧಿಜೀವಿ, ಎದೆಗಾರಿಕೆಯುಳ್ಳವ, ವಿಚಾರವಾದಿ ಎನಿಸಿಕೊಂಡ ಜನನಾಯಕರೂ, ಧರ್ಮಸಂಬಂಧಿ ವಿಷಯ ಬಂದಾಗ ನುಗ್ಗಿ ನಡೆಯಲು ಹಿಂಜರಿಯುತ್ತಾರೆ. ಯಥಾಸ್ಥಿತಿ (ಸ್ಥಾವರ) ವಾದವನ್ನೇ ಅಪ್ಪಿಕೊಳ್ಳುತ್ತಾರೆ. ಕಾರಣ 'ಸ್ಥಾನಭಯ', ಹಾಗೆಯೇ ಸಾಮಾನ್ಯರೂ ಇದನ್ನು ಗಟ್ಟಿ ಧ್ವನಿಯಲ್ಲಿ ಪ್ರಶ್ನೆ ಮಾಡುವುದಿಲ್ಲ; ಕಾರಣ ಇವರಿಗೆ 'ಪ್ರಾಣಭಯ'. ಆದ್ದರಿಂದ ರಾಜಕೀಯ, ಸಾಮಾಜಿಕ ಸ್ಥಿತ್ಯಂತರಗಳು ಏನೇ ಆದರೂ, ಈ ಕ್ಷೇತ್ರ ಮಾತ್ರ ಒಂದು ಹುಲ್ಲುಕಡ್ಡಿಯಷ್ಟು ಅಲುಗದೆ ಹಾಗೆಯೇ ಉಳಿದುಕೊಂಡು ಬಂದಿದೆ. 'ಆರು ಮುನಿದು ನಮ್ಮನೇನು ಮಾಡುವರು' ಎನ್ನುವ ಬಸವಣ್ಣನವರ ಮನಃಸ್ಥಿತಿ ಈ ದೃಷ್ಟಿಯಿಂದ ಬಹು ಕ್ರಾಂತಿಕಾರಕವಾದುದು. ಇಲ್ಲಿ 'ಆರು' ಎನ್ನುವುದು ಪ್ರಭುತ್ವ ಮಾತ್ರವಲ್ಲ, ದೇವರನ್ನೂ ಕುರಿತದ್ದಾಗಿದೆ. ನನ್ನ ನಡೆ

ಆನೆಯ ನಡೆಯಾದಾಗ ಯಾವುದೇ ಪ್ರತಿಕ್ರಿಯೆಗಳಿಗೆ ಹೆದರುವ ಅವಶ್ಯಕತೆ ಇರಲಾರದು. ಆದರೆ ಈ ತೆರನ ಧೀಶಕ್ತಿ ಇಲ್ಲದವರು ಸಮುದಾಯದ ನಂಬಿಕೆಗಳ ಜೇನುಗೂಡಿಗೆ ಕೈ ಹಾಕಲು ಹೆದರುತ್ತಾರೆ. ಅನೇಕ ಸಂದರ್ಭಗಳಲ್ಲಿ ಇಂತಹ ವಿಷಯಗಳ ಬಗ್ಗೆ ಸೂಕ್ತ ನ್ಯಾಯದಾನ ಮಾಡುವ ಅವಕಾಶವಿದ್ದರೂ, ನ್ಯಾಯಾಧೀಶರೇ ಇಂತಹ ಖಟ್ಲೆಗಳಿಂದ ಹಿಂದೆ ಸರಿದ ಘಟನೆಗಳೂ ಇವೆ.

ಇಂತಹ ಚರಿತ್ರೆಯಿರುವ ನಮ್ಮ ವ್ಯವಸ್ಥೆಯಲ್ಲಿ ತಮಿಳುನಾಡಿನ ಮುಜರಾಯಿ ಇಲಾಖೆಯ ಸಚಿವರ ಕ್ರಮ ನಿಜಕ್ಕೂ ದಿಟ್ಟತನದ್ದೇ ಆಗಿದೆ. ನಮ್ಮ ತಮಿಳು ಬಾಂಧವರು ಕೆಲವು ವಿಷಯಗಳಲ್ಲಿ ತಮ್ಮ ಭಾವುಕತೆಗೆ ಹೆಸರಾಗಿದ್ದರೂ, ಬಹು ದೊಡ್ಡ ಕ್ರಾಂತಿಕಾರಕ ಗುಣಗಳಿಗೂ ಹೆಸರಾಗಿದ್ದಾರೆ. ಪೆರಿಯಾರ ರಾಮಸ್ವಾಮಿಯವರು ಹುಟ್ಟುಹಾಕಿದ ಪುರೋಹಿತ ವಿರೋಧಿ ಚಳವಳಿ, ಭೂ ಒಡೆತನದ ಚಳವಳಿ, ದ್ರಾವಿಡರ ಅಸ್ಮಿತೆಗೆ ಸಂಬಂಧಪಟ್ಟ ಚಳವಳಿ (ಡಿಎಂಕೆ ರಾಜಕೀಯ ಪಕ್ಷವೇ ಇದಕ್ಕೆ ಉದಾಹರಣೆ) ಇವುಗಳು ನಿಜಕ್ಕೂ ಚಾರಿತ್ರಿಕ ದಾಖಲೆಗಳೇ ಆಗಿವೆ. ತಮಿಳು ಬಾಂಧವರ ಪ್ರತಿಭಟನೆಗಳು ಇಲ್ಲದಿದ್ದರೆ, ಕೇಂದ್ರ ಸರ್ಕಾರಗಳು ಕೆಲವು ವಿಷಯಗಳಲ್ಲಿ ದಕ್ಷಿಣ ಭಾರತವನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವ ರೀತಿಯಲ್ಲಿಯೇ ಇಟ್ಟಿರುತ್ತಿದ್ದವು.

ಒಂದು ಕಾಲಘಟ್ಟದಲ್ಲಿ ಭರತಖಂಡ ಸ್ತ್ರೀಯರಿಗೆ ಧಾರ್ಮಿಕ ವಿಧಿವಿಧಾನಗಳಲ್ಲಿ ಭಾಗವಹಿಸುವ ಎಲ್ಲ ರೀತಿಯ ಸ್ವಾತಂತ್ರ್ಯವನ್ನು ಕೊಟ್ಟಿದ್ದರೂ, ವಿಧಿಗಳನ್ನು ನೇರವಾಗಿ ನೆರವೇರಿಸುವ ಅವಕಾಶವನ್ನು ಕೊಟ್ಟಿರಲಿಲ್ಲ. ಇದಕ್ಕೆ ಆ ಕಾಲಘಟ್ಟದ ಚಿಂತನೆಯ ಹಿನ್ನೆಲೆಯಲ್ಲಿ ಅದರದ್ದೇ ಆದ ತಾರ್ಕಿಕ ಕಾರಣಗಳೂ ಇದ್ದಿರಬಹುದು. ಒಂದು ಸಮಾಜದ ಸಾಂಸ್ಕೃತಿಕ, ಧಾರ್ಮಿಕ ಬದುಕಿನ ಚಲನೆಯ ಕ್ರಮದಲ್ಲಿ ಇವೆಲ್ಲಾ ಇದ್ದದ್ದೆ. ಉದಾ: ಬುದ್ಧ ಸಂಘವನ್ನು ಪ್ರಾರಂಭಿಸಿದ ಆರಂಭದ ದಿನಗಳಲ್ಲಿ, ತನ್ನ ಪತ್ನಿಗೇ ಅದರ ಸದಸ್ಯತ್ವವನ್ನು ನಿರಾಕರಿಸಿದ. ಮುಂದೆ ಅವರನ್ನು ಸಂಘಕ್ಕೆ ಸೇರ್ಪಡೆಗೊಳಿಸಿಕೊಳ್ಳುವ ಸಂದರ್ಭ ಒದಗಿದಾಗಲೂ, ನಮ್ಮ ಸಂಘದ ಆಯಸ್ಸು ಕಡಿಮೆಯಾಯಿತು ಎನ್ನುವ ಭಾವನೆಯೇ ಅವನಲ್ಲಿ ಇತ್ತು. ಇದು ಸರಿಯೇ ತಪ್ಪೇ ಎನ್ನುವುದಕ್ಕಿಂತ ಹೆಚ್ಚಾಗಿ ಆ ಕಾಲಮಾನದ ಚಿಂತನೆಗಳಿಗೆ ಇದ್ದ ಹಿನ್ನೆಲೆಯನ್ನು ನಾವು ಪರಿಭಾವಿಸಬೇಕು. ಮನುಧರ್ಮಶಾಸ್ತ್ರದ ಕಥೆಯೂ ಹೀಗೆಯೇ. ಅದರ ಬಗ್ಗೆ ಇಂದಿನ ನಮ್ಮ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ನೇತ್ಯಾತ್ಮಕವಾಗಿ ಮಾತನಾಡುವುದು ಸೂಕ್ತವಲ್ಲ. ಒಂದು ಚಾರಿತ್ರಿಕ ಸಂದರ್ಭದ ಒತ್ತಡದಲ್ಲಿ ಅಂತಹ ಕೆಲವು ವಿಧಿ ನಿಷೇಧಗಳು ಹೇರಲ್ಪಟ್ಟಿರುತ್ತದೆ. ಪ್ರಪಂಚದ ಶ್ರೇಷ್ಠ ಸಂವಿಧಾನ ಎಂದು ನಾವು ಸ್ವೀಕರಿಸಿರುವ ನಮ್ಮ ಸಂವಿಧಾನ ಕೇವಲ ಎಪ್ಪತ್ತು ವರ್ಷಗಳಲ್ಲಿ ನೂರಕ್ಕೂ ಹೆಚ್ಚು ಬಾರಿ ತಿದ್ದುಪಡಿಗೆ ಒಳಗಾಯಿತು. ಡಾ. ಅಂಬೇಡ್ಕರ್‌ರವರು ಅದನ್ನು ರಚಿಸಿದಾಗ ಇದ್ದ ನಮ್ಮ ಸಾಮಾಜಿಕ

ಸಮಸ್ಯೆಗಳ ಸ್ವರೂಪ ಇಷ್ಟು ಸಂಕೀರ್ಣಗೊಂಡಿರಲಿಲ್ಲ. ನಮ್ಮ ಸಂವಿಧಾನದಲ್ಲಿ ಅದನ್ನು ಸೇರಿಸಬೇಕಿತ್ತು, ಇದನ್ನು ಸೇರಿಸಬೇಕಿತ್ತು ಎಂದು ಇಂದು ನಾವು ಮಾತನಾಡುವುದು ಎಷ್ಟರಮಟ್ಟಿಗೆ ಸರಿ? ಸಮಾಜ ಸಂಕೀರ್ಣಗೊಂಡಂತೆ, ಸಮಸ್ಯೆಯ ಸ್ವರೂಪಗಳು ಬೇರೆ ಬೇರೆ ಆಯಾಮದಲ್ಲಿ ಎದುರಾದಂತೆ, ಸಂವಿಧಾನಕ್ಕೆ ತಿದ್ದುಪಡಿ ಅನಿವಾರ್ಯ ವಾಯಿತು. ನಮ್ಮ ಎಲ್ಲ ಶಾಸ್ತ್ರ, ಸಂಪ್ರದಾಯಗಳನ್ನು ನಾವು ಈ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ.

ಈಗ ಕಾಲ ಬದಲಾಗಿದೆ, ಜ್ಞಾನದ ಅನಂತ ಶಾಖೆಗಳು ಮುಕ್ತವಾಗಿ ತೆರೆದುಕೊಂಡಿವೆ. ಎಲ್ಲವನ್ನೂ ವಿಚಾರದ ಒರೆಗಲ್ಲಿಗೆ ಹಚ್ಚಿ ಸ್ವೀಕರಿಸುವ ಬೌದ್ಧಿಕ ಶಕ್ತಿ ನಮ್ಮ ಯುವ ಸಮುದಾಯದಲ್ಲಿ ಬೆಳೆಯುತ್ತಿದೆ. ಈ ಶಕ್ತಿಗೆ ಜಾತಿ, ಮತ, ಧರ್ಮ, ಪ್ರದೇಶ, ಲಿಂಗತಾರತಮ್ಯ ಈ ಯಾವುದೂ ಅಡ್ಡಿ ಬಂದಿಲ್ಲ. ನಾವು ಯಾವ ಒಂದು ಸಮುದಾಯವನ್ನು ಜ್ಞಾನಕ್ಕೆ ಹಕ್ಕುದಾರರು, ಪೋಷಕರು, ಪ್ರಚಾರಕರು ಎಂದು ಭಾವಿಸಿದ್ದೇವೋ, ಈಗ ಅದು ಪಲ್ಲಟಗೊಂಡಿದೆ. ಆಧ್ಯಾತ್ಮ ಈಗ ಅಂತರಂಗಕ್ಕಿಂತ ಹೆಚ್ಚಾಗಿ ಬಹಿರಂಗ ಪ್ರದರ್ಶನದ ವಸ್ತುವಾಗಿದೆ. ದೇಗುಲಗಳೂ ಲಾಭದಾಯಕ ಉದ್ಯಮದ ಸ್ಥಾನವನ್ನು ಪಡೆದುಕೊಳ್ಳ ತೊಡಗಿವೆ. ಧರ್ಮದರ್ಶಿಗಳಾಗಲೂ ಪೈಪೋಟಿಯಿದೆ. ಆ ಕಾರಣಕ್ಕಾಗಿಯೇ ದೇವಸ್ಥಾನದ ಹುಂಡಿ ಹಣವನ್ನು ಎಣಿಸುವ ಸಂದರ್ಭದಲ್ಲಿ ಭಕ್ತಿ, ನಂಬಿಕೆ, ಆತ್ಮಸಾಕ್ಷಿಯ ಸ್ಥಾನದಲ್ಲಿ ಸಿಸಿ ಕ್ಯಾಮರಗಳು ಬಂದು ಕೂತಿವೆ.

ಎಲ್ಲವೂ ಹೀಗೆ ಅಯೋಮಯವಾಗಿದ್ದರೂ ಎಲ್ಲೋ ಒಂದು ಕಡೆ ಈ ಕ್ಷೇತ್ರದಲ್ಲಿ ಬದಲಾವಣೆ ತರಲು ಇಡೀ ವ್ಯವಸ್ಥೆಯೇ ಹೆದರುತ್ತದೆ. ಅದರಲ್ಲೂ ಅಧಿಕಾರಕ್ಕೆ ಕೊನೆ ಉಸಿರಿನ ತನಕವೂ ಅಂಟಿಕೊಂಡೇ ಇರಬೇಕು ಎನ್ನುವವರಂತೂ, ಯಾವುದೇ ಕಿಂಚಿತ್ ಬದಲಾವಣೆಯನ್ನು ನಿದ್ದೆಯಲ್ಲೂ ಕನವರಿಸುವುದಿಲ್ಲ. ಒಂದು ಪಕ್ಷ ಏನಾದರೂ ಬದಲಾವಣೆ ತಂದ ಸಂದರ್ಭಕ್ಕೆ ಸರಿಯಾಗಿ ಏನಾದರೂ ಒಂದು ಪ್ರಾಕೃತಿಕ ಅವಘಡ ಸಂಭವಿಸಿದರೆ, ಅದಕ್ಕೂ ಇದಕ್ಕೂ ತಳುಕುಹಾಕಿ, ಜನ ಜರ್ಝರಿತರಾಗುತ್ತಾರೆ. (ತಮಿಳುನಾಡಿನಲ್ಲಿ ಕೋವಿಡ್ ಅಮ್ಮನ ದೇವಸ್ಥಾನ ಈಗಾಗಲೇ ನಿರ್ಮಾಣಗೊಂಡಿರು ವುದು ಕಾಕತಾಳೀಯವೇನು ಅಲ್ಲ).

ನಮ್ಮ ಪಕ್ಕದ ರಾಜ್ಯದ ದೇವಸ್ಥಾನವೊಂದರಲ್ಲಿ ದೇವತೆಯ ವಿಗ್ರಹ, ಪ್ರತಿ ಮಾಸಕ್ಕೊಮ್ಮೆ ಋತುಸ್ರಾವಕ್ಕೆ ಒಳಗಾಗುತ್ತದಂತೆ. ಆಕೆಗೆ ಉಡಿಸಿದ ಸೀರೆಯನ್ನು ಮರುದಿನ ತೆಗೆದಾಗ ಅದರಲ್ಲಿ ರಕ್ತದ ಕಲೆಗಳು ಇರುತ್ತವಂತೆ. ಆ ಸೀರೆಯನ್ನು ಯಾರು ತಮ್ಮ ಮನೆಯಲ್ಲಿ ಇಟ್ಟು ಪೂಜಿಸುತ್ತಾರೋ ಅವರಿಗೆ ಎಲ್ಲ ಶುಭಗಳು ಉಂಟಾಗುತ್ತವಂತೆ. ಆದ್ದರಿಂದಲೇ ಆ ಸೀರೆಗೆ ತುಂಬಾ ಬೇಡಿಕೆ ಬಂದು ಅದನ್ನು ಪರಿಹರಿಸಿಕೊಳ್ಳಲು ಹರಾಜು ಪ್ರಕ್ರಿಯೆ

ಪ್ರಾರಂಭವಾಯಿತು. ಹೆಚ್ಚು ಬಿಡ್ಡುದಾರರಿಗೆ ಆ ಸೀರೆ ವಿತರಣೆಯಾಗುತ್ತಿತ್ತು. ಆದರೆ ಒಮ್ಮೆ ಅದನ್ನು ಬಿಡ್ ಮಾಡಲಿಲ್ಲ. ಏಕೆಂದರೆ ಅದು ಈ ರಾಷ್ಟ್ರದ ಉನ್ನತ ಮಟ್ಟದ ರಾಜಕೀಯ ಸ್ಥಾನದಲ್ಲಿದ್ದ ವ್ಯಕ್ತಿಯೊಬ್ಬರಿಗೆ ಬೇಕಾಗಿತ್ತು. ಋತುಚಕ್ರಕ್ಕೆ ಒಳಗಾದ ಮಹಿಳೆಯನ್ನು ಮನೆಯಾಚೆ ಕೂರಿಸುವುದು; ದೇವತೆಯ ಋತುಚಕ್ರದ ಸೀರೆಯನ್ನು ದೇವರ ಕೋಣೆಯಲ್ಲಿಟ್ಟು ಪೂಜಿಸುವುದು! ಇದು ನಮ್ಮ ದೇಶದಲ್ಲಿನ ನಂಬಿಕೆಯ ಪರಿಸ್ಥಿತಿ (ಬೇರೆ ಬೇರೆ ದೇಶಗಳಲ್ಲಿಯೂ ಅವರದ್ದೇ ಆದ ಇಂತಹ ನಂಬಿಕೆಗಳು ಇರುತ್ತವೆ).

ಕರ್ನಾಟಕದ ಚಿತ್ರನಟಿಯೋರ್ವರು ಶಬರಿಮಲೆ ದೇವಸ್ಥಾನದಲ್ಲಿ ಅಯ್ಯಪ್ಪಸ್ವಾಮಿ ವಿಗ್ರಹವನ್ನು ನಾನು ಸ್ಪರ್ಶಿಸಿದೆ ಎಂದು ಕೊಟ್ಟ ಹೇಳಿಕೆ ಏನೆಲ್ಲ ತಿರುವು ಪಡೆದು ಅತಾರ್ಕಿಕ ಅಂತ್ಯ ಪಡೆಯಿತು ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಹಾಗೆಯೇ ಅಲ್ಲಿಗೆ ಮಹಿಳೆಯರ ಪ್ರವೇಶ ವಿಷಯವೂ ಸಹ ಏನೆಲ್ಲ ಗೊಂದಲಗಳನ್ನು ಸೃಷ್ಟಿಸಿ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯಾದದ್ದು ಜಗಜ್ಜಾಹೀರಾಗಿದೆ. ಹಾಗೆ ನೋಡಿದರೆ ಮಹಿಳಾ ಅರ್ಚಕಿಯರ ನೇಮಿಸುವಿಕೆಯನ್ನು ಬಹಳ ಹಿಂದೆಯೇ ಮಹಾರಾಷ್ಟ್ರ ಸರ್ಕಾರ ಜಾರಿಗೆ ತಂದಿದೆ. ನಮ್ಮಲ್ಲಿಯೂ ಮಂಗಳೂರಿನ ಕುದ್ರೋಳಿ ದೇವಸ್ಥಾನ ಸಂಕೀರ್ಣದ ಒಂದು ದೇಗುಲಕ್ಕೆ ವಿಧವೆಯೊಬ್ಬರನ್ನು ಅರ್ಚಕಿಯಾಗಿ ನೇಮಿಸಿದ ಕೀರ್ತಿ ಮಾಜಿ ಕೇಂದ್ರ ಸಚಿವರಾದ ಜನಾರ್ಧನ ಪೂಜಾರಿಯವರಿಗೆ ಸಲ್ಲುತ್ತದೆ.

ಇಷ್ಟೆಲ್ಲ ಗೊಂದಲಗಳ ಮೂಲ ಇರುವುದು ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಎರಡನೆಯ ದರ್ಜೆಯ ಪ್ರಜೆಯಾಗಿ, ಅಸ್ಪೃಶ್ಯಳಂತೆ ಕಂಡದ್ದೇ ಆಗಿದೆ. ಇದು ದಲಿತ ಸಮುದಾಯಕ್ಕೂ ಅನ್ವಯವಾಗುವ ಮಾತು. (ಈ ಸಮುದಾಯವು ಈ ವೃತ್ತಿಯಿಂದ ಈಗಲೂ ವಂಚಿತವಾಗಿದೆ.) ಈ ದೃಷ್ಟಿಯಿಂದ ತಮಿಳುನಾಡಿನ ಮುಜರಾಯಿ ಇಲಾಖೆಯ ಮಂತ್ರಿಗಳ ಈ ದಿಟ್ಟ ನಿಲುವು ಸ್ವಾಗತಾರ್ಹವಾದುದು.

ನಮ್ಮ ಶರಣರು ಇಂತಹ ಕ್ರಾಂತಿಕಾರಕ ಬದಲಾವಣೆಗಳಿಗೆ ಅಂದೇ ನಾಂದಿ ಹಾಡಿದ್ದಾರೆ. ಶರಣ ಸಂಸ್ಕೃತಿಯನ್ನು ಆರಾಧಿಸುವ ಎಲ್ಲರೂ ಇಂತಹ ಒಂದು ನಿಲುವನ್ನು ಮುಕ್ತ ಮನಸ್ಸಿನಿಂದ ಪ್ರೋತ್ಸಾಹಿಸಬೇಕಾಗಿದೆ. ನಮ್ಮ ಮಹಿಳೆಯರೂ ಸಹ ನಿರ್ಭಿಡೆಯಿಂದ ಇಂತಹುದನ್ನು ಸವಾಲಾಗಿ ಸ್ವೀಕರಿಸುವುದರ ಜೊತೆಗೆ ಅಲ್ಲಿಯೆ ವಿರಮಿಸದೆ 'ಅಲ್ಲಿರುವ ಸಂಗಯ್ಯ ಇಲ್ಲಿಲ್ಲವೆ' ಎನ್ನುವ ಎತ್ತರಕ್ಕೂ ಏರಬೇಕಾಗಿದೆ.

**ಮಲೆಯೂರು ಗುರುಸ್ವಾಮಿ**

**ಸಂಪಾದಕ**

# ವಿಶ್ವಭ್ರಾತೃತ್ವ

ಬಸವಂ ಭಕ್ತಿಗೆ ಮೂಲಂ
ಬಸವಂ ಕಾಲಂಗೆ ಕಾಲನನುಪಮಶೀಲಂ।
ಬಸವಂ ಜಂಗಮಲೋಲಂ
ರಕ್ಷಿಪುದೆನ್ನ ಬಸವಾ ಸಂಗನಬಸವಾ॥

2021ನೇ ಸಾಲಿನ ಬಸವ ಜಯಂತಿಯನ್ನು ಉತ್ತರ ಅಮೆರಿಕ ವೀರಶೈವ ಸಮಾಜ, ಬೆಂಗಳೂರಿನ ಬಸವ ಸಮಿತಿಗಳು ಇತರೆ 20 ಸಂಸ್ಥೆಗಳ ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ವಿಶೇಷ ರೀತಿಯಲ್ಲಿ ಜಾಗತಿಕ ಮಟ್ಟದಲ್ಲಿ ಆಚರಿಸುತ್ತಿರುವುದು ಸಂತಸದ ವಿಷಯ. 'ವಿಶ್ವಭ್ರಾತೃತ್ವ'ವೆಂಬ ಪರಿಕಲ್ಪನೆಯನ್ನು ಆಯ್ಕೆ ಮಾಡಿರುವುದು ಬಸವೇಶ್ವರರು ಪ್ರತಿಪಾದಿಸುದುದಕ್ಕೆ ಸಮಂಜಸವಾಗಿದೆ.

ಸಾಧುಸಂತರ ಶ್ರದ್ಧಾಭಕ್ತಿಯ ಜಯಂತಿ ಆಚರಣೆ ಮಾನವನ ಮನಸ್ಸನ್ನು ಒಂದು ಉನ್ನತ ಚಿಂತನೆಯ ಕಡೆಗೆ ಕೊಂಡೊಯ್ಯುತ್ತದೆ. ಜಾತಿ-ವರ್ಗಗಳನ್ನು ಮೀರಿ ಜಯಂತಿಗಳನ್ನು ಉತ್ಸಾಹ ಹಾಗೂ ಸಂಭ್ರಮದಿಂದ ಆಚರಿಸುವುದು ಸಂಪ್ರದಾಯವಾಗಿದೆ. ಬದುಕಿನ ಗುರಿ ಹಾಗೂ ಮುಕ್ತಿಯ ಪರಿಯನ್ನು ಕಂಡುಕೊಳ್ಳುವಲ್ಲಿ ಬಸವೇಶ್ವರರು ಇತರ ಸಾವಿರಾರು ಸಂತರಿಗಿಂತ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಲೌಕಿಕ ಜಗತ್ತಿನಲ್ಲಿ ಗಟ್ಟಿಯಾಗಿ ನಿಂತುಕೊಂಡೇ ಅಲೌಕಿಕ ಜಗತ್ತಿನಲ್ಲಿ ವಿಹರಿಸಲು ಸಾಧ್ಯ ಎಂದು ತೋರಿಸಿಕೊಟ್ಟ ಬಸವೇಶ್ವರರು ಅಗ್ರಗಣ್ಯ ಸಂತರಲ್ಲೊಬ್ಬರಾಗಿದ್ದಾರೆ. ಬಸವೇಶ್ವರರು ಮನುಕುಲದ ದಾರಿದೀಪವಾಗಿ, ವಿಶ್ವದ ದೈವೀ ಸಮೃದ್ಧಿ ಹಾಗೂ ಅನನ್ಯ ಭಕ್ತಿಯ ಸಾಗರವಾಗಿ ಕಂಡುಬರುತ್ತಾರೆ. ಇಡೀ ಜಗತ್ತಿನ ಕಲ್ಯಾಣಕ್ಕಾಗಿ ಸರಳ ಹಾಗೂ ಪರಿಶುದ್ಧ ಬದುಕನ್ನು ಮತ್ತು ಧರ್ಮ ತತ್ವಗಳ ಬುನಾದಿಯ ಮೇಲೆ ಸಾಮಾಜಿಕ ಸಂರಚನೆಯನ್ನು ಕಟ್ಟುವ ಪ್ರಯತ್ನ ಮಾಡಿದ್ದಾರೆ. ಭಕ್ತಿಮಾರ್ಗದಲ್ಲಿ ನಡೆದರೆ, ಸಮಾಜದ ಎಲ್ಲಾ ವರ್ಗದ ಜನರಿಗೂ ದೈವಸಾಕ್ಷಾತ್ಕಾರ ಸಾಧ್ಯ ಎಂಬುದನ್ನು ಸಮರ್ಥವಾಗಿ ತೋರಿಸಿಕೊಟ್ಟಿದ್ದಾರೆ.

---

15 ಮೇ 2021 ರಂದು ಉತ್ತರ ಅಮೆರಿಕ ವೀರಶೈವ ಸಮಾಜ ಸೇರಿದಂತೆ ಇತರೆ ಸಂಸ್ಥೆಗಳ ಸಹಯೋಗದೊಂದಿಗೆ ಆನ್‌ಲೈನ್ ಮೂಲಕ ನಡೆದ 'ಅಂತಾರಾಷ್ಟ್ರೀಯ ಬಸವ ಜಯಂತಿ' ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ನೀಡಿದ ದಿವ್ಯ ಸಂದೇಶ.

ಈ ವರ್ಷದ ವಿಷಯ 'ವಿಶ್ವಭ್ರಾತೃತ್ವ' ನಿಜಕ್ಕೂ ಒಂದು ಸ್ಫೂರ್ತಿದಾಯಕ ಪರಿಕಲ್ಪನೆ. ಇದು ನಮ್ಮ ಪ್ರಾಚೀನ ಚಿಂತನೆಯಾದ 'ವಸುಧೈವ ಕುಟುಂಬಕಂ' ತತ್ವಕ್ಕೆ ಪೂರಕವಾಗಿದೆ. ಪ್ರಬುದ್ಧ ಚಿಂತಕರಾಗಿ ಬಸವೇಶ್ವರರು ಸಕಲ ಜೀವಿಗಳಲ್ಲಿ ಸಮಾನತೆ ಯನ್ನು ಪ್ರತಿಪಾದಿಸಿದರು. ಪ್ರಕೃತಿಯ ಸೃಷ್ಟಿಯಲ್ಲಿ ಮೇಲು–ಕೀಳು ಎಂಬುದಾವುದೂ ಇಲ್ಲ, ಸೃಷ್ಟಿಯ ಪ್ರತಿಯೊಂದು ಅಂಶವೂ ತನ್ನ ಅಸ್ತಿತ್ವದ ಪರಿಧಿಯಲ್ಲಿ ಉತ್ತಮವೇ; ಆದರೆ ಭ್ರಮಾವೃತನಾದ ಮಾನವನು ನಿಸರ್ಗದ ಸಂಕೀರ್ಣ ವ್ಯವಸ್ಥೆಯನ್ನು ಅರಿಯುವಲ್ಲಿ ವಿಫಲನಾಗಿದ್ದಾನೆ. ಈ ವ್ಯವಸ್ಥೆಯಲ್ಲಿ ಪ್ರತಿಯೊಂದು ಜೀವಿಯೂ ತನ್ನ ಅಸ್ತಿತ್ವಕ್ಕೆ ಇನ್ನೊಂದರ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ಅವಲಂಬಿತವಾಗಿರುತ್ತದೆ. ಆದ್ದರಿಂದಲೇ ಯಾವುದೇ ಒಂದು ಜೀವವರ್ಗದ ಮೇಲೆ ಆಗುವ ಹಾನಿ ಮನುಷ್ಯನ ಮೇಲೂ ಆಗುತ್ತದೆ. ಬಸವೇಶ್ವರರ ವ್ಯಕ್ತಿತ್ವವನ್ನು ಅಲ್ಲಮಪ್ರಭುದೇವರ ಈ ವಚನವು ಮನೋಜ್ಞವಾಗಿ ಕಟ್ಟಿಕೊಡುತ್ತದೆ:

> ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
> ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
> ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ!
> ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು.
> ಶಿವಭಕ್ತರಿರ್ದ ಕ್ಷೇತ್ರವೆ ಅವಿಮುಕ್ತಕ್ಷೇತ್ರವೆಂಬುದು ಹುಸಿಯೆ?
> ಶಿವಭಕ್ತರಿರ್ದ ದೇಶ ಪಾವನವೆಂಬುದು ಹುಸಿಯೆ?
> ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನಬಸವಣ್ಣನ ಕಂಡು
> ಬದುಕಿದೆನು ಕಾಣಾ ಸಿದ್ಧರಾಮಯ್ಯಾ.

ಪರಶಿವನ ಪರಂಜ್ಯೋತಿಸ್ವರೂಪವೇ ಬಸವೇಶ್ವರರ ರೂಪದಲ್ಲಿ ಬಂದಿರುವಂತೆ ಭಕ್ತರಿಗೆ ಗೋಚರವಾಗುತ್ತದೆ. ಬಸವಣ್ಣನವರು ವಿಶಿಷ್ಟ ರೀತಿಯ ಬೋಧಕರಾಗಿದ್ದರು; ಅವರ ಬದುಕೇ ಸತ್ಯದ ಒಂದು ದರ್ಶನವಾಗಿತ್ತು. ಬಸವಣ್ಣನವರ ಬೋಧನೆಗಳಲ್ಲಿ ಸತ್ಯವನ್ನು ಕುರಿತ ವಿಶಿಷ್ಟ ಕಾಣ್ಕೆ ಪ್ರತಿಫಲಿತವಾಗುತ್ತಿತ್ತು. ಅವರ ಆದರ್ಶ ಗುಣಗಳನ್ನು ಕುವೆಂಪು ತಮ್ಮ ಒಂದು ಕವನದಲ್ಲಿ ಸುಂದರವಾಗಿ ವರ್ಣಿಸಿದ್ದಾರೆ:

> ಕಾರ್ತಿಕದ ಕತ್ತಲಲಿ ಆಕಾಶದೀಪವಾಗಿ ನೀ ಬಂದೆ,
> ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ,
> ಎಂಟು ಶತಮಾನಗಳ ಹಿಂದೆ,
> ಅಗ್ನಿಖಡ್ಗವನಾಂತ ಓ ಅಧ್ಯಾತ್ಮ ಕ್ರಾಂತಿವೀರ,
> ದೇವದಯೆಯೊಂದು ಹೇ ಧೀರಾವತಾರ, ಶ್ರೀ ಬಸವೇಶ್ವರಾ!

ಆಧ್ಯಾತ್ಮಿಕ ಕ್ರಾಂತಿಕಾರಿ ಬಸವೇಶ್ವರರು ಎಲ್ಲ ಸಾಂಪ್ರದಾಯಿಕ ಮೌಢ್ಯಗಳನ್ನು ಪ್ರಶ್ನಿಸುತ್ತಾರೆ. ಮೊದಲನೆಯದಾಗಿ ತಮ್ಮ ಲೌಕಿಕ ಬದುಕಿನಲ್ಲಿಯೂ ಸಹಜವಾಗಿ ವ್ಯವಹರಿಸುತ್ತ, ಗೃಹಸ್ಥನಾದವನೂ ಕೂಡ ಮೋಕ್ಷವನ್ನು ಪಡೆಯುವ ಸಾಧ್ಯತೆಯನ್ನು

ತೋರಿಸಿಕೊಟ್ಟಿದ್ದಾರೆ. ಎರಡನೆಯದಾಗಿ, ಅವರ ಚಿಂತನೆಗಳು ಕೇವಲ ವೈಯಕ್ತಿಕ ಮೋಕ್ಷವನ್ನು ಗುರಿಯಾಗಿ ಹೊಂದಿರದೆ, ವರ್ಗ ಮತ್ತು ಜಾತಿ ಪ್ರಜ್ಞೆಯಿಂದ ತುಂಬಿದ್ದ ಸಮಾಜದ ಪರಿವರ್ತನೆಯ ಉದ್ದೇಶವನ್ನು ಹೊಂದಿದ್ದವು. ಅದುವರೆಗಿನ ಸಂತರ ಉನ್ನತ ಬೋಧನೆಗಳು ಬಹಳಷ್ಟು ವೇಳೆ ಜಾತಿಪ್ರಜ್ಞೆಗೆ ಅಧೀನವಾಗಿದ್ದು ದೋಷಯುಕ್ತ ವಾಗಿ ಕಂಡುಬಂದ ಹಿನ್ನೆಲೆಯಲ್ಲಿ, ಬಸವೇಶ್ವರರ ಚಿಂತನೆಗಳು ಕಾರಣಿಕ ಸೌರಭವನ್ನು ಹೊಂದಿವೆ. ಕಾರ್ಲ್ ಮಾರ್ಕ್ಸ್ ಹೇಳುವ ಈ ಮಾತುಗಳನ್ನು ಗಮನಿಸ ಬಹುದು.

..... ಬಸವ ಸಂದೇಶವೆಂಬುದು – ಹಿಂದಿನ ಎಲ್ಲಾ ಉತ್ತಮ ಆಲೋಚನೆಗಳ ಒಳಹರಿವನ್ನು ಪಡೆದು ತನ್ನಿಂದ ಎಲ್ಲಾ ಹೊಸ ಆಲೋಚನೆಗಳನ್ನು ಹೊರಕ್ಕೆ ಹರಿಸಿದ ಜಲಾಶಯದಂತಿದೆ. ಬುದ್ಧನ ಕಾರುಣ್ಯ, ಮಹಾವೀರನ ಸರಳತೆ, ಯೇಸುವಿನ ಅನುಕಂಪ ಹಾಗೂ ಪೈಗಂಬರರ ನಿರ್ಭೀತಿ ಇವೆಲ್ಲದರ ಒಟ್ಟಾರೆ ತಿರುಳೇ ಬಸವಣ್ಣನ ಬೋಧನೆ. ಆಧುನಿಕ ಚಿಂತಕರ ಎಲ್ಲ ಆಲೋಚನೆಗಳನ್ನೂ ಬಸವಣ್ಣನವರು 12ನೇ ಶತಮಾನದಲ್ಲೇ ಪರಿಭಾವಿಸಿದ್ದು ಒಂದು ಸೋಜಿಗವೇ ಸರಿ.

ಬಸವಣ್ಣನವರ ಇಡೀ ಸಿದ್ಧಾಂತವನ್ನು ಮೂರು ವಿಧದಲ್ಲಿ ಪ್ರಸ್ತುತಪಡಿಸಬಹುದು. ದೈವ ಎನ್ನುವುದು ವಾಸ್ತವ, ಜಗತ್ತು ಒಂದು ಎದುರಿಸಬೇಕಾದ ಸವಾಲು ಮತ್ತು ಜೀವನದ ಧ್ಯೇಯವು ದೈವದ ಜೊತೆ ಸಾಮರಸ್ಯವನ್ನು ಹೊಂದುವುದು. ಅವರು ಹೇಳುವಂತೆ ಅಂತರಂಗ ಹಾಗೂ ಬಹಿರಂಗದ ನಡುವಣ ಸಮನ್ವಯವನ್ನು ಯಶಸ್ವಿಯಾಗಿ ನಿರ್ವಹಿಸುವುದೇ ಗುರಿಯಾಗಬೇಕು. ಮಹಿಳೆಯರಿಗೂ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸಮಾನತೆಯ ಜೊತೆಗೆ, ಕಾಯಕ ಹಾಗೂ ದಾಸೋಹಗಳಿಗೆ ಬಸವಣ್ಣನವರು ಉನ್ನತವಾದ ಸ್ಥಾನವನ್ನು ಕೊಟ್ಟರು.

ಲೌಕಿಕ ಹಾಗೂ ಅಲೌಕಿಕಗಳ ಬಗ್ಗೆ ತಮ್ಮ ಅಂತರಂಗದ ಅನುಭವಗಳನ್ನು ಅಭಿವ್ಯಕ್ತಿಸಲು ಬಸವಣ್ಣನವರು ರಚಿಸಿದ ವಚನಗಳು ಜ್ಞಾನ ಹಾಗೂ ಕಾವ್ಯಕೌಶಲದ ಉತ್ಕೃಷ್ಟ ಮಾದರಿಗಳಾಗಿವೆ. ಶರಣರ ವಚನಗಳು ಕನ್ನಡ ಸಾಹಿತ್ಯದ ಒಂದು ವಿಶೇಷ ಪ್ರಭೇದವಾಗಿ ಸಾರ್ವತ್ರಿಕ ಮನ್ನಣೆ ಪಡೆದಿವೆ. ಮೋಕ್ಷದಂತಹ ಅತ್ಯುನ್ನತ ಪರಿಕಲ್ಪನೆಯನ್ನು ಒಬ್ಬ ಸಾಮಾನ್ಯ ವ್ಯಕ್ತಿಯ ಅರಿವಿಗೂ ನಿಲುಕುವಂತೆ ಮಾಡಿದುದು ಶರಣರ ಅದ್ಭುತ ಸಾಧನೆ. ಈ ಎಲ್ಲ ಗುಣಲಕ್ಷಣಗಳೇ ಬಸವೇಶ್ವರರನ್ನು ಜಗಜ್ಯೋತಿ, ವಿಶ್ವವಿಭೂತಿಯಾಗು ವಂತೆ ಮಾಡಿವೆ. ಜೀವನದ ಸಾರ್ವತ್ರಿಕತೆಯನ್ನು ತಮ್ಮ ಈ ವಚನದಲ್ಲಿ ಬಸವೇಶ್ವರರು ಸುಂದರವಾಗಿ ಅನಾವರಣಗೊಳಿಸಿದ್ದಾರೆ:

ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ
ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ

ಮನಸ್ಸಿನಾಳಕ್ಕೆ ನಾಟಬಲ್ಲ ಒಂದು ಘನವಾದ ಸತ್ಯ ಈ ವಚನದಲ್ಲಿ ಅಡಗಿದೆ. ಸದಾ ತಾರತಮ್ಯವನ್ನೇ ಕಾಣಬಯಸುವ ಮನಸ್ಸು ತನ್ನನ್ನು ಇತರರಿಗಿಂತ ಭಿನ್ನವಾಗಿ ಭಾವಿಸಿಕೊಂಡು ಬದುಕಲು ಬಯಸುತ್ತದೆ. ಆದರೆ ಇದೊಂದು ವಿಚಿತ್ರವಾದ ಭ್ರಮೆ. ರಾಗದ್ವೇಷಗಳಿಂದ ತುಂಬಿದ ಈ ಜಗತ್ತಿಗೆ, ಎಲ್ಲರೂ ಸಮಾನರು ಎನ್ನುವ ಸತ್ಯವನ್ನು ಅರಗಿಸಿಕೊಳ್ಳುವುದು ಕಷ್ಟ. ಧಾರ್ಮಿಕ ನೆಲೆಯಲ್ಲಿ ಎಲ್ಲರೂ ಸಮಾನರಾಗಿದ್ದುದರಿಂದ, ನಿಜವಾದ ಭಕ್ತನು ಎಲ್ಲಾ ಜೀವಿಗಳನ್ನು ಆಧ್ಯಾತ್ಮಿಕ ಮಟ್ಟದಲ್ಲಿ ಒಂದೇ ತೆರನಾಗಿ ಭಾವಿಸುತ್ತಾನೆ. ಮನುಷ್ಯ ಸ್ವಭಾವವನ್ನು ಸಹಜವಾಗಿ ತೆರೆದಿಡುತ್ತಲೇ ವಚನಗಳು ಸಾಹಿತ್ಯದ ಮೌಲ್ಯಗಳನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತವೆ.

ಸಕಲ ಜೀವಿಗಳ ಏಕತೆ ಎಂಬುದು ನಿಸರ್ಗದ ಎಲ್ಲೆಡೆಯಲ್ಲೂ ಪ್ರತಿಫಲಿತವಾಗಿದ್ದರೂ ಸಹ ಮಾನವ ಸಮಾಜದಲ್ಲಿ ಮಾತ್ರ ಇದು ಕಾಣುವುದು ವಿರಳ. ಅನ್ನದ ಒಂದು ಅಗುಳನ್ನು ಕಂಡೊಡನೆ ತನ್ನೆಲ್ಲಾ ಬಳಗವನ್ನು ಕೂಗಿ ಕರೆಯುವ ಕಾಗೆಯನ್ನು ರೂಪಕವಾಗಿ ಬಳಸುತ್ತ ಈ ಗುಣ ಮಾನವನಲ್ಲಿ ಇಲ್ಲದ್ದನ್ನು ಕಂಡು ಬಸವೇಶ್ವರರು ಮರುಗುತ್ತಾರೆ.

ಕಾಗೆ ಒಂದಗುಳ ಕಂಡಡೆ
ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ
ಕಾಗೆ ಕೋಳಿಯಿಂದ ಕರಕಷ್ಟ ಕೂಡಲಸಂಗಮದೇವಾ!

ವಿಶ್ವದ ಮೊದಲನೆಯ ಧಾರ್ಮಿಕ ಸಂಸತ್ತಾದ ಅನುಭವ ಮಂಟಪ, ವಿಶ್ವಭ್ರಾತೃತ್ವದ ನಿಟ್ಟಿನಲ್ಲಿ ಒಂದು ವಿನೂತನ ಮತ್ತು ಅದ್ಭುತ ಪ್ರಯೋಗ, ಅನುಭಾವಿಗಳ ಶೃಂಗಸಭೆಯಂತಿದ್ದ ಆ ಸಭೆಯಲ್ಲಿ ಅನೇಕ ಬೌದ್ಧಿಕ ಹಾಗೂ ಅಂತಃಪ್ರಜ್ಞೆಯ ವಿಷಯಗಳನ್ನು ಮುಕ್ತವಾಗಿ ಚಿಂತಿಸಿ ಚರ್ಚಿಸಿ ಒರೆಗೆ ಹಚ್ಚಲಾಗುತಿತ್ತು. ಈ ವಚನಗಳೇ ಶರಣರ ವೈಚಾರಿಕ ಚಿಂತನೆಗಳ ತಿರುಳು. ಇಂಥ ಚಿಂತನೆಯ ಫಲವೇ ವಚನಗಳ ಸಂಕಲನವಾದ "ಶೂನ್ಯ ಸಂಪಾದನೆ".

1978ರಿಂದಲೂ ಉತ್ತರ ಅಮೆರಿಕದ ವೀರಶೈವ ಸಮಾಜದ ಸೇವೆಯಲ್ಲಿ ತೊಡಗಿರುವ VSNA ಸಂಸ್ಥೆಯು ಹೆಮ್ಮೆಯ ಪ್ರತೀಕವಾಗಿದೆ. ಸುಮಾರು ನಾಲ್ಕು ದಶಕಗಳಿಂದಲೂ ಕೆನಡ ಹಾಗೂ ಅಮೆರಿಕದ ಸಾವಿರಾರು ಕುಟುಂಬಗಳ ನಡುವಿನ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವೇದಿಕೆಯಾಗಿ ಅನುಕರಣೀಯ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿರುವುದು ಶ್ಲಾಘನೀಯ. ಧರ್ಮ ಹಾಗೂ ಸಂಸ್ಕೃತಿಯನ್ನು ಪಾಶ್ಚಾತ್ಯ ದೇಶಗಳಲ್ಲಿ ಉಳಿಸಿ ಬೆಳೆಸುತ್ತಿರುವ ರೀತಿ ಅನನ್ಯ. ಆದ್ದರಿಂದಲೇ ಬಸವ ಜಯಂತಿ ಆಚರಣೆಯು ಜನರು ಬಹುವಾಗಿ ಕಾಯುತ್ತಿರುವಂಥ ವಾರ್ಷಿಕ

ಕಾರ್ಯಕ್ರಮವಾಗಿದೆ. ಕೋವಿಡ್ ಪಿಡುಗಿನ ನಡುವೆಯೂ ಬಸವ ಜಯಂತಿ ಕಾರ್ಯಕ್ರಮವನ್ನು ಅಂತರ್ಜಾಲ ಮಾಧ್ಯಮದ (Virtual Mode) ಮೂಲಕ ನಡೆಸುತ್ತಿರುವುದು ಪ್ರಶಂಸನೀಯ. ಉತ್ತರ ಅಮೆರಿಕ ವೀರಶೈವ ಸಮಾಜದ ಅಧ್ಯಕ್ಷರಾದ ಶ್ರೀ ಹರೀಶ ಹಿರೇಮಠ ಬಹುಮುಖ ಪ್ರತಿಭಾವಂತರು, ಉತ್ಸಾಹಿಗಳು. ಅವರು ಸಮಾಜದ ಇತರ ಪದಾಧಿಕಾರಿಗಳೊಂದಿಗೆ, ಈ ಕಾರ್ಯಕ್ರಮವನ್ನು ವಿಶ್ವದ ಅನೇಕ ದೇಶಗಳ ಸಮಾಜದ ಜನರನ್ನು ಸೇರಿಸಿ ಆಯೋಜಿಸುತ್ತಿರುವುದು ಸ್ತುತ್ಯರ್ಹ.

ಶ್ರೀ ಬಸವೇಶ್ವರರ ಬೋಧನೆಗಳನ್ನು ಸಂರಕ್ಷಿಸುವ ಹಾಗೂ ಪ್ರಚುರಪಡಿಸುವ ಉದ್ದೇಶದಿಂದ ಬೆಂಗಳೂರಿನಲ್ಲಿ ಬಸವ ಸಮಿತಿ ಸ್ಥಾಪನೆಯಾಗಿದೆ. ಈ ಸಮಿತಿಯು ವಚನ ಸಾಹಿತ್ಯವನ್ನು ಇತರ ಭಾರತೀಯ ಭಾಷೆಗಳಿಗೆ ಅನುವಾದಿಸುವ ಕಾರ್ಯವನ್ನು ತುಂಬು ಜವಾಬ್ದಾರಿಯಿಂದ ನಿರ್ವಹಿಸಿದೆ. ಹಾಗೆಯೇ ವಿಶ್ವದ ಅನೇಕ ಭಾಷೆಗಳಿಗೂ ಅನುವಾದಿಸುವ ಮತ್ತು ಪ್ರಕಟಿಸುವ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಬಸವ ಸಮಿತಿಯ ಈ ಗುರಿಯನ್ನು ತಲುಪಲು ಅವಿಶ್ರಾಂತವಾಗಿ ದುಡಿಯುತ್ತಿರುವ ಶ್ರೀ ಅರವಿಂದ ಜತ್ತಿಯವರ ಕಾರ್ಯದಕ್ಷತೆ ಅಭಿನಂದನೀಯ.

ಉತ್ತರ ಅಮೆರಿಕ ವೀರಶೈವ ಸಮಾಜದೊಂದಿಗೆ ಕೈಜೋಡಿಸಿ, ಬಸವ ಸಮಿತಿಯು ಎರಡನೇ ಬಾರಿ ಬಸವ ಜಯಂತಿಯನ್ನು ಆಚರಿಸುತ್ತಿರುವುದು ಅತೀವ ಸಂತಸ ತಂದಿದೆ. ಬಸವ ತತ್ವದ ನಿಜವಾದ ವ್ಯಾಖ್ಯೆಯನ್ನು ಪ್ರಾಯೋಜಕರು ಡಿಜಿಟಲ್ ವಿಧಾನದಲ್ಲಿ ಅಳವಡಿಸಿಕೊಂಡಿರುವುದು ಶ್ಲಾಘನೀಯ.

ಬಸವ ಜಯಂತಿಯು, ಸತ್ಯಸಾಕ್ಷಾತ್ಕಾರ ಮತ್ತು ಮೋಕ್ಷದ ದಾರಿಗೆ ವ್ಯಕ್ತಿಯನ್ನು ಮತ್ತೆ ಕರೆತರಲು ಸಹಕಾರಿಯಾಗಬೇಕು. ಇಂದು ಎಲ್ಲೆಡೆಯೂ ಹಬ್ಬಿರುವ ಕೋವಿಡ್ ಪಿಡುಗು, ಹಾದಿ ತಪ್ಪಿರುವ ಮಾನವನಿಗೆ ಪ್ರಕೃತಿ ನೀಡುತ್ತಿರುವ ಕಠೋರ ಎಚ್ಚರಿಕೆಯಾಗಿದೆ. ಇಂಥದೊಂದು ನಿರ್ಣಾಯಕ ಸಂದರ್ಭದಲ್ಲಿ ಇಡೀ ಸಮಾಜವು ತನ್ನೆಲ್ಲ ಪೂರ್ವಗ್ರಹಗಳನ್ನು ಮತ್ತು ಸ್ವಹಿತಾಸಕ್ತಿಗಳನ್ನು ಬದಿಗೊತ್ತಿ, ಈ ರೋಗದ ವಿರುದ್ಧ, ಒಂದು ಕುಟುಂಬದಂತೆ ಒಟ್ಟಾಗಿ ಸೆಣಸಬೇಕಿದೆ. ಈ ಶುಭದಿನದಂದು, ಮನುಕುಲದ ಒಳಿತಿಗಾಗಿ ಎಲ್ಲರೂ ಬಸವತತ್ವಗಳನ್ನು ತ್ರಿಕರಣಪೂರ್ವಕವಾಗಿ ಆಚರಿಸುವುದಾಗಿ ಪ್ರತಿಜ್ಞೆ ಮಾಡಬೇಕಾಗಿದೆ.

ಬಸವಾದಿ ಶರಣರು ಪ್ರಸ್ತುತದ ಸಂಘರ್ಷವನ್ನೆದುರಿಸುವ ಶಕ್ತಿಯನ್ನು ಎಲ್ಲರಿಗೂ ನೀಡಲಿ. ಅವರು ತೋರಿದ ಮಾರ್ಗದಲ್ಲಿ ನಡೆಯುವ ಶ್ರದ್ಧೆ ಎಲ್ಲರಲ್ಲಿ ನೆಲೆಸುವಂತೆ ಮಾಡಲಿ. ಜಯಂತಿ ಮಹೋತ್ಸವವು ಎಲ್ಲರಿಗೂ ಸಂತೋಷ, ಸಮಾಧಾನಗಳನ್ನು ಉಂಟುಮಾಡಲಿ.

ಎಲ್ಲರಿಗೂ ಶುಭವಾಗಲಿ.

ಶಿವಂ ಭೂಯಾತ್

# ವಚನ ನಾದಸಿರಿ

> ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ,
> ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ,
> ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆಯಿತ್ತಡೆ
> ನಿನ್ನನಿತ್ತೆ ಕಾಣಾ! ರಾಮನಾಥ

**ಕ**ರ್ನಾಟಕ ಇತಿಹಾಸದಲ್ಲಿ 12ನೇ ಶತಮಾನ ಅತ್ಯಂತ ಪ್ರಮುಖವಾದ ಘಟ್ಟ. ಆಗ ಉದಯಿಸಿದ ಬಸವಾದಿ ಶರಣರು ಆಧ್ಯಾತ್ಮಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದುದು. ಅವರು ಪರಿಶುದ್ಧವಾದ ಜೀವನವನ್ನು ನಡೆಸಿದವರು. ಅಂತರಂಗ ಬಹಿರಂಗಗಳ ಏಕರೂಪತೆಯನ್ನು ಸಾಧಿಸಿದವರು. ಜನತೆಯ ಸರ್ವತೋಮುಖ ಶ್ರೇಯಸ್ಸಿಗಾಗಿ ತಮ್ಮ ಬದುಕನ್ನೇ ಸಮರ್ಪಿಸಿಕೊಂಡವರು. ಅವರು ನೀಡಿದ ವಚನಸಾಹಿತ್ಯದ ಅನರ್ಘ್ಯ ರತ್ನಗಳು ಸಾರ್ವಕಾಲಿಕ ಸತ್ಯಗಳನ್ನು ಬಿಂಬಿಸುವಂತಹವು. ಸರಳವಾದ ತಿಳಿಗನ್ನಡದಲ್ಲಿ ಲೌಕಿಕ ಸಂಗತಿಗಳ ವಿಶ್ಲೇಷಣೆಯ ಜೊತೆಗೆ ಆಧ್ಯಾತ್ಮಿಕ ಕ್ಷಿತಿಜಕ್ಕೆ ಕೊಂಡೊಯ್ಯುವ ಸಾರಶಕ್ತಿಯೂ ಅಲ್ಲಿದೆ. ವಚನಗಳು ಮೇಲ್ನೋಟಕ್ಕೆ ಸರಳವಾಗಿ ಕಂಡರೂ ಅಧ್ಯಯನ ಮಾಡುತ್ತಾ ಹೋದ ಹಾಗೆ ಅವುಗಳ ಹಿಂದಿರುವ ಸೂಕ್ಷ್ಮತೆಗಳು ವಿಸ್ತಾರಗೊಳ್ಳುತ್ತಾ ಹೋಗುತ್ತವೆ. ಸಾಧಕರಾಗಿ ಅಧ್ಯಯನ ಮಾಡುವವರಿಗೆ ಅವುಗಳನ್ನು ಸ್ಪಷ್ಟವಾಗಿ ತಿಳಿಸುವ, ಅರ್ಥೈಸುವ ಅಗತ್ಯವಿರುತ್ತದೆ. ಅಧ್ಯಾತ್ಮಿಕ ಕ್ಷೇತ್ರಕ್ಕೆ ತಮ್ಮ ಜೀವನವನ್ನೇ ಮೀಸಲಾಗಿಟ್ಟಿರುವ ಮಾತೆ ವಾಗ್ದೇವಿಯವರು ಇದನ್ನು ವಿಶಿಷ್ಟ ಕಾಯಕವೆಂದು ಭಾವಿಸಿ ಪ್ರವಚನಗಳ ಮೂಲಕ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಬೆಳಗಾವಿಯ ಬಸವತತ್ತ್ವ ಅನುಭಾವ ಕೇಂದ್ರದಿಂದ **"**ವಚನ ನಾದಸಿರಿ**"** ಸರಣಿಯನ್ನು ಪ್ರಾರಂಭಿಸಿ ಅದರ 50ನೇ ಕಾರ್ಯಕ್ರಮ ಆಯೋಜಿಸಿರುವುದು ಸಂತೋಷದ ಸಂಗತಿ. ಇದಕ್ಕೆ ವಿದುಷಿ ಪಾವನಿ ಕಾಶಿನಾಥ್‌ರವರು ಅಪರೂಪದ ವಚನಗಳನ್ನು ಆಯ್ಕೆ ಮಾಡಿ ಅವುಗಳಿಗೆ ರಾಗ ಸಂಯೋಜಿಸಿ ಸುಶ್ರಾವ್ಯವಾಗಿ ಹಾಡಿದ್ದಾರೆ. ಅದಕ್ಕೆ ಮಾತೆ ವಾಗ್ದೇವಿಯವರು ಅನೇಕ ಉದಾಹರಣೆಗಳು ಹಾಗೂ ದೃಷ್ಟಾಂತಗಳ ಮೂಲಕ ಪಂಡಿತ–ಪಾಮರರಿಗೆ ಗ್ರಾಹ್ಯವಾಗುವಂತೆ ವ್ಯಾಖ್ಯಾನಿಸಿದ್ದಾರೆ. ಮಾತೆ ಕುಮುದಿನಿಯವರು ಇಡೀ ಕಾರ್ಯಕ್ರಮವನ್ನು ಪರಿಕಲ್ಪಿಸಿದ್ದಾರೆ. ವಿದುಷಿ ಪುಷ್ಪಾ ಕಾಶಿನಾಥ್‌ರವರು ನಿರೂಪಣೆ ಮಾಡಿ ವೀಣಾ ವಾದನದ ಹಿನ್ನೆಲೆಯನ್ನು ನೀಡಿರುವುದು ಔಚಿತ್ಯಪೂರ್ಣವಾಗಿದೆ. ವಚನ ನಾದಸಿರಿ ಕಾರ್ಯಕ್ರಮ ನಿರಂತರವಾಗಿ ಮುನ್ನಡೆಯಲೆಂದು, ಆಧ್ಯಾತ್ಮಿಕ ಜಿಜ್ಞಾಸುಗಳ ಮನ ತಣಿಸಲೆಂದು ಹಾರೈಸುತ್ತೇವೆ.

---

ಮೇ 20ರಂದು ನಡೆದ ಬೆಳಗಾವಿಯ ಬಸವತತ್ತ್ವ ಅನುಭಾವ ಕೇಂದ್ರದಿಂದ 'ವಚನ ನಾದಸಿರಿ' ಸರಣಿಯ 50ನೇ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ನೀಡಿದ ಆಶೀರ್ವಚನ.

# ಪುಟ್ಟಯ್ಯ– ಸಂಗೀತ ಸಾಹಿತ್ಯಗಳ ಮೇರು ಬೆಟ್ಟಯ್ಯ!

**ಡಾ. ಆರ್.ಬಿ. ಚಿಲುಮಿ**

(ಹಿಂದಿನ ಸಂಚಿಕೆಯಿಂದ)

**ಪುಟ್ಟರಾಜರು ಸಾಹಿತ್ಯಾರಾಧಕರಾಗಿ**

ಪುಟ್ಟರಾಜರು ಕೇವಲ ಸಂಗೀತ ಒಂದೇ ಅಲ್ಲ, ಅವರು ಹಲವು ಕಲೆಗಳ ಸಂಗಮವಾಗಿದ್ದರು. ಅವರು ಸಾಹಿತ್ಯ ಅಧ್ಯಯನದತ್ತ ತಮ್ಮ ಆಸಕ್ತಿಯನ್ನು ತೋರಿದರು. ಇವರಲ್ಲಿರುವ ಪ್ರತಿಭೆ ಮತ್ತು ಆಸಕ್ತಿಯನ್ನು ಗುರುತಿಸಿದ ಪಂಚಾಕ್ಷರಿಗವಾಯಿಗಳವರು ಪ್ರತಿಯೊಂದು ವಿಷಯದಲ್ಲಿ ಪರಿಣತಿ ಪಡೆದಿರುವಂಥ ಪ್ರತಿಭಾವಂತರಿಂದ, ವಿದ್ವಾಂಸರಿಂದ, ಪೂರ್ವಸೂರಿಗಳಿಂದ ವಿವಿಧ ಶಾಸ್ತ್ರಗಳ ಅಧ್ಯಯನಕ್ಕೆ ಅನುಕೂಲತೆ ಮಾಡಿಕೊಟ್ಟರು. ಇವರಿಬ್ಬರ ಗುರು–ಶಿಷ್ಯರ ಸಂಬಂಧ ತಂದೆ–ಮಗನಂತಿತ್ತು. ಕಂಪ್ಲಿಯವರಾದ ಚಂದ್ರಶೇಖರ ಶಾಸ್ತ್ರಿಗಳು, ಪಗಡದಿನ್ನಿ ಹಿರೇಮಠ ಇವರುಗಳು ಪುಟ್ಟರಾಜರಿಗೆ ಛಂದಸ್ಸು, ವ್ಯಾಕರಣ, ಶಬ್ದಮಣಿದರ್ಪಣ ವಿಷಯವನ್ನು ತಿಳಿಸಿದರು. ಬಾಗಲಕೋಟೆಯಲ್ಲಿ ಸಂಸ್ಕೃತ ಪಾಠಶಾಲಾ ಶಿಕ್ಷಕರಾಗಿದ್ದ ಕಲಿಗಣನಾಥ ಶಾಸ್ತ್ರಿಗಳು ತರ್ಕಶಾಸ್ತ್ರ, ನ್ಯಾಯಶಾಸ್ತ್ರ ವಿಷಯವನ್ನು ತಿಳಿಸಿದರು. ಜೇರಟಗಿಯ ಸದಾಶಿವಶಾಸ್ತ್ರಿಗಳಿಂದ ಸಂಸ್ಕೃತವನ್ನು ತಿಳಿದುಕೊಂಡರು. ಪಂಡಿತ ನಾಗಭೂಷಣಶಾಸ್ತ್ರಿಗಳು ಸಂಗನಾಳ ಹಿರೇಮಠರಿಂದ ವೇದಾಂತ, ಭಾಷೆ ನ್ಯಾಯಶಾಸ್ತ್ರ, ಕೈವಲ್ಯಪದ್ಧತಿ, ಮೊಗ್ಗೆಯ ಮಾಯಿದೇವನ ಶತಕತ್ರಯ ಕೃತಿಗಳ ಅಧ್ಯಯನ ಕಲಿತುಕೊಂಡರು. ತಾಳಿಕೋಟೆಯ ಬಸವಪ್ಪಯ್ಯ ಬೆಳಗಲಿಮಠ ಅವರಿಂದ ನಿಜಗುಣ ಶಿವಯೋಗಿಗಳ ಕೈವಲ್ಯಪದ್ಧತಿ, ಪಾರಮಾರ್ಥಗೀತೆ, ಅನುಭವಸಾರ, ವಿಚಾರ ಸಾಂಖ್ಯ ವಿಷಯಗಳನ್ನು ಹೇಳಿಸಿಕೊಂಡರು. ಗಾರವಾಡದ ವಿರೂಪಾಕ್ಷ ಶಾಸ್ತ್ರಿಗಳು ಶಬ್ದಾನುಶಾಸನವನ್ನು ಬೋಧಿಸಿದರು. ರೋಣದ ಪಟ್ಟದದೇವರಾದ ಅಂಕಲಗಿ ಸಿದ್ಧರಾಮಸ್ವಾಮಿಗಳಿಂದ ಛಂದಶ್ಶಾಸ್ತ್ರವನ್ನು ಕರಗತಮಾಡಿಕೊಂಡರು. ಶಿರೂರ ಗ್ರಾಮದ ಶಿವಬಸಪ್ಪ ಮಾಸ್ತರರಿಂದ ಕನ್ನಡ ವ್ಯಾಕರಣವನ್ನು ತಿಳಿದುಕೊಂಡರು. ಹೀರೂರಿನ ಶಾಸ್ತ್ರಿಗಳಿಂದ ಅಲಂಕಾರಶಾಸ್ತ್ರವನ್ನು ಹೇಳಿಸಿಕೊಂಡರು. ಅಂಧರಿಗಾಗಿ ಸಂಶೋಧಿಸಿದ ಬ್ರೈಲ್ ಲಿಪಿಯ ಅಧ್ಯಯನವನ್ನು ಮೈಸೂರಿನ ವೆಂಕಟಪ್ಪ ಬಳ್ಳಾರಿ ಇವರಿಂದ ಕಲಿತು ರೂಢಿಸಿಕೊಂಡರು. ಹಿಂದಿಯನ್ನು ಗದಗಿನ ಪ್ರೊ. ಆರ್.ಎಸ್. ದೇಶಪಾಂಡೆಯವರಿಂದ ಹೇಳಿಸಿಕೊಂಡರಲ್ಲದೇ ಧಾರವಾಡ ಹಿಂದಿ ಪ್ರಚಾರ ಸಭೆಯಿಂದ ಪದವಿ, ಸ್ನಾತಕೋತ್ತರ ಪದವಿಗಳನ್ನು ಪಡೆದುಕೊಂಡರು. ಹೀಗೆ ಪುಟ್ಟರಾಜರು ಸಂಗೀತ ಕಲೆಯೊಂದಿಗೆ

ಸಾಹಿತ್ಯ, ಶಿಕ್ಷಣ, ಸಮಾಜಕಲ್ಯಾಣಗಳಲ್ಲಿ ಕೃಷಿಗೈಯಲು ಪ್ರೇರಣೆಯಾಯಿತು. ಅವರು ಸಾಹಿತ್ಯ ರಚನೆಗೆ ತೊಡಗಿದುದು 20ನೆಯ ಶತಮಾನದ ನಲವತ್ತರ ದಶಕದಲ್ಲಿ. 'ಸಿದ್ಧರಾಮ ಸಂವಾದ' ಅವರು ರಚಿಸಿದ ಮೊದಲ ಏಕಾಂಕ ನಾಟಕವಾದರೆ; ನಾಟಕ ಕಂಪನಿಯನ್ನೂ ಸ್ಥಾಪಿಸಿದರು. ಅವರು ಹೆಚ್ಚು ಭಕ್ತಿಪ್ರಧಾನ ಶರಣರ ಚರಿತ್ರೆಗಳನ್ನೊಳಗೊಂಡ ಸುಮಾರು 21 ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ರಚಿಸಿದ್ದಾರೆ. ರಂಗಸಜ್ಜಿಕೆಯ ಮೇಲೆ ನಿರ್ದೇಶಿಸಿ ಪ್ರಯೋಗಿಸಿದ್ದಾರೆ. ಶಿವಶರಣ ಮಾದಾರ ಚೆನ್ನಯ್ಯ, ಕೊಟ್ಟೂರು ಬಸವೇಶ್ವರ ಮಹಾತ್ಮೆ, ಗುರುದರ್ಶನ, ಘೂಷ್ಮಾದೇವಿ, ದಾನಶೂರ ಲಿಂಗರಾಜರು, ದೇವರ ದುಡ್ಡು, ನೆಲ್ಲೂರು ನಂಬೆಕ್ಕ, ಭಗವಾನ್ ಬಸವೇಶ್ವರರು, ಮಂತ್ರಮಹಿಮೆ, ಮಗನ ಪ್ರೇಮ, ಮಿಂಚು, ಸತಿ ಸುಕನ್ಯಾ, ಸವತಿ ಮತ್ಸರ, ಸ್ತ್ರೀ ಜೀವನ, ಶಿವಯೋಗಿ ಸಿದ್ಧರಾಮ, ಶಿವಶರಣ ಮೋಳಿಗೆಯ ಮಾರಯ್ಯ, ಶಿವಶರಣೆ ಅಕ್ಕಮಹಾದೇವಿ, ಶಿರಹಟ್ಟಿಯ ಜಗದ್ಗುರು ಶ್ರೀ ಫಕ್ಕೀರೇಶ್ವರ ಮಹಾತ್ಮೆ, ಶ್ರೀಕೃಷ್ಣಗಾರುಡಿಗ, ಶ್ರೀ ರಾಜಶೇಖರ (ಮಂತ್ರ ಮಹಿಮೆ), ಹಾನಗಲ್ಲ ಕುಮಾರೇಶ್ವರ ಮಹಿಮೆ – ಈ ಮುಂತಾದ ನಾಟಕಗಳು ಲೋಕಪ್ರಸಿದ್ಧಿ ಪಡೆದಿವೆ.

ಪುಟ್ಟರಾಜರು ಪುರಾಣ ಕೃತಿಗಳ ರಚನೆಗೆ ತೊಡಗಿದುದು ತಮ್ಮ ಮೂವತ್ತಾರನೆಯ ವಯಸ್ಸಿನಲ್ಲಿ. ಕ್ರಿ.ಶ. 1950ರಲ್ಲಿ ರಚಿತವಾದ 'ಉಡುತಡಿಯ ಮಹಾದೇವಿಯಕ್ಕನ ಪುರಾಣಂ' ಎಂಬ ಕೃತಿಯು ರಚಿತವಾದ ಮೊದಲ ಪುರಾಣ ಕಾವ್ಯ. ಇಂಥ ರಚನೆಗೆ ತೊಡಗಲು ಕಾರಣ ವೀರಶೈವ ಮಠ ಮತ್ತು ಮಠಾಧಿಪತಿಗಳಿಂದ ಪ್ರೇರಣೆ. ಕೆಲವು ಸಲ ಭಕ್ತರು–ಅಭಿಮಾನಿಗಳು ತಮ್ಮ ಆರಾಧ್ಯ ದೇವರುಗಳು, ಗುರುಗಳ ಪುರಾಣಗಳನ್ನು ಬರೆಯಿಸಿದ್ದುಂಟು. ಭಾಮಿನೀಷಟ್ಪದಿಯಲ್ಲಿಯೇ ಪುರಾಣ ಕಾವ್ಯಗಳನ್ನು ಬರೆದವರು. ವೀರಶೈವ ಕವಿಗಳ ಕಾವ್ಯ ಪರಂಪರೆಯಲ್ಲಿಯೇ ತಮ್ಮ ಕಾವ್ಯರಚನಾಶೈಲಿಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಧರ್ಮತತ್ತ್ವಾಚರಣೆಗಾಗಿ ತಮ್ಮ ಬಾಳನ್ನು ಸವೆಯಿಸಿದ, ಸಮಾಜೋದ್ಧಾರಕ್ಕಾಗಿ ಗುರುಸ್ವರೂಪರಾಗಿ ಮಾರ್ಗದರ್ಶನ ನೀಡಿದ ಮಹಾತ್ಮರ, ಪುಣ್ಯಪುರುಷರ, ಮಹಾಂತರ, ಶಿವಯೋಗಿಗಳ ಚರಿತ್ರೆಗಳನ್ನು ದೃಷ್ಟಾಂತವಾಗಿ ಬಳಸಿಕೊಂಡು ಪುರಾಣಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಅಂಕಲಗಿ ಶ್ರೀ ಅಡವೀಶ್ವರ ಪುರಾಣ, ಕಲಬುರಗಿಯ ಶರಣ ಬಸವೇಶ್ವರ ಪುರಾಣ, ಗಂಜಿಗಟ್ಟಿ ಚರಮೂರ್ತೇಶ್ವರ ಪುರಾಣ, ಗಂಗಾವತಿಯ ಶ್ರೀ ಚನ್ನಬಸವಸ್ವಾಮಿ ಪುರಾಣ, ಚಿಕ್ಕೇನಕೊಪ್ಪದ ಶ್ರೀ ಚೆನ್ನವೀರ ಶರಣರ ಪುರಾಣ, ತ್ರಿಷಷ್ಠಿ ಪುರಾತನರ ಪುರಾಣ, ಮೃಡಗಿರಿ ಕರ್ತೃ ಜಗದ್ಗುರು ಅನ್ನದಾನೀಶ್ವರ ಪುರಾಣ, ವೀರಭದ್ರೇಶ್ವರ ಪುರಾಣ, ವೀರದಾಸೋಹಿಯಾದ ಶ್ರೀ ವೀರೇಶ್ವರ ಶಿವಶರಣರ ಪುರಾಣ, ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಪುರಾಣ, ಶ್ರೀ ಗೂಳ್ಯದ ಗಾದಿಲಿಂಗೇಶ್ವರ ಪುರಾಣ, ಶಿವಶರಣೆ ಗುಡ್ಡಾಪುರದ ದಾನಮ್ಮದೇವಿ ಪುರಾಣ, ಶ್ರೀ ಯೋಗಿರಾಜ ಪುರಾಣ, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಪುರಾಣ, ಶ್ರೀ

ಶಿವಲಿಂಗೇಶ್ವರ ಪುರಾಣ, ಸಿರಿಯೂರು ಸಿದ್ಧಲಿಂಗೇಶ್ವರ ಪುರಾಣ, ಹಾವೇರಿ ಶಿವಬಸವಪುರಾಣ, ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಗುರುಸಿದ್ಧೇಶ್ವರ ಪುರಾಣ, ಗಡಹಿಂಗ್ಲಜ ಸ್ವಾಮಿಗಳ ಪುರಾಣ, ಕಲಕೇರಿ ಗುರುಮಹಿಮೆಯ ಪುರಾಣ, ಶ್ರೀಶೈಲ ಜಗದ್ಗುರು ಪರಂಪರಾ ಪುರಾಣ – ಹೀಗೆ ಒಟ್ಟು 23 ಪುರಾಣಕಾವ್ಯಗಳನ್ನು ರಚಿಸಿದ ಕೀರ್ತಿವಿಶಾರದರು. ಹಾಗೆಯೇ ತಾವೇ ಪುರಾಣ ಪ್ರವಚನವನ್ನು ಮಾಡುವವರಾಗಿದ್ದರೆಂಬುದನ್ನು ಮರೆಯುವಂತಿಲ್ಲ. ಪ್ರವಚನ ಮತ್ತು ರಂಗಭೂಮಿಗೆ ಅವರು ಕೊಟ್ಟ ಕೊಡುಗೆ ಅದ್ಭುತ. ಅದರಲ್ಲೂ ಕಂಪನಿ ನಾಟಕ ಕ್ಷೇತ್ರದೊಳಗೆ ಸಾಕಷ್ಟು ಹೆಸರು ಮಾಡಿದ್ದರು. 'ಸಿದ್ಧರಾಮೇಶ್ವರ ಚರಿತ್ರೆ' ಎಂಬ ನಾಟಕವನ್ನು ಬರೆದು, ಅದನ್ನು ವೀರೇಶ್ವರ ಪುಣ್ಯಾಶ್ರಮದ ಸಂಗೀತ ಕಲಿಯುವ ಹುಡುಗರೊಳಗೆ ಅಭಿನಯ ಮಾಡಬಲ್ಲ ಹುಡುಗರಿಂದ ರಂಗದ ಮೇಲೆ ತಂದರು. ಅದು ಯಶಸ್ವಿಯೂ ಆಯಿತು. ನಂತರ ತಾವೇ ಪೌರಾಣಿಕ ಭಕ್ತಿಪ್ರಧಾನ ನಾಟಕಗಳನ್ನು ರಚಿಸಿದರು. ನರಗುಂದದೊಳಗೆ ಅದು ಮೊದಲನೆಯ ರಂಗಪ್ರಯೋಗವೂ ಆಯಿತು. ಸಿರಸಂಗಿ ಲಿಂಗರಾಜರ ಚರಿತ್ರಾತ್ಮಕ ನಾಟಕ ಮತ್ತು ಭಗವಾನ್ ಬಸವೇಶ್ವರ ನಾಟಕಗಳು ಜನರ ಮೇಲೆ ಪ್ರಭಾವ ಬೀರಿದವು. ನಂತರ 'ಹಾನಗಲ್ಲ ಕುಮಾರೇಶ್ವರ ಕೃಪಾಪೋಷಿತ ನಾಟ್ಯ ಸಂಘ' ಎಂಬ ನಾಟಕ ಕಂಪನಿ ಪ್ರಾರಂಭ ಮಾಡಿ, ತಮ್ಮ ಸ್ವಂತ ನಾಟಕಗಳನ್ನಲ್ಲದೇ ಬೇರೆಯವರ ನಾಟಕಗಳನ್ನು ರಂಗದ ಮೇಲೆ ತಂದರು. 'ಹೇಮರಡ್ಡಿ ಮಲ್ಲಮ್ಮ' ಎಂಬ ರಂಗ ನಾಟಕ 375 ಪ್ರಯೋಗ ಕಂಡು ಒಂದು ದಾಖಲೆಯೇ ಸರಿ. ಅವರೆಲ್ಲ ನಾಟಕಗಳಲ್ಲಿ ಧರ್ಮ, ನೀತಿ, ಭಕ್ತಿ, ಸಮಾನತೆ, ಸಾಮಾಜಿಕತೆ ಇವು ಇದ್ದೇ ಇರುತ್ತಿದ್ದವು. ಅವು ಸಮಕಾಲೀನ ಸಮುದಾಯಗಳಿಗೆ ನೈತಿಕ ಮೌಲ್ಯಗಳನ್ನು ಬಿಂಬಿಸುವಂತಹ, ಪರಿಣಾಮಕಾರಿ ಯಾಗುವಂತಹ ನಾಟಕಗಳಾಗಿದ್ದವು. ಇವರ ಪ್ರೇರಣೆಯಿಂದ ಚಿತ್ತರಗಿ, ಹೊಸಳ್ಳಿ, ಗದಗ-ಬೆಟಗೇರಿ, ಒಳ್ಳೆಯ ಸಾಧನೆಯನ್ನೇ ಮಾಡಲೆಂದು ಹೊಸ ನಾಟಕ ಕಂಪನಿಗಳು ಹುಟ್ಟಿಕೊಂಡವು.

ನಾಟಕದಂತೆ ಇನ್ನೊಂದು ಪ್ರಭಾವಿ ಮಾಧ್ಯಮವೆಂದರೆ ಕೀರ್ತನ ಮತ್ತು ಪ್ರವಚನ ಕಲೆ. ಈ ಎರಡೂ ಮಾಧ್ಯಮದಲ್ಲೂ ಪುಟ್ಟರಾಜರು ಒಳ್ಳೆಯ ಸಾಧನೆಯನ್ನು ಮಾಡಿ ತೋರಿಸಿದರು. ಅದಕ್ಕೆ ಸಂಪೂರ್ಣ ವಿಷಯ ಪರಿಜ್ಞಾನ, ಸಂಗೀತ, ಹಾಸ್ಯ, ಕಥೆಗಾರಿಕೆಗಳ ಜ್ಞಾನ ಚೆನ್ನಾಗಿರಬೇಕಾಗಿರುತ್ತದೆ. ಈ ಎಲ್ಲ ಕಲೆಗಳನ್ನು ಪುಟ್ಟರಾಜರು ಪಡೆದುಕೊಂಡಿದ್ದರು. ಅವರು 'ಶರಣ ಬಸವೇಶ್ವರ ಪುರಾಣದ ಪ್ರವಚನ'ವನ್ನು ಸತತ 25 ವರ್ಷ ನಡೆಸಿಕೊಟ್ಟ ವಿಶ್ವ ದಾಖಲೆ ಅವರದು. ಇವರಿಂದ ಪ್ರೇರಣೆಹೊಂದಿದ ಇವರ ಶಿಷ್ಯರು ಈಗಲೂ ಪುರಾಣ-ಪ್ರವಚನ ಮಾಡುತ್ತಲಿದ್ದಾರೆ. ಪುಟ್ಟರಾಜರು ಶಿವಶರಣರ ಚರಿತ್ರೆಗಳನ್ನು ಕೀರ್ತನೆಗಳ ಮೂಲಕವೂ ಪ್ರಸಾರ ಮಾಡಿದ್ದಾರೆ. ಪುಟ್ಟರಾಜರು ಅಂದಿನ ಶಿವಶರಣರಂತೆ ವಚನಕಾರರೂ ಹೌದು. 'ಗುರುಕುಮಾರ ಪಂಚಾಕ್ಷರಿ' ಎಂಬ ಅಂಕಿತದಲ್ಲಿ ಸಾವಿರಾರು

ವಚನಗಳನ್ನು ರಚಿಸಿದ್ದಾರೆ. ಅವರು 1991ರಲ್ಲಿ 'ಶ್ರೀ ಗುರು ವಚನ ಪ್ರಭು' ಎಂದುದಾಗಿ ವಚನ ಸಂಕಲನ ಗ್ರಂಥವನ್ನು ರಚಿಸಿದ್ದು; ಅದರಲ್ಲಿ 750 ವಚನಗಳಿವೆ. ತಮ್ಮ ಸ್ವರಚಿತ ವಚನಗಳನ್ನು ಮತ್ತು ಬಸವಾದಿ ಶಿವಶರಣರ ವಚನಗಳನ್ನು ರಾಗಬದ್ಧವಾಗಿ ಹಾಡುತ್ತಿದ್ದರು. ಒಂದು ವಚನ ಅವರದೇ ಇಂತಿದೆ:

**ನನ್ನ ಶರೀರವು ವೀಣಾದಂಡವಾಗಬೇಕು**
**ಮಸ್ತಕವು ಕಾಯವಾಗಬೇಕು,**
**ನರಗಳವು ತಂತಿಯಾಗಬೇಕು,**
**ಇದರಲ್ಲಿ ವ್ಯಾಪಿಸಿದ ಪರಮಾತ್ಮನಾದ**
**ನೀನು ಉದರದಲೊತ್ತಿ ಬಾರಿಸಿ ಮೂವತ್ತೆರಡು ರಾಗಗಳ**
**ಹಾಡಬೇಕಯ್ಯಾ ಗುರುಕುಮಾರ ಪಂಚಾಕ್ಷರೇಶ್ವರ**

ಇಂಥ ವಚನಗಳ ಜೊತೆಗೆ ಅನೇಕ ಭಾವಗೀತೆಗಳನ್ನೂ ರಚಿಸಿದ್ದಾರೆ. 'ಭಾವ ಮಂದಾಕಿನಿ' ಎಂಬ ಭಾವಗೀತೆಯ ಕವನಸಂಕಲನ ಪ್ರಕಟಿಸಿದ್ದಾರೆ. ಹೀಗೆ ಕನ್ನಡ ಭಾಷೆಯಲ್ಲಿ ನಾಟಕ, ಪುರಾಣ, ಭಾವಗೀತೆ, ವಚನ, ಕೀರ್ತನ, ಸಂಗೀತಶಾಸ್ತ್ರ, ಜೀವನ ಚರಿತ್ರೆ ಇವೇ ಮುಂತಾದವನ್ನು ರಚಿಸಿ ಕನ್ನಡ ಸಾಹಿತ್ಯ ಕಣಜವನ್ನು ಶ್ರೀಮಂತಗೊಳಿಸಿದರು. ಸಂಸ್ಕೃತದಲ್ಲಿ ಶ್ರೀಮತ್ ಕುಮಾರಗೀತೆ, ಪಂಚಾಕ್ಷರ ಸುಪ್ರಭಾತಂ, ಶ್ರೀ ರುದ್ರತಾತ್ಪರ್ಯ, ಶ್ರೀ ಲಿಂಗಸೂಕ್ತಂ, ಶ್ರೀ ಗುರುಸಿದ್ಧೇಶ್ವರ ಚಂಪೂ ಕಾವ್ಯಂ, ಶ್ರೀ ಶರಣ ಬಸವೇಶ್ವರ ಪುರಾಣ ಎಂಬ ಏಳು ಸಂಸ್ಕೃತ ಕೃತಿಗಳನ್ನು ಪ್ರಕಟಿಸಿದರು. 'ಶ್ರೀ ಕುಮಾರವಿಲಾಸ ಕಾವ್ಯಂ' ಎಂಬುದೊಂದು ಇವರು ರಚಿಸಿದ ಸಂಸ್ಕೃತದ ಮಹಾಕಾವ್ಯ. ಸಂಸ್ಕೃತದಲ್ಲಿ ಪ್ರತಿಭಾನ್ವಿತರಾಗಿದ್ದ ಪುಟ್ಟರಾಜರು ಹಿಂದಿ ಭಾಷೆಯಲ್ಲಿಯೂ ಅವರು ಬರೆದ ಸಾಹಿತ್ಯ ಮಾದರಿಯಾಗಿದೆ. ಸಿದ್ಧಾಂತ ಶಿಖಾಮಣಿ, ಶ್ರೀ ಕಾರಣಿಕ ಕುಮಾರ ಶಿವಯೋಗಿ, ಶ್ರೀ ಸಿದ್ಧಲಿಂಗ ವಿಜಯ ಪುರಾಣ, ಶ್ರೀ ಗುರು ಪಂಚಾಕ್ಷರ ಶಿವಯೋಗಿ, ಶ್ರೀ ಸಿದ್ಧಲಿಂಗ ವಿಜಯ ಪುರಾಣ, ಶ್ರೀ ಗುರು ಪಂಚಾಕ್ಷರ ಶಿವಯೋಗಿ, ಶ್ರೀ ಬಸವೇಶ್ವರ ಪುರಾಣ – ಈ ಮುಂತಾಗಿ ಐದು ಗ್ರಂಥಗಳನ್ನು ಹಿಂದಿ ಭಾಷೆಯಲ್ಲಿ ರಚಿಸಿದ ರಾಷ್ಟ್ರಪುರುಷರು. ಅವರು ನಾಡಪ್ರೇಮಿ, ರಾಷ್ಟ್ರಪ್ರೇಮಿ, ವಿಶ್ವಪ್ರೇಮಿಯಾಗಿದ್ದರು. ಬ್ರೈಲ್ ಲಿಪಿಯಲ್ಲಿ ಚೀಜುಗಳು ಮತ್ತು ಭವದ್ಗೀತಾ ಎಂಬೆರಡು ಕೃತಿಗಳನ್ನು ರಚಿಸಿ ಅಂಧರ ಬಾಳಿಗೆ ಬೆಳಕು ನೀಡಿದವರು.

ಪುಟ್ಟರಾಜರು ದಕ್ಷಿಣ ಭಾರತದ ಹಿಂದಿ ಪ್ರಚಾರ ಸಭಾದ 'ರಾಷ್ಟ್ರಭಾಷಾ' ಪರೀಕ್ಷೆ ಪಾಸಾಗಿದ್ದರು. ವ್ಯಾಕರಣದ ಬಗ್ಗೆ ಅವರಿಗೆ ಹೆಚ್ಚು ಗಮನವಿತ್ತು. 'ವ್ಯಾಕರಣ ಕಲ್ತರ ಭಾಷೆ ಸರಿಯಾಗಿ ಬರ್ತದ. ಇಂದಿನ ಹುಡುಗರಿಗೆ ವ್ಯಾಕರಣ ಬರೂದಿಲ್ಲ' ಎಂದು ಅವರು ಹೇಳುತ್ತಿದ್ದರು. ಅವರು ಹಿಂದಿ ಭಾಷೆಯನ್ನು ಕಲಿತದ್ದು ಹಿಂದೂಸ್ತಾನಿ ಸಂಗೀತ ಸಾಧನೆಗೆ ಹೆಚ್ಚು ಅನುಕೂಲವಾಯಿತೆಂದು ಹೇಳುತ್ತಿದ್ದರು. ಚೀಜ ರಚನೆಗೆ ಹಿಂದಿ

ಭಾಷೆ ಬೇಕಾಯಿತು. ಅದು ಕಾರಣ. ಅವರು ಹಿಂದಿ ಕಲಿತು ಅನೇಕ ಚೀಜ ಮಾಡಿದರಂತೆ. ಮೇಲೆ ಹೇಳಿದಂತೆ ಹಿಂದಿಯಲ್ಲಿ ಐದಾರು ಗ್ರಂಥಗಳನ್ನು ರಚಿಸಲೂ ಅನುಕೂಲವಾಯಿತು. ಭಾರತದ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರಪ್ರಸಾದ ಅವರನ್ನು ಕಾಣಲಿಕ್ಕೆಂದು ಅವರಲ್ಲಿಗೆ ಹೋದಾಗ, ತಾವು ಹಿಂದಿಯಲ್ಲಿ ರಚಿಸಿದ 'ಶ್ರೀ ಬಸವೇಶ್ವರ ಪುರಾಣ'ವನ್ನು ಅವರಿಗೆ ಕೊಟ್ಟರಂತೆ. ರಾಷ್ಟ್ರಪತಿಗಳು ಆ ಪುರಾಣ ಗ್ರಂಥವನ್ನು ನೋಡಿ ಸಂತೋಷಪಟ್ಟು ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು. ಅಷ್ಟೇ ಅಲ್ಲದೆ ರಾಷ್ಟ್ರಪತಿಯವರು ಪುಟ್ಟರಾಜರು ಕೊಟ್ಟ ಬಸವ ಪುರಾಣವನ್ನು ತಮ್ಮ ತಲೆಯ ಮೇಲಿಟ್ಟುಕೊಂಡು ಪುಟ್ಟರಾಜರನ್ನು ಪ್ರಶಂಸಿಸಿದ್ದುದು ಅಪೂರ್ವ ಸಂಗತಿಯಾಗಿದೆ.

ಪುಟ್ಟರಾಜರ ಗದ್ಯ ಗ್ರಂಥಗಳು ಕನ್ನಡಿಗರ ಮನೆಮಾತಾಗಿವೆ. ಅವು ಅಷ್ಟಾವರಣ ಕೀರ್ತನ ಕಥಾ ಮಾಲಿಕೆ, ಕದಿರೆ ರೇಮಯ್ಯ, ತತ್ತ್ವಬೋಧಾಮೃತ, ಪಂಚಾಕ್ಷರ ಗವಾಯಿಗಳು, ಪ್ರಸಾದ ಮಹಿಮೆ, ವ್ಯಾಖ್ಯಾನ ರತ್ನಮಾಲಿಕಾ ಹಾಗೂ ಶ್ರೀ ಹಾನಗಲ್ಲ ನಮ್ಮ ಗುರು ಕುಮಾರ ಶಿವಯೋಗಿಗಳು – ಎಂಬ ಈ ಏಳೂ ಗ್ರಂಥಗಳು ಮೌಲ್ಯವರ್ಧಕ ಕೃತಿರತ್ನಗಳಾಗಿವೆ. ಅದೇ ರೀತಿಯಲ್ಲಿರುವ ಪದ್ಯ ಗ್ರಂಥಗಳು–ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ನಾಮಾವಳಿ, ಚಂಪೂಕಾವ್ಯ, ಭಾವಮಂದಾಕಿನಿ, ಶ್ರೀ ಗುರು ವಚನ ಪ್ರಭ ಎಂಬೀ 4 ಗ್ರಂಥಗಳು ಪ್ರಸಿದ್ಧವಾಗಿವೆ. ಪುಟ್ಟರಾಜರನ್ನು ಪ್ರಸಿದ್ಧಿಗೆ ತಂದಿವೆ. ಹೀಗೆ ಡಾ. ಪುಟ್ಟರಾಜರು ಸಂಗೀತ, ಸಾಹಿತ್ಯ, ಶಿಕ್ಷಣ, ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರ ಹಿತವನ್ನು ಕಾಪಾಡುವಲ್ಲಿ ಯಶಸ್ವಿಯಾದವರು. ಇಂಥ ಅನೇಕ ಸ್ಮರಣೀಯ ಘಟನೆಗಳು ಸಮಾಜೋ–ಧಾರ್ಮಿಕ ಕಾರ್ಯಗಳು ಪುಟ್ಟರಾಜರ ಬದುಕಿನಲ್ಲಿ ಆಗಿಹೋಗಿವೆ.

ಪಂಚಾಕ್ಷರ ಗವಾಯಿಗಳವರ ಗುರುಗಳಾಗಿದ್ದ ಕಂಚಗಲ್ಲು ಬಿದರಿ ಹಿರೇಮಠದ ಪಟ್ಟಾಧ್ಯಕ್ಷರಾಗಿದ್ದ ಶ್ರೀ ಪ್ರಭುಕುಮಾರ ಸ್ವಾಮಿಗಳಿಂದ ಪುಟ್ಟರಾಜರಿಗೆ ಇಷ್ಟಲಿಂಗ ದೀಕ್ಷೆ ಆದ ದಿನವೇ ಅವರು ಮಂತ್ರೋಪದೇಶ ಮಾಡುವುದರೊಂದಿಗೆ 'ಅಂಧನೆಂದು ಕೀಳರಿಮೆ ಮಾಡಬೇಡ–ಧೈರ್ಯದಿಂದ ಸಾಧನೆ ಮಾಡು' ಎಂದು ಹರಸಿದ್ದು ಮುಂದೆ ಅದೇ ಬಾಲಕ ಪುಟ್ಟಯ್ಯ ಅದ್ಭುತವಾಗಿ ಸಾಧನೆಗೈದದ್ದು ಸ್ಮರಣೀಯ ಮತ್ತು ಶ್ಲಾಘನೀಯ ಘಟನೆಯಾಗಿತ್ತು ಎಂಬುದನ್ನು ಇಲ್ಲಿಯವರೆಗೆ ನನ್ನ ಅರಿಕೆಗೆ ಬಂದಷ್ಟು ತಿಳಿಯಪಡಿಸಿದ್ದೇನೆ. ಇವರ ಸಾಧನೆ–ಸಿದ್ಧಿಯ ದ್ಯೋತಕವಾಗಿ ತುಲಾಭಾರಗಳು ಅಗಣಿತ ಪ್ರಮಾಣದಲ್ಲಿ ನಡೆದವು. ಪ್ರಾರಂಭವಾದದ್ದೇ ಧಾರವಾಡ ಶ್ರೀ ಮುರುಘಾಮಠದಿಂದ ಮೊಟ್ಟಮೊದಲನೆಯ ಪುಟ್ಟರಾಜರ ತುಲಾಭಾರವಾದರೆ, ದಾವಣಗೆರೆಯಲ್ಲಿ 150 ತುಲಾಭಾರಗಳು ಆದವೆಂದೂ ತಿಳಿದುಬಂದಿದೆ. ಆನಂತರದಲ್ಲಿ ಎಡೆಬಿಡದೆ, ಓತೋಪ್ರೋತವಾಗಿ ತುಲಾಭಾರಗಳು ಸುಮಾರು 2104ಕ್ಕೂ ಹೆಚ್ಚು ನಡೆದವು. ಇದು ವಿಶ್ವ ದಾಖಲೆಯೂ ಆಗಿದೆ. ಅಂಧ–ಅನಾಥ ಮಕ್ಕಳ ಸಲುವಾಗಿ ಸಾಲ ಮಾಡಿ, ಭಿಕ್ಷೆ ಮಾಡಿಯೂ ಅವರ ಪ್ರಗತಿಗಾಗಿ

ಶ್ರಮಿಸಿದ ಏಕೈಕ ಮಹಾನುಭಾವರು ಪುಟ್ಟರಾಜರು. ನಾಟಕ ಕಂಪನಿಯ ನೈತಿಕ ಶುದ್ಧತೆಯನ್ನು ಕಾಪಾಡಿಕೊಂಡು ಬಂದರು. ನಾಟಕದಲ್ಲಿ ಬರುವ ಸ್ತ್ರೀ ಪಾತ್ರವನ್ನು ಪುರುಷರೆ ಮಾಡುವುದನ್ನು ಜಾರಿಗೊಳಿಸಿದರು. ನಾಟಕ ಕಂಪನಿಯ ಮೂಲಕವಾಗಿಯೇ ವೀರೇಶ್ವರ ಪುಣ್ಯಾಶ್ರಮದ ಮಕ್ಕಳನ್ನು ಪಾಲನೆ–ಪೋಷಣೆ ಮಾಡಿದರು. ಹೀಗೆ ಅವರ ಸ್ಮರಣೀಯ ಘಟನೆಗಳನ್ನು ಹೇಳುತ್ತ ಹೊರಟರೆ ಒಂದು ಮಹಾಸಂಪುಟವಾಗುತ್ತದೆ. ಅವರ ಬದುಕಿನ ಒಂದೊಂದು ಕ್ಷಣವೂ ಸ್ಮರಣೀಯವೇ. ಮುಕ್ಕಣ್ಣುಳ್ಳ ಶಿವ ನಮಗೆ ಕಾಣಿಸಲಾರನು. ಆದರೆ, ಕಣ್ಣಿಲ್ಲದ ಈ ಶಿವರೂಪಿ ಪುಟ್ಟರಾಜ ಗವಾಯಿಗಳವರು ನಮ್ಮೆದುರೇ ಅದ್ಭುತ ರೀತಿಯಲ್ಲಿ ಬದುಕಿ ಯಾರೂ ಸಾಧಿಸಲು ಅಸಾಧ್ಯವೆನಿಸಿದ ಲೋಕಕಲ್ಯಾಣ ಕಾರ್ಯ ಮಾಡಿದರು. ದಿನಾಂಕ 17 ಸೆಪ್ಟೆಂಬರ್ 2010ರಂದು ಪೂಜ್ಯರು ಲಿಂಗೈಕ್ಯರಾದಾಗ 8 ರಿಂದ 10 ಲಕ್ಷ ಜನ ಭಕ್ತರು ಪೂಜ್ಯರ ಅಂತಿಮ ದರ್ಶನವನ್ನು ಪಡೆದು ಧನ್ಯರಾದರು. ಅವರ ಪ್ರಶಸ್ತಿಗಳ ಪಟ್ಟಿಯೇ ಒಂದು ಮಾರುದ್ದದಷ್ಟಾಗುತ್ತದೆ. 'ನಡೆದಾಡುವ ದೇವರು' ಎಂಬ ಅನ್ವರ್ಥ, ಸಾರ್ಥಕ. ಇವರು ನಿಜವಾದ ಭಾರತ ರತ್ನ. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಗೌರವ ಡಾಕ್ಟರೇಟ್ ಉನ್ನತ ಪದವಿ ನೀಡಿ ಗೌರವಿಸಿದ್ದುದು, ಕರ್ನಾಟಕ ಸರ್ಕಾರದಿಂದ ಸಂಗೀತ ವಿದ್ವಾನ್ ಮತ್ತು ಕರ್ನಾಟಕ ರಾಜ್ಯೋತ್ಸವದ ಪ್ರಶಸ್ತಿಗಳು, ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಹಂಪಿ ಕರ್ನಾಟಕ ವಿಶ್ವವಿದ್ಯಾಲಯದಿಂದ ನಾಡೋಜ ಪ್ರಶಸ್ತಿ, ಬಸವಶ್ರೀ ಪುರಸ್ಕಾರ, ಕರ್ನಾಟಕ ಸರಕಾರದಿಂದ ಹಾಗೆಯೇ ಕೇಂದ್ರ ಸರಕಾರದಿಂದ ಪದ್ಮಭೂಷಣ ಪ್ರಶಸ್ತಿ, ಈಗ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸುವುದು ಸೂಕ್ತವೆಂದು ಕೋಟಿ ಕೋಟಿ ಭಕ್ತರ ಅಪೇಕ್ಷೆಯಾಗಿದೆ.

(ಮುಗಿಯಿತು)

ಬೆಳಗಿನೊಳಗಣ ಬೆಳಗು ಮಹಾಬೆಳಗೆಂಬ
ಪ್ರಸಾದದಲ್ಲಿ ಒದಗಿದ ಪ್ರಸಾದಿಯ ಪರಿಣಾಮದ
ಪರಮಾನಂದವನೇನೆಂದುಪಮಿಸುವೆನಯ್ಯಾ?
ಪರಮಾಶ್ರಯವೆ ತಾನಾಗಿ, ಕೂಡಲಸಂಗಮದೇವಯ್ಯಾ,
ಚನ್ನಬಸವಣ್ಣನೆಂಬ ಮಹಾಪ್ರಸಾದಿ
ಎನ್ನ ವಾಙ್ಮನಕ್ಕಗೋಚರನಾಗಿ, ನಾನೇನೆಂಬೆನಯ್ಯಾ?

– ಬಸವಣ್ಣ

# ಸಂಗೀತ ಮತ್ತು ಸೌಂದರ್ಯಮೀಮಾಂಸೆ

**ಡಾ. ಎನ್.ಎಂ. ಗಿರಿಜಾಪತಿ**

ಲಲಿತಕಲೆಗಳಲ್ಲಿ ಪ್ರಮುಖವೆನಿಸಿದ ಮತ್ತು ದೇಶ, ಭಾಷೆ, ಸೀಮೆಗಳ ಹಂಗಿಗೊಳಗಾಗದೆ ಬೆಳೆದು ಬಂದ ಅಪರೂಪದ ವಿಶ್ವಕಲೆ, ಶ್ರವ್ಯಪ್ರಕಾರದ ಪ್ರಥಮ ಕಲೆ 'ಸಂಗೀತ'. ಇದು ಮಾನವನಿರ್ಮಿತ ಕಲೆ ಎನ್ನುವುದು ನಿಜವಾದರೂ ಮೊದಲಿಗೆ ಪ್ರಕೃತಿಯಲ್ಲಿ ಪ್ರಕಟಗೊಂಡ ಕಲೆ ಎಂಬ ಪ್ರತೀತಿಯನ್ನು ಸಹ ಹೊಂದಿದೆ, ಪ್ರಕೃತಿಯ ಶಿಶುವಾಗಿ ಬೆಳೆದ ಮನುಷ್ಯನಲ್ಲಿ ಮೊದಮೊದಲಿಗೆ ಅನುಸರಣೆಯ ರೂಪದಲ್ಲಿ ಹೊಮ್ಮಿದ ಧ್ವನ್ಯಾನುಕರಣೆಯ ಶೈಲಿಗಳು ತದನಂತರದಲ್ಲಿ ಸ್ವಯಂ ಆಗಿ ನಿರೂಪಗೊಳ್ಳಲು ಕಾರಣವಾಯಿತು. ಹಾಗಾಗಿ ಸಂಗೀತವೆನ್ನುವುದು ಮನುಷ್ಯನಲ್ಲಿ ಅರಿವು ಅಂಕುರಗೊಂಡ ಕ್ಷಣಗಳಲ್ಲಿ ತನ್ನ ಸುತ್ತಲಿನ ವಿಶ್ವದ ಸೌಂದರ್ಯವನ್ನು ಕಂಡು ಹೊಮ್ಮಿದ ಮಧುರಭಾವಗಳ ಲಹರಿಯ ಸ್ವರೂಪಗಳಲ್ಲಿ ಹೊಮ್ಮಿದ್ದು ಎಂದು ಹೇಳಬಹುದಾದಷ್ಟು ಪ್ರಾಚೀನ ಕಲೆ. ಹಾಗಾಗಿ ಈ ಕಲೆಯನ್ನು ಮನುಷ್ಯನಲ್ಲಿ ಆವಿರ್ಭವಿಸಿದ್ದು ಎನ್ನುವುದಕ್ಕಿಂತ ನಾದಮಯವಾದ ಈ ಸೃಷ್ಟಿಯಲ್ಲಿ ಸ್ವಯಂ ನಿಷ್ಪನ್ನಗೊಂಡ ದೈವೀಶಕ್ತಿಯ ಸ್ವರೂಪದ್ದೆಂದು ತಿಳಿಯಲಾಗಿದೆ. ಇಲ್ಲಿನ ಸಸ್ಯಶ್ಯಾಮಲೆಯ ವನರಾಜಿಗಳ ನಡುವಣದ ಜಲಧಾರೆಗಳ ಜುಳು ಜುಳು ನಾದ, ಬೆಟ್ಟ – ಗುಡ್ಡ, ವನ–ಬನಗಳಲ್ಲಿ ಬೆಳೆದು ನಿಂತಿದ್ದ ಮುಗಿಲೆತ್ತರದ ಬಿದಿರು ಗಿಡಗಳು, ವಿವಿಧ ಜಾತಿಯ ಗಿಡಮರಗಳು ಅವುಗಳಲ್ಲಿ ಪೊಳ್ಳಾದ ಭಾಗದಿಂದ ಹಾಯ್ದು ಬರುವಲ್ಲಿ ಗಾಳಿಯ ಪ್ರವೇಶದಿಂದ ಉಂಟಾಗುತ್ತಿದ್ದ ಧ್ವನಿವಿಶೇಷತೆ, ಹಕ್ಕಿಪಕ್ಷಿಗಳ ಕಲರವ, ವಿವಿಧ ಪ್ರಾಣಿ ಸಮೂಹಗಳ ಧ್ವನಿಭಿನ್ನತೆಗಳನ್ನೆಲ್ಲ ಹೊತ್ತು ತಂದು ಮನುಷ್ಯನ ಅನುಭವಕ್ಕೆ ಕಾರಣವಾದ ಮಂದಾನಿಲದ ಪಲ್ಲವಿಗಳು ಆ ಮನುಷ್ಯನೊಳಗೆ ದ್ರವಿಸಿ ಸ್ರವಿಸಿ ಆನಂದದ ರಸಾನುಭೂತಿಗೆ ಕಾರಣವಾಗಿ ಅವನನ್ನು ರಸಾನ್ವೇಷಿಯಾಗಿ ಮಾಡಿದವು. ಈ ಅನ್ವೇಷಣಾ ಗುಣಗಳು ಕ್ರಮೇಣವಾಗಿ ಈ ವಿಶ್ವಸೃಷ್ಟಿಕರ್ತನ ಅನಂತತೆಯನ್ನು ಗ್ರಹಿಸಿ ಮಹದಾನಂದ ಸಾಧಿಸಿಕೊಳ್ಳುವುದರಲ್ಲಿ ಆ ಪರಬ್ರಹ್ಮದೊಡನೆ ರಸೈಕ್ಯತೆಯನ್ನು ಗಳಿಸಲು ಮಾಧ್ಯಮವಾಗಿದೆ ಎನ್ನುವುದಕ್ಕೆ ಸಂಗೀತ ಕಲೆಯ ಬೆಳವಣಿಗೆ ಮತ್ತು ಅದರ ವಿವಿಧ ಮಜಲುಗಳ ವಿಕಾಸವನ್ನು ಕಾಣಲು ನಮ್ಮ ಕಣ್ಣಮುಂದೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ.

ರಸೋತ್ಪತ್ತಿ ಮತ್ತು ಅಭಿವ್ಯಕ್ತಿಯ ಅರಿವುಗಳಿಂದಾಗಿ ಮನುಷ್ಯನ ಚಿತ್ರವೃತ್ತಿಗಳಲ್ಲಿ ಕಾಲಕ್ರಮೇಣ ರೂಪಗೊಂಡ ಚಿಂತನಾ ಪ್ರವೃತ್ತಿ ಮತ್ತು ಪ್ರಯೋಗ ವಿಧಾನಗಳು ಸಂಗೀತವನ್ನು ಆವಾಹನೆಮಾಡಿಕೊಂಡಂತೆ ಕಲಾವಿದರನ್ನು ಒಳಗುಮಾಡಿಕೊಂಡದ್ದು ಸಂಗೀತ ಕಲೆಯ ಮಹತ್ವದ ಬೆಳವಣಿಗೆಗೆ ಕಾರಣವಾಯಿತು. ಭಾರತೀಯ ಸಂದರ್ಭಗಳಲ್ಲಿ ಧರ್ಮಸಂರಕ್ಷಣೆ ಎನ್ನುವುದು ಕಲೆಗಳ ಮೂಲೋದ್ದೇಶಗಳಾಗಿದ್ದವು ಎಂಬುದಕ್ಕೆ ಸಂಗೀತವು ಹೊರತಾಗಿರಲಿಲ್ಲ. ವೇದಮಂತ್ರಗಳೆಂದರೆ, ಆ ಮಂತ್ರೋಚ್ಚಾರಣೆ ವಿಧಿ ವಿಧಾನಗಳೆಂದರೆ ಅದು ಸಂಗೀತವೇ ಆಗಿದ್ದಿತು. ಅದರಲ್ಲಿಯೂ ಸಾಮವೇದವು ಸಂಗೀತದ ಕೋಶವೇ ಆಗಿ ಹೊರಹೊಮ್ಮಿ ಈ ಕ್ಷೇತ್ರದ ಕ್ಷಿತಿಜವನ್ನು ಲೌಕಿಕ ಮತ್ತು ಪಾರಮಾರ್ಥಿಕ ಲೋಕಗಳ ನಡುವಣದ ಸೇತುವನ್ನಾಗಿ ತೋರತೊಡಗಿತು.[1] ದೇವಲೋಕದ ನಾರದ, ತುಂಬುರ ಮತ್ತು ಗಂಧರ್ವರು ಸಂಗೀತಜ್ಞರಾಗಿಯೇ ಪೂಜ್ಯರಾದದ್ದು ಇದರ ಮಹತ್ವವನ್ನು ನಿರೂಪಿಸುತ್ತದೆ. ಹಾಗಾಗಿ ಸಂಗೀತವೆನ್ನುವುದು ಲೌಕಿಕರಿಗೆ ಚತುರ್ವಿಧ ಪುರುಷಾರ್ಥ ಸಾಧನೆಯಲ್ಲಿನ ಒಂದು ಮಾಧ್ಯಮವಾಗಿ ಮನ್ನಣೆ ಪಡೆಯಿತು. ತ್ರಿಮೂರ್ತಿಗಳು ನಾದಪ್ರಿಯರಾಗಿ, ಶಿವತಾಂಡವ ನೃತ್ಯದ ರೂಪಕವಾದ ನಟರಾಜನೆನಿಸಿದಂತೆ ಶಿವೆ, ಸರಸ್ವತಿಯರು ಈ ಸಂಗೀತ ಸಾಧನೆಯ ಖನಿಜಗಳಾಗಿ ಪುರಾಣಗಳಲ್ಲಿ, ಪುರಾಣಕಾವ್ಯಗಳಲ್ಲಿ ಚಿತ್ರಿತಗೊಂಡರು. ಹೀಗಾಗಿ ನಮ್ಮಲ್ಲಿ ಸಂಗೀತವೆನ್ನುವು ದನ್ನು ಸೌಂದರ್ಯದೃಷ್ಟಿಯ ಭಾವಗಳಿಗಿಂತ ಅಧ್ಯಾತ್ಮ ಜ್ಞಾನದೃಷ್ಟಿಯ ಪರಂಪರೆಯಲ್ಲಿ ಆದ್ಯತೆ ಪಡೆದುಕೊಂಡಿತು. ಸಂಗೀತವೆನ್ನುವುದು ನಾದರೂಪದ ದರ್ಶನವೆಂದು ಹಿರಿಯ ವಿದ್ವಾಂಸರು ಹೇಳಿದ್ದಾರೆ. ಅದರಲ್ಲಿ ಶುದ್ಧಸಂಗೀತವು ದರ್ಶನವೇ ಆಗಿದೆ, (ಇಲ್ಲಿ ದರ್ಶನವೆಂದರೆ ಕಾಣಿಸು, ಕಾಣುವುದು ಎಂದರ್ಥವಿದೆ. ಹಾಗಾಗಿ ಸಂಗೀತದ ರಸಾನಂದದಲ್ಲಿ ತನ್ಮಯನಾದವನಿಗೆ ಭಗವಂತನನ್ನು ದರ್ಶಿಸುವ ಹಾಗೆ ಶ್ರೋತೃಗಳಿಗೂ ಸಹ ದರ್ಶಿಸುವಂತೆ ಮಾಡಬಲ್ಲ ಸಾಮರ್ಥ್ಯವಿದೆಯೆಂದು ಭಾವಿಸಬಹುದಾಗಿದೆ) ಈ ದರ್ಶನವು ದಾರ್ಶನಿಕರಿಗೆ ಸಾಧನಾಮಾರ್ಗವೆಂಬ, ದೈವಸಾಕ್ಷಾತ್ಕಾರದ ಪಥವೆಂಬ ಪರಿಕಲ್ಪನೆಗಳು ಭಾರತೀಯ ಸಂಗೀತವಲಯದಲ್ಲಿ ಅಧಿಕ ಪ್ರಮಾಣದಲ್ಲಿ ಬೆಳೆದು ಬಂದವು. ಹಾಗಾಗಿ ಸಂಗೀತಗಾರನ ರಚನೆಗಳ ಅರ್ಥಗಳು ಅವು ಆಹ್ವಾನಿಸುವ (Evoke) ಆಧ್ಯಾತ್ಮಿಕ ಅನುಭಾವಗಳಲ್ಲಿಯೇ (Spiritual experience) ಇರುತ್ತವೆಂದು ವ್ಯಾಖ್ಯಾನಿಸಿ ರುವುದನ್ನು ಕಾಣಬಹುದಾಗಿದೆ. ದಕ್ಷಿಣ ಭಾರತದಲ್ಲಿನ ಶ್ರೀ ತ್ಯಾಗರಾಜರು, ಕನಕ – ಪುರಂದರದಾಸರಾದಿಯಾಗಿ ಕಂಡುಬರುವ ದಾಸಪರಂಪರೆ ಈ ಸಂಗೀತ ಮಾಧ್ಯಮವನ್ನು ಭಕ್ತಿಪಂಥದ ಮೂಲ ಮಾಧ್ಯಮವನ್ನಾಗಿ ಬಳಸಿ ತೋರಿದ್ದುದನ್ನು ನಾವಿಲ್ಲಿ ಸ್ಮರಿಸಬಹು ದಾಗಿದೆ. ಈ ದಾರ್ಶನಿಕ ಅಭಿಜ್ಞತೆಗಳು ನೀಡಿದ ಅನುಭವಗಳು ಸಂಗೀತಗಾರರು ಮತ್ತು ಶ್ರೋತೃಗಳಲ್ಲಿ ಕ್ರಮೇಣ ಕಲಾಭಿಜ್ಞತೆಯನ್ನು ಹುಟ್ಟುಹಾಕತೊಡಗಿದವು.

ಮೊದಲಿಗೆ ಸಂಗೀತವೆನ್ನುವುದನ್ನು ವಾದ್ಯ ಮತ್ತು ನೃತ್ಯಗಳೊಂದಿಗೆ ಸಂಯೋಜಿಸಿ ಹೇಳುವ ಪ್ರಯತ್ನಗಳಿದ್ದವು. ನಮ್ಮ ಪೂರ್ವಸೂರಿಗಳು ಗೀತಾವಾದ್ಯಂ ಚ ನೃತ್ಯಂ ಚ ತ್ರಯಂ ಸಂಗೀತಮುಚ್ಚತೆ' ಎಂದು ಹೆಸರಿಸಿಕೊಂಡು ಬಂದಿದ್ದರು. ಆದರೆ ಕಾಲಕ್ರಮೇಣ ಇಲ್ಲಿನ ಗೀತಾ ಮತ್ತು ವಾದ್ಯಗಳು ಸಂಗೀತಕ್ಕೆ ಅಂಕಿತಗೊಂಡು ನೃತ್ಯ ಅದರಿಂದ ಬೇರ್ಪಟ್ಟಿತು. ಜೊತೆಗೆ ಸಾಹಿತ್ಯವೂ ಇಲ್ಲಿ ಪ್ರವೇಶ ಪಡೆದು ನಾದದಿಂದ ಹೊಮ್ಮುತ್ತಿದ್ದ ಭಾವಾವೇಷಗಳಿಗೆ ನವ ಹೊಳಪನ್ನು ತುಂಬುವ ಸಾಹಿತ್ಯ ರಚನೆಗಳು ಮುನ್ನೆಲೆಗೆ ಬಂದು ಸಂಗೀತದ ಕ್ಷಿತಿಜವನ್ನು ಮತ್ತಷ್ಟು ವಿಸ್ತರಿಸಲು ಕಾರಣವಾಯಿತು. ಸಂಗೀತವೆಂದರೆ ಹಾಡು, ಗಾಯನವೆಂಬ ಪರಿಕಲ್ಪನೆಗಳು ಸಂಗೀತವನ್ನು ಮತ್ತಷ್ಟು ಜನಪ್ರಿಯಗೊಳ್ಳುವಂತೆ ಮಾಡಿದವು. ಒಟ್ಟಾರೆ ಈ ಲಲಿತಕಲೆಗಳ ಸಂಸರ್ಗಗಳ ಮೂಲಕ ತನ್ನ ಆನಂದದ ಭಾವ–ವಿಭಾವ ಸಂಚಾರಿ ಮತ್ತು ಸ್ಥಾಯೀಸ್ವಭಾವಗಳನ್ನು ವಿಸ್ತರಿಸಿಕೊಂಡು ಕಲಾಮೀಮಾಂಸೆಗಳ ತಳಹದಿಗಳಿಂದ ತನ್ನ ಒಟ್ಟಾರೆ ಮಹೋನ್ನತವೆನಿಸುವ ಜೀವನ ಮೀಮಾಂಸೆಯನ್ನು ಕಾಲಾಕಾಲಕ್ಕೆ ವಿಕಸನಗೊಳಿಸಿಕೊಂಡ ಮನುಷ್ಯ ಜ್ಞಾನ ಶೋಧನೆಗಳತ್ತ ಮುಖಮಾಡಿದ. ಈ ಎಲ್ಲದರ ಪರಿಣಾಮಗಳಿಂದಾಗಿ ಮನುಷ್ಯರಲ್ಲಿ ದೈವಿಕ ಮತ್ತು ಸಾತ್ವಿಕ ಸಂಸ್ಕಾರಗಳು ಮೊಳೆತು ಆ ಮೂಲಕ ಸುಸಂಸ್ಕೃತ ಸಮಾಜಗಳ ನಿರ್ಮಾಣ ಮತ್ತು ನಿರ್ವಹಣೆಗೆ ಕಾರಣವಾದವು.

ಸಂಗೀತವು ಒಂದು ಕಲೆಯೇ? ಆ ಕಲೆಯು ಸೌಂದರ್ಯಪ್ರಧಾನವಾದದ್ದೇ? ಸಂಗೀತವು ಒಂದು ಶಾಸ್ತ್ರವೇ? ಆ ಶಾಸ್ತ್ರವು ಧರ್ಮಪ್ರಧಾನವಾದದ್ದೇ? ಇತ್ಯಾದಿ ಚರ್ಚೆಗಳು ನಡೆದಿವೆ. ಇಲ್ಲಿ ಮೊದಲಿಗೆ ಕಲೆ ಎಂದರೇನು ಎನ್ನುವ ಪ್ರಶ್ನೆ ಕುರಿತಂತೆ ಪರಿಚಯಿಸಿಕೊಳ್ಳು ವುದು ಅಗತ್ಯವೆನಿಸುತ್ತದೆ. 'ಕಲೆ' ಇದರ ಸಾಮಾನ್ಯ ಮತ್ತು ವಿಶೇಷಾರ್ಥವೆಂದರೆ ಸುಂದರವಾಗಿರುವುದು, ಶೃಂಗಾರವಾಗಿರುವುದು ಸೌಂದರ್ಯ' ಎಂದರ್ಥ. 'ಕಲೆ' ಈ ಪದದಲ್ಲಿನ 'ಕ' ಇದು ಕರ್ತೃತ್ವಸೂಚಕ ಅಂದರೆ ಸೃಷ್ಟಿ ಎನ್ನುವ ಅರ್ಥವನ್ನು ಒಳಗೊಂಡಿದೆ. ಈ ಸೃಷ್ಟಿಯ ಕೊನೆಯ ಅರ್ಥವಾದ 'ಲಯ' ಸೂಚಕವಾಗಿ 'ಲ' ವರ್ಣವಿದೆ ಎಂಬ ವಿವರಗಳನ್ನು ಸಂಸ್ಕೃತ ಕೃತಿಗಳಾದ 'ಪ್ರಪಂಚಸಾರ' ಮತ್ತು 'ಮಾತೃಕಾರ್ಣವ' ಕೃತಿಗಳಲ್ಲಿ ಪ್ರಸ್ತಾಪಿಸಲಾಗಿದೆ. ಇದರ ಸಾಮಾನ್ಯ ಅರ್ಥ ಮನುಷ್ಯನಲ್ಲಿ ಸೃಜನಶೀಲ ಪ್ರವೃತ್ತಿಯನ್ನು ಸೃಷ್ಟಿಸುವಂತೆ ಮಾಡುವುದರ ಸೂಚಕವಾಗಿ 'ಕ' ಹಾಗೆ ಸೃಷ್ಟಿಗೊಂಡ ಸೃಜನಶೀಲ ಕಲಾಪ್ರತಿಭೆಯು ಪ್ರೇಕ್ಷಕರಿಗೆ ಆನಂದ ನೀಡುವುದರ ಮೂಲಕ ಅವರ ಮನಸ್ಸಿನ ಕ್ಲೇಷಗಳನ್ನು ಆ ಕಾಲದ ಮಟ್ಟಿಗಾದರೂ ಕಳೆದು (ಇಲ್ಲದಂತೆ ಮಾಡಿ) ಸಂತೋಷದಿಂದ ಮೈಮರೆಯುವಂತೆ ಮಾಡುವ ಲಯದ 'ಲ' ಶಕ್ತಿ ಈ ಕಲೆಗಳಿಗೆ ಇರುತ್ತದೆಂದು ಭಾವಿಸಬಹುದಾಗಿದೆ. ಇಂಗ್ಲಿಷಿನಲ್ಲಿನ 'Art' ಎನ್ನುವ ಪದಕ್ಕೆ ಸಂವಾದಿಯಾಗಿ ಭಾರತೀಯ ಬಹುಭಾಷೆಗಳಲ್ಲಿ 'ಕಲೆ' ಕಲಾ ಎನ್ನುವ ಪದ

ಬಳಕೆಯಾಗುತ್ತಿದೆ. ಕನ್ನಡದಲ್ಲಿಯೂ ಸಹ ನಾವು ಕಲೆ ಮತ್ತು ಕಲಾ ಎರಡೂ ಪದಗಳನ್ನು ಪ್ರಯೋಗಿಸಿಕೊಂಡು ಬರುತ್ತಿದ್ದೇವೆ. ಇಂಗ್ಲಿಷಿನಲ್ಲಿನ ಈ 'Art' ಪದವು ಮೂಲತಃ ಲ್ಯಾಟಿನ್ ಭಾಷೆಯ ಪದ. ಇದರ ಮೂಲ ರೂಪ – 'Ars' ಎಂದು ತಿಳಿಯಲಾಗಿದೆ. ಇದರ ಅರ್ಥ meaning skill or craft, The product of a body knowledge most often using set of skills ಅಂದರೆ ಕೌಶಲ ಅಥವಾ ಕರಕುಶಲತೆ. ಮನುಷ್ಯ ತನ್ನಲ್ಲಿನ ವಿವಿಧ ಕೌಶಲ್ಯಗಳ ಮೂಲಕ ವ್ಯಕ್ತಗೊಳಿಸುವ ಅವನ ನಡವಳಿಕೆಗಳ ಒಟ್ಟು ಮೊತ್ತ ಎಂದು ವಿಶಾಲ ಅರ್ಥದಲ್ಲಿ ತಿಳಿಯಲಾಗಿದೆ.[2]

ಈ ಕಲೆಗಳಲ್ಲಿ ಪ್ರಧಾನವಾಗಿ ಎರಡು ಪ್ರಕಾರಗಳನ್ನು ಗುರುತಿಸಿದೆ. ಅವುಗಳೆಂದರೆ ಶ್ರವ್ಯ ಮತ್ತು ದೃಶ್ಯಕಲೆಗಳು. ಈ ಮೊದಲು ಹೇಳಿದಂತೆ ವಿಶ್ವಸೃಷ್ಟಿಯ ಅನನ್ಯತೆಯ ಒಡಲಲ್ಲಿ ಜನ್ಯಗೊಂಡ 'ಸಂಗೀತ' ಪ್ರಕೃತಿದತ್ತವಾದ ಶ್ರವ್ಯಕಲೆ. ಆರಂಭದಲ್ಲಿ ಹೇಳಿದಂತೆ ಸಂಗೀತಕ್ಕೆ ಭಾಷೆಗಳೂ ಇಲ್ಲ, ಭಾಷೆಗಳ ಹಂಗೂ ಇಲ್ಲ ಎನ್ನುವ ಮಾತುಗಳಿವೆ. ಜಗತ್ತಿನ ಯಾವುದೇ ಮೂಲೆಯಲ್ಲಿರುವ, ದೇಶ, ಭಾಷೆ, ಪ್ರದೇಶಗಳ ಭಿನ್ನ ಸಂಸ್ಕೃತಿಗಳ ಸಮುದಾಯಗಳಿಗೆ ಸಂಗೀತ ಆನಂದ ನೀಡಬಲ್ಲದು. ಕಾರಣ ಅದರಲ್ಲಿ ಅಂತರ್ನಿಹಿತ ವಾಗಿರುವ ನಾದಮಯ ತತ್ವ ಅಥವಾ ಗೇಯತೆಯ ಗುಣ. ಸಾಮರಸ್ಯದಿಂದೊಡಗೂಡಿದ ನಾದಗಳಿಂದ ಭಾವೋತ್ಪನ್ನ ಅಥವಾ ಭಾವದ ಅಭಿವ್ಯಕ್ತಿಯನ್ನು ಸಾಧಿಸುವ ಈ ಕಲೆ, ಆಲಿಸುವ ಪ್ರತಿಯೊಬ್ಬರಿಗೂ ರಸಾನುಭೂತಿಯನ್ನು ಒದಗಿಸಬಲ್ಲದು. ಹಾಗೆ ನೋಡಿದಲ್ಲಿ ಮನುಷ್ಯರಷ್ಟೇ ಅಲ್ಲದೆ ಇತರ ಜೀವಿಗಳನ್ನು ಸಹ ಆನಂದ ಹೊಂದುವಂತೆ ಮಾಡಬಲ್ಲ ಶಕ್ತಿ ಸಂಗೀತಕ್ಕೆ ಇದೆ. ಈ ಕುರಿತಂತೆ ತೈತ್ತಿರಿಯೋಪನಿಷತ್ತಿನಲ್ಲಿ ಹೇಳಿರುವ ಈ ಮಾತುಗಳನ್ನು ಗಮನಿಸಬಹುದಾಗಿದೆ.

ಆನಂದೋ ಬ್ರಹ್ಮೇತಿ ವ್ಯಜನಾತ್
ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ।
ಆನಂದೇನ ಜಾತಾನಿ ಜೀವಂತಿ
ಆನಂದಂ ಪ್ರಯಂತ್ಯಭಿಸಂವಿಶಂತೀತಿ ॥

ಮನುಷ್ಯ ಆನಂದವನ್ನು ಬ್ರಹ್ಮವೆಂದು ಭಾವಿಸಿದ. ಈ ವಿಶ್ವದಲ್ಲಿ ಪ್ರತಿ ಜೀವಿಗಳು ಆನಂದದಿಂದಲೇ ಹುಟ್ಟಿ, ಆನಂದದಿಂದಲೇ ಜೀವಿಸುತ್ತವೆ ಮತ್ತು ಕೊನೆಗೆ ಅವು ಆನಂದವನ್ನು ಪ್ರವೇಶಿಸುತ್ತವೆ. ಬ್ರಹ್ಮದಿಂದ ಬಂದ ಜೀವಲೋಕ ಮತ್ತೆ ಬ್ರಹ್ಮದಲ್ಲಿಯೇ ಲೀನವಾಗುವುದೆಂದರ್ಥ. ಇದನ್ನು ಭಾರತೀಯ ಧರ್ಮ ಮತ್ತು ಆಧ್ಯಾತ್ಮಿಕ ಪರಿಭಾಷೆಗಳಲ್ಲಿ ಮೋಕ್ಷವೆಂದು ಹೆಸರಿಸಿ ನಮ್ಮ ಚತುರ್ವಿಧ ಪುರುಷಾರ್ಥಗಳಲ್ಲಿ ಸ್ಥಾನ ಕಲ್ಪಿಸಲಾಗಿದೆ. ಅದರಲ್ಲಿನ ಮೊದಲ ಸ್ಥಾನವಾದ ಧರ್ಮವೆನ್ನುವುದು ವಿವಿಧ ಕಲೆಗಳ ಮೂಲಕ ಮನುಷ್ಯನಿಗೆ ಅರಿವನ್ನು ಉಂಟುಮಾಡುವ ಮೋಕ್ಷಗಾಮಿನಿಗಳಾಗಿ ಕಾರ್ಯ ನಿರ್ವಹಿಸು

ತ್ತವೆ.[3] ಆದರೆ ಪಾಶ್ಚಾತ್ಯರಲ್ಲಿ ಈ ತತ್ವಜಿಜ್ಞಾಸೆಗಳ ಭಾಗವಾಗಿ ಸೌಂದರ್ಯಮೀಮಾಂಸೆ ಬೆಳವಣಿಗೆ ಕಂಡಿದೆ. ಇದನ್ನು ಅವರು Aesthetics ಎಂದು ಹೆಸರಿಸಿದ್ದಾರೆ. ಇದನ್ನು ಸೌಂದರ್ಯಶಾಸ್ತ್ರವೆಂದು ಸಹ ಅಧ್ಯಯನ ಮಾಡಲಾಗುತ್ತಿದೆ. ಭಾರತೀಯರು ತಮ್ಮ ಕಾವ್ಯನಿರ್ಮಿತಿಗಳ ವಿವೇಚನೆಗಳಲ್ಲಿ ಈ ಸೌಂದರ್ಯದ ಪರಿಕಲ್ಪನೆಗಳನ್ನು ಕುರಿತಂತೆ ಅಲಂಕಾರಪ್ರಸ್ಥಾನ, ರಸಪ್ರಸ್ಥಾನ, ಧ್ವನಿಪ್ರಸ್ಥಾನ ಮುಂತಾದ ಕಡೆಗಳಲ್ಲಿ ವಿಫುಲವಾಗಿ ಹೇಳಿರುವುದನ್ನು ನಾವು ಇಲ್ಲಿ ನಿರಾಕರಿಸುವಂತಿಲ್ಲ.

**ಸಂಗೀತದಲ್ಲಿನ ಸೌಂದರ್ಯಮೀಮಾಂಸೆ**

ಹೃದಯಸಂವೇದಿಯಾದ ಸಂಗೀತವು ಸೌಂದರ್ಯದ ಪ್ರತಿನಿಧೀಕರಣವಾಗಿ ರೂಪಗೊಂಡಿದೆ. ಆದರೆ ಇಲ್ಲಿನ ಸೌಂದರ್ಯವು ಯಾವುದೇ ಹೊರಗಿನ ರೂಪಾತಿಶಯಗಳನ್ನು, ಅಲಂಕಾರಿಕ ವೈಭವಗಳನ್ನು ಅವಲಂಬಿಸಿರುವಂತಹುದಲ್ಲ. ಬದಲಿಗೆ ಇದು ಸಂಗೀತಜ್ಞನ ಅಂತರಂಗದಿಂದ ಹೊಮ್ಮುವ ಧ್ವನಿಶೀಲ ಗುಣವಂತಿಕೆಯಿಂದ ಕೂಡಿರುತ್ತದೆ. ಧ್ವನಿಗಳ ಕಲಾತ್ಮಕ ಸಂಯೋಜನೆಯೇ ಇಲ್ಲಿನ ಸೌಂದರ್ಯ. ಈ ಸೌಂದರ್ಯದ ಪ್ರತಿನಿಧಿತ್ವ ಭಾರತೀಯ ಮತ್ತು ಪಾಶ್ಚಾತ್ಯ ಎರಡೂ ಪ್ರಕಾರಗಳಲ್ಲಿಯೂ ಕಂಡುಬರುತ್ತದೆ. ಆದರೆ ಇವುಗಳಲ್ಲಿ ಸಾಕಷ್ಟು ಅಂತರಗಳಿವೆ; ಭಾರತೀಯ ಸಂಗೀತವು ಮುಖ್ಯವಾಗಿ ಕಛೇರಿ ರೂಪದ ಕಲಾವಿದ ಕೇಂದ್ರಿತವಾಗಿ ಅಂದರೆ ಸೋಲೋ (Solo) (ಮುಖ್ಯವಾಗಿ ಪಕ್ಕವಾದ್ಯ ಕಲಾವಿದರನ್ನು ಒಳಗೊಂಡಂತೆ ಬರುವ ಗಾಯಕ / ಗಾಯಕಿ) ಮಾದರಿಯಲ್ಲಿ ಹೆಚ್ಚಾಗಿ ಕಂಡುಬರುವ ಪ್ರಯೋಗ. ಇದು ಮುಖ್ಯವಾಗಿ ಧ್ವನಿ ಮಾಧುರ್ಯರೂಪದಲ್ಲಿರುತ್ತದೆ. (ಇದನ್ನು ಇಂಪು ಅಥವಾ ಮೆಲೊಡಿ ಎಂದು ಹೆಸರಿಸಬಹುದು) ಹಾಗಾಗಿ ಇಲ್ಲಿ ಸೌಂದರ್ಯದ ಅಭಿವ್ಯಕ್ತಿ ಎನ್ನುವುದು ಮಾಧುರ್ಯ ಮತ್ತು ಸ್ವರಾವರ್ತನ, ಸ್ವರವೈವಿಧ್ಯತೆ ಮತ್ತು ರಾಗದ ಪರಿಕಲ್ಪನೆಗಳಿಗೆ ಬದ್ಧವಾಗಿ ಇರಬೇಕಾಗುತ್ತದೆ. ಭಾರತೀಯ ಸಂಗೀತದ ಸೌಂದರ್ಯ ಲಕ್ಷಣವನ್ನು ಕುರಿತಂತೆ ಎಸ್. ವಂದೋಪಾಧ್ಯಾಯರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿರುವ ಸಂಗತಿಗಳನ್ನು ಗಮನಿಸಬಹುದಾಗಿದೆ:

ಯೋಯಂ ಧ್ವನಿ ವಿಶೇಷಸ್ತು ಸ್ವರವರ್ಣ ವಿಭೂಷಿತಃ ।
ರಂಜಕೋ ಜನಚಿತ್ತಾನಾಂ ಸ ರಾಗಃ ಕಥ್ಯತೇ ಬುದ್ಯೈಃ ॥

ಯಾವುದು ಧ್ವನಿವಿಶೇಷತೆಯಿಂದ ಕೂಡಿ, ಸ್ವರವರ್ಣಗಳಿಂದ ಭೂಷಿತವಾಗಿ ಜನರ ಮನಸ್ಸನ್ನು ಉಲ್ಲಾಸಗೊಳಿಸುವುದೋ ಅದು ವಿದ್ವಾಂಸರಿಂದ ರಾಗವೆನಿಸಿಕೊಳ್ಳುತ್ತದೆ. ಒಟ್ಟಾರೆಯಾಗಿ ನೋಡುವುದಾದರೆ ಸಂಗೀತಶಾಸ್ತ್ರದಲ್ಲಿನ ರಾಗಗಳ ಪರಿಕಲ್ಪನೆ ಭಾರತೀಯ ಪ್ರತಿಭೆಯ ವಿಶಿಷ್ಟ ಕೊಡುಗೆ. ಇಲ್ಲಿ ಪ್ರಕಟಗೊಂಡ ಮತ್ತು ಪ್ರಯೋಗಗೊಂಡ ರಾಗಗಳು, ಭಾವ–ವಿಭಾವಗಳು, ತಾಳಗಳು ಬೆಳೆದು ಸಮ್ಮಿಳಿತವಾಗಿ ಸಂಗೀತಕ್ಕೆ ಒಂದು ವಿಶಿಷ್ಟ

ರೂಪ ದೊರೆತಿದೆ. ಈ ರಾಗಸಂಗೀತದ ವೈಶಿಷ್ಟ್ಯವೆಂದರೆ, ಅದರಲ್ಲಿ ರಾಗವೇ, ಅಂದರೆ ನಾದವೇ ಸಂಗೀತದ ಭಾಷೆ ಹಾಗೂ ಸಂಗೀತದ ಅರ್ಥ ಕೂಡ ಆಗಿದೆ.[5]

ಪಾಶ್ಚಾತ್ಯರಲ್ಲಿ ಸಂಗೀತಪ್ರಯೋಗವೆನ್ನುವುದು ಆರ್ಕೆಸ್ಟ್ರಾ (Archestra) ಮಾದರಿಯಲ್ಲಿ ಹೆಚ್ಚಾಗಿ ಪ್ರಕಟಗೊಂಡಿದೆ. ಅಲ್ಲಿಯೂ ಸೋಲೋ ಇದ್ದರೂ ವಾದ್ಯಗಳೊಂದಿಗೆ ಸಮರಸಗೊಳ್ಳಬೇಕಾದ ಪ್ರಯೋಗಗಳಿಗೆ ಆದ್ಯತೆ ನೀಡಲಾಗುತ್ತದೆ. ನಮ್ಮಲ್ಲಿ ಕಂಡುಬರುವ ರಾಗಗಳ ಪರಿಕಲ್ಪನೆಗಳ ಮಾದರಿಗಳಿಗೆ ಅಷ್ಟಾಗಿ ಅವಕಾಶಗಳಿಲ್ಲ, ಅದೇನಿದ್ದರೂ ಹಾರ್ಮನಿ (ಸಾಮರಸ್ಯ) ರೂಪದಲ್ಲಿರುತ್ತದೆ. ಅಂದರೆ ಪಾಶ್ಚಾತ್ಯ ಸಂಗೀತಗಾರರ ಗುರಿ ವೈವಿಧ್ಯಮಯವಾದ ನಾದಗಳ ಮೂಲಕ ನಾದ ಸಾಮರಸ್ಯವನ್ನು ಉಂಟುಮಾಡುವುದಾಗಿರುತ್ತದೆ.[6]

ಸಂಗೀತದ ಅಂತಿಮ ಉದ್ದೇಶ ಸೌಂದರ್ಯದ ಅನುಭೂತಿ, ಶ್ರೋತೃಗಳನ್ನು ಪರವಶಗೊಳಿಸುವ ಅದ್ಭುತ ಪ್ರಕ್ರಿಯೆ. ಆದರೆ ಈ ಪರವಶವೆನ್ನುವುದು ಮಾದಕ ಭಾವೋದ್ದೀಪಕವಲ್ಲ. ಹಾಗೆ ಮಾಡುವುದು ಸಂಗೀತದ ಗುಣವೂ ಅಲ್ಲ. (ಇಲ್ಲಿ ಆರ್ಕೆಸ್ಟ್ರಾ ಮಾದರಿಯ ಸೌಂದರ್ಯವನ್ನು ಬದಿಗಿರಿಸಿ ನೋಡಬೇಕಿದೆ) ಇಹವನರನು ಮರೆಸಿ ಪರದೊಡನೆ ಅನುಸಂಧಾನಗೊಳಿಸುವಂತೆ ಮಾಡುವ ಅಪರೂಪದ ಕಲೆ. ನಾನು ಇದು ಕಲೆ ಎನ್ನುವುದಕ್ಕಿಂತ ಆರಾಧನೆ ಎಂದು ಕರೆಯಲು ಇಚ್ಛಿಸುತ್ತೇನೆ. ಸಂಗೀತವೆನ್ನುವುದು ಆರಾಧನೆ. ಅದು ವಿಶ್ವಾತ್ಮನನ್ನು ಧೇನಿಸುವ ಮೂಲಕ, ಆ ವಿಶ್ವಚೈತನ್ಯದೊಳಗೆ ತನ್ಮಯೀಭಾವವನ್ನು ಹೊಂದಿ ಕ್ಷಣಕಾಲದ ಮಟ್ಟಿಗಾದರೂ ಈ ಲೋಕದ ಅಂಟು ಜಾಡ್ಯಗಳಿಂದ ಬಿಡುಗಡೆಗೊಳಿಸುವ ಕ್ರಮ. ಕೊನೆಯದಾಗಿ ಹೇಳುವುದಾದರೆ ಇದು ಅವರವರ ಭಾವಕ್ಕೆ ತಕ್ಕಂತೆ ಲಭಿಸುವ ಸೌಂದರ್ಯದ ಸಾಕ್ಷಾತ್ಕಾರ. ಭಕ್ತನಿಗೆ ಭಗವಂತನ ಸೌಂದರ್ಯ ಕಂಡರೆ, ವಿರಾಗಿಗೆ ಲೋಕವೇ ಪರವಶಗೊಂಡಂತೆ ಭಾಸವಾಗಬಹುದಾಗಿದೆ.

**ಟಿಪ್ಪಣಿಗಳು**

1. ವೇದದ ಉದಾತ್ತ, ಅನುದಾತ್ತ, ಸ್ವರಿತ ಸ್ವರಗಳು, ಸಾಮವೇದದಲ್ಲಿ ಕೃಷ್ಟ ಪ್ರಥಮ ದ್ವಿತೀಯ ತೃತೀಯ ಚತುರ್ಥ ಹಾಗೂ ಅತಿಸ್ವಾರ ಎಂಬ ಸ್ವರಗಳಾಗಿ ಬೆಳೆದು, ಇವು ಕ್ರಮವಾಗಿ ಆಧುನಿಕ ಭಾರತೀಯ ಸಂಗೀತದ ಮಧ್ಯಮ, ಪಂಚಮ, ಗಾಂಧಾರ, ಋಷಭ, ಷಡ್ಜ, ದೈವತ ಮತ್ತು ನಿಷಾದ ಸ್ವರಗಳಿಗೆ ಹೊಂದುತ್ತವೆ. ಹಿಂದುಸ್ತಾನೀ ಸಂಗೀತ, ಪು. 73
2. ಹೆಚ್ಚಿನ ವಿವರಗಳಿಗೆ ಶಿಕ್ಷಣದಲ್ಲಿ ನಾಟಕ ಮತ್ತು ಕಲೆ ಕೃತಿ ಗಮನಿಸಿ
3. ಈ ಮೋಕ್ಷಗಾಮಿನಿಯಾದ ಸಂಗೀತವನ್ನು ಭಾರತೀಯರು ಇತರ ಕಲೆಗಳಂತೆ ಭಗವಂತನ ಸೃಷ್ಟಿಯೆಂದು ಪರಿಭಾವಿಸಿದವರು. ಆ ಭಗವಂತನ ಸಾಂಗತ್ಯಕ್ಕೆ ಅಥವಾ

ದೈವಸಾಕ್ಷಾತ್ಕಾರಕ್ಕೆ ಈ ಕಲೆಗಳು ಅದರಲ್ಲಿಯೂ ಸಂಗೀತವು ಅಧಿಕ ಪ್ರಮಾಣದಲ್ಲಿ ಕಾರಣವಾಗುತ್ತವೆಂದು ಪರಿಭಾವಿಸಿದ ನಮ್ಮ ಜ್ಞಾನಸಾಧಕರು 'ರಸೋ ವೈ ಸಃ' ಎಂದು ಹೇಳಿರುವುದು ಈ ಕಾರಣಗಳಿಗೆಂದು ತೋರುತ್ತದೆ. ಹಾಗಾಗಿ ನಮ್ಮಲ್ಲಿ ಸಂಗೀತವನ್ನು ಶಬ್ದ, ನಾದ, ಸ್ವರ ಮೊದಲಾದ ಸೌಂದರ್ಯ ದೃಷ್ಟಿಯಿಂದ ನೋಡಿದಂತೆ ಕಾಣುವುದಿಲ್ಲ. ಜೊತೆಗೆ ನಮ್ಮಲ್ಲಿನ ತತ್ವಜ್ಞಾನಿಗಳು ತತ್ವದರ್ಶನ (Metaphysics) ತರ್ಕ (Logic) ಮತ್ತು ನೀತಿಪ್ರಮಾಣಶಾಸ್ತ್ರಗಳತ್ತ (Ethics) ಹೆಚ್ಚು ಒಲವು ಹೊಂದಿದ್ದಂತೆ ತೋರುತ್ತದೆ.

4. ಉಲ್ಲೇಖ – ಸೌಂದರ್ಯಮೀಮಾಂಸೆ, ಪು. 69

5. ಭಾರತೀಯ ಸಂಗೀತಕ್ಕೆ ನೈತಿಕ ಹಾಗೂ ಆಧ್ಯಾತ್ಮಿಕ ಭಾವಗಳನ್ನು ಉದ್ಬುದ್ಧಗೊಳಿಸುವ ಸಾಮರ್ಥ್ಯವಿದೆ. ಅದು ಮನಸ್ಸಿಗೆ ಸಾಂತ್ವನ ನೀಡುತ್ತದೆ, ಮುದ ನೀಡುತ್ತದೆ. ಅದು ಕೇಳುಗನನ್ನೂ, ಗಾಯಕನನ್ನೂ ನಾದದಲ್ಲಿ ಲೀನವಾಗುವಂತೆ ಮಾಡುವುದರಿಂದ ಅದೊಂದು 'ಯೋಗ' ಎನಿಸುತ್ತದೆ. ಅದರಲ್ಲಿ ನಾದವೇ ಧ್ಯೇಯ ಹಾಗೂ ನಾದವೇ ಧ್ಯಾನ ಕೂಡ. ಅದರಿಂದಲೇ ಸಂಗೀತವನ್ನು 'ನಾದಬ್ರಹ್ಮ' ಎಂದೂ ಕರೆಯುತ್ತಾರೆ. ಭಾರತೀಯ ಸಂಗೀತಕ್ಕೆ ಶಕ್ತಿ ಕೊಡುವುದು ಅದರೊಳಗಿರುವ ಭಕ್ತಿ. ಭಕ್ತಿಯಿಂದ ಆಧ್ಯಾತ್ಮಿಕ ಶಕ್ತಿ ಹಾಗೂ ಅದರಿಂದ ಮುಕ್ತಿ ಎನ್ನುವುದು ನಮ್ಮ ಪರಿಕಲ್ಪನೆ. ಸಂಗೀತವು ಭಗವಂತನನ್ನು ಅರ್ಚಿಸುವ ಒಂದು ವಿಧಾನ ಕೂಡ. "ಸಂಗೀತವೆಂಬುದು ನೊಂದ, ಬೆಂದ ಹೃದಯಕ್ಕೆ ಸಾಂತ್ವನವನ್ನು ನೀಡುವ ದಿವ್ಯ ಔಷಧ ಮಾತ್ರವಲ್ಲ, ತನ್ನಾತ್ಮವನ್ನು ಭಗವಂತನಿಗೆ ಸಮರ್ಪಿಸಲು ಸಾಧಕನಿಗೆ ನೆರವಾಗುವ ಸಾಧನವೂ ಹೌದು. ಆದ್ದರಿಂದಲೇ ಹಿಂದೂ ಋಷಿಗಳು ಅದನ್ನು 'ನಾದಯೋಗ'ವೆಂದೂ, ದೇವರನ್ನು 'ನಾದಲೋಲ'ನೆಂದೂ ಕರೆದಿದ್ದಾರೆ ಮತ್ತು ಸಂಗೀತವನ್ನು ಹೆಚ್ಚೂ ಕಡಿಮೆ ಯಾವಾಗಲೂ ಧಾರ್ಮಿಕ, ಆಧ್ಯಾತ್ಮಿಕ ಮೌಲ್ಯಗಳಿಂದ ಗುರುತಿಸಲಾಗಿದೆ". – ಹಿಂದುಸ್ತಾನೀ ಸಂಗೀತ, ಪು.73

6. ಸೌಂದರ್ಯಮೀಮಾಂಸೆ, ಪು. 68

**ಆಕರ ಕೃತಿಗಳು:**

1. ಭಾರತೀಯ ಸಂಸ್ಕೃತಿ ದರ್ಶನ – ಡಾ. ಅ.ನ. ಕೃಷ್ಣರಾಯ
2. ಸೌಂದರ್ಯಮೀಮಾಂಸೆ – ಡಾ. ಡಿ.ಎಲ್. ಪಾಟೀಲ್
3. ಶಿಕ್ಷಣದಲ್ಲಿ ನಾಟಕ ಮತ್ತು ಕಲೆ – ಡಾ. ಎನ್.ಎಂ. ಗಿರಿಜಾಪತಿ

□

# ಕಾಯಕ

ಡಾ. ಬಸವರಾಜ ಸಬರದ

(ಹಿಂದಿನ ಸಂಚಿಕೆಯಿಂದ)

**2. ಕೌಶಲ್ಯಮೂಲ ಕಾಯಕಗಳು**

ಕೌಶಲ್ಯಮೂಲ ಕಾಯಕಗಳು, ಉತ್ಪಾದನಾಮೂಲ ಕಾಯಕಗಳಷ್ಟೇ ಮುಖ್ಯವಾಗಿವೆ. ಕೃಷಿಕಾಯಕದಲ್ಲಿ ರೈತನು ಆಯಗಾರರ ಸಹಕಾರದೊಂದಿಗೆ ಆಹಾರ ವಸ್ತುಗಳನ್ನು ಬೆಳೆದು ನಾಡಿಗೆ ಕೊಟ್ಟರೆ, ಕೌಶಲ್ಯಮೂಲ ಕಾಯಕಗಳ ಮುಖಾಂತರ ಕುಶಲಕರ್ಮಿಗಳು ಕಚ್ಚಾವಸ್ತುಗಳನ್ನು ಪಕ್ಕಾವಸ್ತುಗಳನ್ನಾಗಿ ಸಿದ್ಧಪಡಿಸಿಕೊಡುತ್ತಾರೆ. ಕುಶಲಕರ್ಮಿಗಳು ಹೆಚ್ಚು ಸೃಜನಶೀಲರಾಗಿರತ್ತಾರೆ. ರೈತ ಹತ್ತಿಯನ್ನು ಬೆಳೆಯುತ್ತಾನೆ. ಹತ್ತಿಯು ಬಟ್ಟೆ ಸಿದ್ಧಪಡಿಸಲು ಮೂಲ ಸಾಮಗ್ರಿಯಾಗಿದೆ. ಹಾಗೆಂದು ಹತ್ತಿಯನ್ನೇ ಮೈಗೆ ಸುತ್ತಿಕೊಳ್ಳಲಿಕ್ಕಾಗುವುದಿಲ್ಲ. ಹತ್ತಿಯಿಂದ ನೂಲು ತೆಗೆದು, ಆ ನೂಲಿನಿಂದ ಬಟ್ಟೆಯನ್ನು ಮಾಡುವ ನೇಕಾರ ಪ್ರಮುಖ ಕುಶಲಕರ್ಮಿಯಾಗಿದ್ದಾನೆ. ಇದೇ ರೀತಿ ಮಣ್ಣಿನಿಂದ ಮಡಕೆ ಮಾಡುವ ಕುಂಬಾರ, ಕಬ್ಬಿಣದಿಂದ ಕೃಷಿ ಸಲಕರಣೆಗಳನ್ನು ಮಾಡುವ ಕಮ್ಮಾರ, ನಾರಿನಿಂದ ನುಲಿ ಮಾಡಿ ಹಗ್ಗ–ಕಣ್ಣಿಗಳನ್ನು ಮಾಡುವ ನುಲಿಕಾರ, ತೊಗಲಿನಿಂದ ಪಾದರಕ್ಷೆ ಮಾಡುವ ಸಮಗಾರ ಇವರೆಲ್ಲ ಮಹತ್ವದ ಕುಶಲ ಕರ್ಮಿಗಳಾಗಿದ್ದಾರೆ. ಕೃಷಿಕಾಯಕದಲ್ಲಿ ಮೂಲವಸ್ತು ಬಂದರೆ, ಇಲ್ಲಿ ಸಿದ್ಧವಸ್ತುಗಳು ಹೊರಬರುತ್ತವೆ. ಮೂಲದಲ್ಲಿದ್ದ ಕಚ್ಚಾವಸ್ತುವಿನ ರೂಪ ಹೊರಟ್ಹೋಗಿ, ಪಕ್ಕಾ ವಸ್ತುವಿನಲ್ಲಿ ಹೊಸ ರೂಪ ವಿನ್ಯಾಸಗಳು ಕಾಣಿಸಿಕೊಳ್ಳುತ್ತವೆ. ತಳವರ್ಗದಿಂದ ಬಂದ ಕುಶಲಕರ್ಮಿಗಳ ಕಾಯಕಗಳು ತುಂಬ ಮಹತ್ವದವುಗಳಾಗಿವೆ. ಬ್ರಿಟಿಷ್ ವಸಾಹತು ಮೂಲಕ ದೊಡ್ಡ ದೊಡ್ಡ ಕೈಗಾರಿಕೆಗಳು ಪ್ರಾರಂಭವಾದ ನಂತರ, ಕುಶಲಕರ್ಮಿಗಳು ತೊಂದರೆಗೊಳಗಾದರು. ಎಂ.ಎನ್.ಸಿ. ಕಂಪನಿಗಳು ಈ ಕೆಲಸ ಮಾಡಲು ತೊಡಗಿದಾಗಿನಿಂದ ಕುಶಲಕಾರ್ಮಿಕರು ಇಂದು ಬೀದಿಪಾಲಾಗಿದ್ದಾರೆ. ಶರಣರು 12ನೇ ಶತಮಾನದಲ್ಲಿ ಇಂತಹ ಕಾಯಕಗಳ ಮಹತ್ವವನ್ನರಿತುಕೊಂಡು ಆ ಕಾಯಕಗಳನ್ನು ಬೆಳೆಸಿದರೆ, ಇಂದು ಕೌಶಲ್ಯಮೂಲ ಕಾಯಕಗಳು ದೂರ ಸರಿದಿವೆ. ಶರಣರ ದೇಸೀಕರಣಕ್ಕೂ ಇಂದಿನ ಜಾಗತೀಕರಣಕ್ಕೂ ಬಹು ದೊಡ್ಡ ಅಂತರವಿದೆ. ಹೀಗಾಗಿ ಹಿಂದಿಗಿಂತ

ಇಂದು ಶರಣರ ಕಾಯಕಸಂಬಂಧಿ ವಿಚಾರಗಳು ಪ್ರಸ್ತುತವೆನಿಸುತ್ತವೆ. ಜಾತಿಯಿಂದ ವೃತ್ತಿಯಿಂದ ಕೀಳಾದವರನ್ನು ಹಾಗೂ ಅಸಹಾಯಕರನ್ನು ಕಾಯಕತತ್ವದ ಮೂಲಕ ಮೇಲೆತ್ತಿದ ವಚನಚಳವಳಿ, ಕುಶಲಕರ್ಮಿಗಳಿಗೆ ಪ್ರಾಮುಖ್ಯತೆ ನೀಡಿತು. ಅವರನ್ನು ಜಾಣರೆಂದು, ಕುಶಲರೆಂದು ಭಾವಿಸುವಂತೆ ಮಾಡಿತು. ಮಣ್ಣು ಮಡಕೆಯಾದಂತೆ, ಈ ಕಾಯಕಜೀವಿಗಳ ದೇಹ–ದೇವಾಲಯವಾಯಿತು. ನೂಲು ಬಟ್ಟೆಯಾದಂತೆ, ಅವರ ಆತ್ಮ–ಪರಮಾತ್ಮನ ಸ್ವರೂಪ ಪಡೆದುಕೊಂಡಿತು. ಇಂತಹ ಕ್ರಾಂತಿಕಾರಿ ಗುಣ ಈ ಕಾಯಕಗಳಲ್ಲಿದೆ.

**(i) ನೇಕಾರಿಕೆ**

ಆದಿಮಾನವ ಎಲೆ, ಚರ್ಮಗಳಿಂದ ಮೈಮುಚ್ಚಿಕೊಳ್ಳುತ್ತಿದ್ದ. ನಾಗರಿಕತೆ ಬೆಳೆದಂತೆ ನೂಲಿನಿಂದ ಬಟ್ಟೆಯನ್ನು ಸಿದ್ಧಪಡಿಸಿ ಉಡತೊಡಗಿದ. 12ನೇ ಶತಮಾನದ ಹೊತ್ತಿಗೆ ನೇಕಾರಿಕೆ ವೃತ್ತಿ ಬೆಳೆದುನಿಂತಿತ್ತು. ಈ ವೃತ್ತಿಯನ್ನು ಕಾಯಕವನ್ನಾಗಿ ಮಾಡಿದ ಶರಣರು ಈ ಕಾಯಕಕ್ಕೆ ಗೌರವ ತಂದುಕೊಟ್ಟರು. "ಹಾಸನಿಕ್ಕಿ ಸಾಲಿಗನಾದ" ಎಂಬ ಬಸವಣ್ಣನ ಮಾತು ನೇಕಾರಿಕೆಯ ಪ್ರಸ್ತಾಪ ಮಾಡುತ್ತದೆ. ಕ್ರಿ.ಶ. 1148ರ ಗೊಬ್ಬೂರು ಶಾಸನದಲ್ಲಿ "ಜಾಡ ಕುಲತಿಲಕ ದಾಸಿಮಯ್ಯ" ಎಂದು ಜೇಡರ ದಾಸಿಮಯ್ಯ ಮತ್ತು ಆತನ ಮಕ್ಕಳ ಪ್ರಸ್ತಾಪವಿದೆ.

ಅಮುಗಿದೇವಯ್ಯನೂ ನೇಕಾರಿಕೆಯ ಕಾಯಕ ಮಾಡುತ್ತಿದ್ದ. ಅಮುಗಿದೇವಯ್ಯನ ಪತ್ನಿ ವರದಾನಿ, ಕದಿರ ಕಾಯಕದ ರೆಮ್ಮವ್ವೆ ಇವರೆಲ್ಲಾ ಇದೇ ಕಾಯಕವನ್ನು ಮಾಡುತ್ತಿದ್ದರು.

ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಮೇಳ ಮುಟ್ಟದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು
ಈ ಸೀರೆಯ ನೆಯ್ದವ ನಾನೊ ನೀನೋ ರಾಮನಾಥ

– ಜೇಡರ ದಾಸಿಮಯ್ಯ (ಸ.ವ.ಸಂ. 7, ವ. 746)

ಈ ವಚನದಲ್ಲಿ ಜೇಡರ ದಾಸಿಮಯ್ಯನು ವೃತ್ತಿ ಪ್ರತಿಮೆಯ ಮೂಲಕ ನೆಯ್ಗೆಯ ಮಹತ್ವವನ್ನು ಹೇಳಿದ್ದಾನೆ. ನೂಲಿನ ಹಾಸಿಗೆಗೆ ಉಂಕೆಯೆಂದು ಕರೆಯುತ್ತಾರೆ. ಇಂತಹ ನೂಲಿನ ಹಾಸನ್ನು ಅಗಲಮಾಡಿ ಹರಡಿ (ಸರಿಗೆ) ದಾರವನ್ನು ಸರಿಮಾಡಿ ಸೀರೆಯನ್ನು ಸಿದ್ಧಪಡಿಸುವ ವಿಧಾನವನ್ನು ಹೇಳುತ್ತಲೇ ಸೀರೆ ನೇಯ್ದವನ ಮಹತ್ವವನ್ನು ಹೇಳಲಾಗಿದೆ.

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ....

– ಕದಿರ ರೆಮ್ಮವ್ವೆ (ಸ.ವ.ಸಂ. 5. ವ. 747)

ಈ ವಚನದಲ್ಲಿ ಕದಿರ ರೆಮ್ಮವ್ವೆ ನೆಯ್ಗೆಯ ವಿವರಗಳನ್ನು ಹೇಳುತ್ತ ಆಧ್ಯಾತ್ಮದ ಪರಿಭಾಷೆಯಲ್ಲಿ ಈ ಕಾಯಕದ ಮಹತ್ವವನ್ನು ಹೇಳಿದ್ದಾಳೆ. ಇಲ್ಲಿ ಅರಿವೆಂಬುದೇ ಕದಿರಾಗಿದೆ. ತಿರುಗುವ ಕ್ರಿಯೆಯೇ ಭಕ್ತಿಯಾಗಿದೆ. ಹೀಗೆ ಅನೇಕ ವಚನಗಳಲ್ಲಿ ನೇಕಾರಿಕೆಯ ಕಾಯಕದ ಮಹತ್ವವನ್ನು ವಚನಕಾರರು ಹೇಳಿದ್ದಾರೆ.

**(ii) ಕುಂಬಾರಿಕೆ**

ಕುಂಬಾರನು ಆಯಗಾರನೂ ಹೌದು, ಕೌಶಲ್ಯ ಕಾಯಕದವನೂ ಹೌದು. ಮಣ್ಣಿನಿಂದ ಮಡಿಕೆ, ಕುಡಿಕೆ, ಪಾತ್ರೆಗಳನ್ನು ಮಾಡುವ ಕುಂಬಾರನು ಕೃಷಿಕ ಕುಟುಂಬಕ್ಕೆ ನೆರವಾಗುವ ಮಹತ್ವದ ಆಯಗಾರನೂ ಆಗಿದ್ದಾನೆ. ಕುಂಬಾರ ಎಂಬುದು ಕುಂಭಕಾರ ಪದದ ತದ್ಭವವಾಗಿದೆ. ಕುಂಬಾರನನ್ನು ಕುಲಾಲ, ಚಕ್ರಸಾಲಿ, ಗುನಗ, ದಂಡಧರ, ಕುಂಭಕಾರ ಈ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತದೆ. ಶರಣರಲ್ಲಿ ಕುಂಬಾರ ಗುಂಡಯ್ಯ ಪ್ರಸಿದ್ಧಿ ಪಡೆದಿದ್ದಾನೆ. ಕ್ರಿ.ಶ. 1225ರ ತೇರದಾಳ ಶಾಸನದಲ್ಲಿ ಕುಂಬಾರನ ಉಲ್ಲೇಖವಿದೆ.

"ಮಡಕೆಯ ಮಾಡುವಡೆ ಮಣ್ಣೆ ಮೊದಲು" (ವ. 70) ಎಂದು ಹೇಳಿರುವ ಬಸವಣ್ಣ ಮಡಿಕೆಯ ಮೂಲಕ ಮಣ್ಣಿನ ಮಹತ್ವವನ್ನು ಹೇಳಿದ್ದಾನೆ. "ನಿನ್ನಾಳಿ ಕುಂಬಾರನ ಕೆಲಸದಂತೆ (ವ. 1258)" ಎಂದು ಬಸವಣ್ಣ ಕೂಡಲಸಂಗಮನನ್ನು ಕುರಿತು ಹೇಳಿದ್ದಾನೆ. ಅಂಬಿಗರ ಚೌಡಯ್ಯನು ತನ್ನ ವಚನವೊಂದರಲ್ಲಿ ಕುಂಬಾರ ಗುಂಡಯ್ಯನ ಮನೆಯ ಕತ್ತೆಯ ಪ್ರಸ್ತಾಪ ಮಾಡಿದ್ದಾನೆ.

> ಆವ ಮಡಕೆಯಾಗಲಿ ಸ್ವಾದ ಸಾಕಾರದಲ್ಲಿ ಭೇದವಿಲ್ಲ
> ಮಣ್ಣ ಮಡಕೆ ಒಕ್ಕಲಿಗನಲ್ಲಿ
> ಚಿನ್ನದ ಮಡಕೆ ಅರಮನೆಯಲ್ಲಿ...
>
> – ಕಿನ್ನರಿ ಬ್ರಹ್ಮಯ್ಯ (ಸ.ವ.ಸಂ. 7, ವ. 49)

> ಆಡುವ ಮಡಕೆಯ ತೋರಿ ಶಿಶುವಿನ ಹಸುವ ಅಡಗಿಸುವವಳಂತೆ
> ಬರಿದೆ ಗುಮ್ಮನಿದೆಯೆಂದು ಶಿಶುವ ಬೆದರಿಸಿ
> ಹಸುಳೆಯ ಅಡಗಿಸುವವಳಂತೆ...
>
> – ದಾಸೋಹದ ಸಂಗಣ್ಣ (ಸ.ವ.ಸಂ. 7, ವ. 1074)

ಈ ಎರಡು ವಚನಗಳಲ್ಲಿ ಕುಂಬಾರನ ಮಡಕೆಯ ಮಹತ್ವವನ್ನು ಹೇಳಲಾಗಿದೆ. ಒಕ್ಕಲಿಗನಲ್ಲಿರುವ ಮಣ್ಣಿನ ಮಡಕೆ, ಅರಮನೆಯಲ್ಲಿರುವ ಚಿನ್ನದ ಮಡಕೆಗಿಂತಲೂ ಮಹತ್ವದ್ದೆಂದು ಕಿನ್ನರಿಬ್ರಹ್ಮಯ್ಯ ಹೇಳಿದ್ದಾನೆ. ಮಣ್ಣಿನಿಂದ ಆಟಿಕೆ ಸಾಮಾನು ತಯಾರಿಸಿ, ಅದನ್ನು ಮಕ್ಕಳಿಗೆ ತೋರಿಸಿದಾಗ ಅವು ಹಸಿವನ್ನೇ ಮರೆತು ಕುಂಬಾರನ ಆಟಿಕೆಗಳಿಗೆ ಆಕರ್ಷಿತವಾಗುತ್ತಿದ್ದವೆಂದು ದಾಸೋಹದ ಸಂಗಣ್ಣ ಹೇಳಿದ್ದಾನೆ. ಕುಂಬಾರಿಕೆಯು

ಮಹತ್ವದ ಕಾಯಕವಾಗಿದ್ದು ಅನೇಕ ಶರಣರು, ಈ ಕಾಯಕದ ವಿಶಿಷ್ಟತೆಗಳನ್ನು ಕುರಿತು ವಚನಗಳಲ್ಲಿ ಪ್ರಸ್ತಾಪಿಸಿದ್ದಾರೆ.

**(iii) ಮೇದಾರಿಕೆ**

ಬಿದಿರಿನಿಂದ ಅನೇಕ ಸಾಮಾನುಗಳನ್ನು ಸಿದ್ಧಪಡಿಸುವ ಕಾಯಕವೇ ಮೇದಾರಿಕೆ ಯಾಗಿದೆ. ಬಿದಿರಿನಿಂದ ಸಿದ್ಧಪಡಿಸಿದ ಆಟಿಕೆಗಳು ಮಕ್ಕಳ ಮನಸ್ಸನ್ನು ಸೆಳೆದರೆ, ನಿಚ್ಚಣಿಕೆ, ಬೊಂಬು, ನಂದಿಕೋಲು, ರೈತರ ಸಾಮಗ್ರಿಗಳು ಇವೆಲ್ಲ ಮೇದಾರನಿಂದಲೇ ಮಾಡಲ್ಪಡುತ್ತವೆ. ಮೇದಾರಿಕೆ ಕೌಶಲ್ಯ ಕಾಯಕವಾಗಿರುವುದರ ಜತೆಗೆ ಅಗತ್ಯ ವಸ್ತುಗಳ ತಯಾರಿಕೆಯ ಕಾಯಕವೂ ಆಗಿದೆ. ಎಲ್ಲದಕ್ಕೂ ಬಿದಿರು ಬೇಕು. ಆದರೆ ಆ ಬಿದಿರನ್ನು ಹಾಗೆಯೇ ಉಪಯೋಗಿಸಲಿಕ್ಕಾಗುವುದಿಲ್ಲ. ಅದು ಮೇದಾರನ ಕೈಯಲ್ಲಿ ಕರಕುಶಲ ಕಲೆಯಾಗಿ ಅರಳಿ, ದಿನನಿತ್ಯದ ವಸ್ತುಗಳ ಬೇಡಿಕೆಯಾಗಿ ಮಹತ್ವ ಪಡೆದಿದೆ.

ಬಿದಿರಲಂದಣವಕ್ಕು, ಬಿದಿರೆ ಸತ್ತಿಗೆಯಕ್ಕು,
ಬಿದಿರಲ್ಲಿ ಗುಡಿಯು ಗೂಡಾರವಕ್ಕು,
ಬಿದಿರಲ್ಲಿ ಸಕಲ ಸಂಪದವೆಲ್ಲವು
ಬಿದಿರದವರ ಮೆಚ್ಚ ಕೂಡಲಸಂಗಮದೇವ.
– ಬಸವಣ್ಣ (ಸ.ವ.ಸಂ. ವ. 221)

ಬಸವಣ್ಣ ಬಿದಿರಿನ ಮಹತ್ವವನ್ನು ಈ ವಚನದಲ್ಲಿ ಹೇಳಿದ್ದಾನೆ. ಮೇದಾರರು ಬಿದಿರಿನಿಂದ ಅಂದಣ (ಪಲ್ಲಕ್ಕಿ), ಸತ್ತಿಗೆ (ಛತ್ರಿ) ಹಾಗೂ ಗುಡಿಯ ಬಾಗಿಲು, ಗುಡಿಸಲಿನ ಚಾಪೆ, ತಡಿಕೆ ಈ ಮೊದಲಾದವುಗಳನ್ನು ಮಾಡಿಕೊಡುತ್ತಿದ್ದರೆಂದು ಈ ವಚನದಲ್ಲಿ ಹೇಳಿದ್ದಾನೆ. ಹೀಗಾಗಿ ಬಿದಿರಲ್ಲಿ ಸಕಲ ಸಂಪದವಿದೆಯೆಂದು ತಿಳಿಸಿದ್ದಾನೆ.

ಒಂದು ಬಿದಿರಿಂಗೆ ಕವೆ ಮೂರು, ಆ ಕವೆಯ ಒಳಗೆ ಲಕ್ಕ ಸಿಬಿರು
ಮೂರು ಕವೆಯ ಕೊಚ್ಚಿಸಿ, ಬಿಲ್ಲ ಸಿಕ್ಕ ಬಿಡಿಸಿ, ಸೀಳಿದ ಬಿದಿರ
ಹೊರೆ ಹೊರೆಯಲ್ಲಿ ನೆಯಿದೆ, ತೊಟ್ಟಿಲ ಸಂದ ಕಾಣದಂತೆ
ನಾಲ್ಕು ಕಾಲನಿಕ್ಕಿ, ಅಂದವಾದ ತೊಟ್ಟಿಲ ದಂಡೆಯನಿಕ್ಕಿ,
ಕಟ್ಟುವದಕ್ಕೆ ಶ್ರುತ ದೃಷ್ಟವೆಂಬೆರಡು, ದಾರದಲ್ಲಿ ತೊಟ್ಟಿಲ ಕಟ್ಟಿ
ಗವರೇಶ್ವರ ಲಿಂಗಕ್ಕೆ ಹುಟ್ಟುಗೆಟ್ಟು ಹೋಗೊ ಎಂದು ಜೋಗುಳವಾಡಿದೆ.
– ಮೇದರ ಕೇತಯ್ಯ (ಸ.ವ.ಸಂ. 8, ವ. 1403)

ಈ ವಚನದಲ್ಲಿ ಮೇದರ ಕೇತಯ್ಯನು ಬಿದಿರಿನಿಂದ ಸಿದ್ಧಪಡಿಸುವ ಸಲಕರಣೆಗಳನ್ನೆಲ್ಲ ವಿವರಿಸಿ, ಕೊನೆಗೆ ಅದಕ್ಕೆ ಆಧ್ಯಾತ್ಮದ ಆಯಾಮ ನೀಡಿದ್ದಾನೆ. ಕವೆಯೆಂದರೆ ಕವಲು, ಬಿದಿರನ್ನು ಮೂರು ಕವಲುಗಳನ್ನಾಗಿ ಮಾಡಿ ಅದರಲ್ಲಿ ಸಿಬಿರಿನ ಮೂರು ಕವಲುಗಳನ್ನು ಸೇರಿಸಿ ಬಿದಿರಿನ ತೊಟ್ಟಿಲನ್ನು ಮಾಡುವ ವಿಧಾನ ಕುರಿತು ಹೇಳಿದ್ದಾನೆ. ಮೇದಾರಿಕೆಯ ಕಾಯಕದ ಬಗೆಗೆ ಇನ್ನೂ ಕೆಲವು ವಚನಗಳಲ್ಲಿ ಉಲ್ಲೇಖಿಸಲಾಗಿದೆ.

**(iv) ಅಕ್ಕಸಾಲಿಗ**

ಅಕ್ಕಸಾಲಿಗ ಕಾಯಕ ಕೂಡ ಕೌಶಲ್ಯಪ್ರಧಾನ ಕಾಯಕವೇ ಆಗಿದೆ. ಅಕ್ಕಸಾಲಿಗರು ಬೆಳ್ಳಿ ಬಂಗಾರದ ಆಭರಣಗಳನ್ನು ತಯಾರಿಸುತ್ತಾರೆ. ಇವರನ್ನು ಚಿನಿವಾರ, ಪತ್ತಾರ, ಸೊನ್ನಗಾರ, ಚಿನಿಪಾಲಿ, ಆಚಾರಿ, ವಿಶ್ವಕರ್ಮ ಈ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ನೈಪುಣ್ಯತೆ, ಕುಶಲಗಾರಿಕೆ ಈ ಕಾಯಕದಲ್ಲಿ ಮುಖ್ಯವಾದವುಗಳಾಗಿವೆ. ಅಕ್ಕಸಾಲಿಗರ ಮೂಲ ಪುರುಷನೇ ವಿಶ್ವಕರ್ಮನಾಗಿದ್ದಾನೆ. ಅರ್ಕ ಎಂಬ ಪದದಿಂದ ಅಕ್ಕಸಾಲಿಗ ಪದ ಹುಟ್ಟಿಕೊಂಡಿದೆ. ಅರ್ಕ ಎಂದರೆ ಅರಗು, ಅರಗು ಕೂಡಿಸಿ ಆಭರಣ ಮಾಡುವ ಶಾಲೆಯೇ ಅರ್ಕಶಾಲೆ, 11ನೇ ಶತಮಾನದ ಶಾಸನಗಳಲ್ಲಿ ಅಕ್ಕಸಾಲೆಯೆಂಬ ಪದ ಕಾಣಿಸಿಕೊಂಡಿದೆ.

12ನೇ ಶಲಮಾನದ ಶರಣರಲ್ಲಿ ಕಿನ್ನರಿ ಬ್ರಹ್ಮಯ್ಯ ಮೊದಲು ಅಕ್ಕಸಾಲಿಗನಾಗಿದ್ದ. ಆಂಧ್ರದ ಪೊಡೂರು ಗ್ರಾಮದಲ್ಲಿ ಅಕ್ಕಸಾಲಿಗನಾಗಿದ್ದ ಬ್ರಹ್ಮಯ್ಯ, ಗುರುವಿನ ಆಭರಣದಲ್ಲಿ ತೂಕ ಕಡಿಮೆಯಾಗಿದ್ದಕ್ಕೆ ಮನನೊಂದು ಆ ವೃತ್ತಿಯನ್ನೇ ಬಿಟ್ಟು ಕಲ್ಯಾಣಕ್ಕೆ ಬಂದು ಕಿನ್ನರಿ ನುಡಿಸುವ ಕಾಯಕ ಮಾಡತೊಡಗಿದ. ಹೊನ್ನ ಕಾಯಕದ ಬೊಮ್ಮಯ್ಯ, ಕನಕದ ನಾಚಯ್ಯ, ಮೌಕ್ತಿಕದ ಸಂಗಯ್ಯ, ರತ್ನದ ರಾಚಯ್ಯ, ಹಾವಿನಹಾಳ ಕಲ್ಲಯ್ಯ ಇವರೆಲ್ಲ ಅಕ್ಕಸಾಲಿಗ ಕಾಯಕದ ಶರಣರೆಂದು ತಿಳಿದುಬರುತ್ತದೆ.

> ಚಿನಿಪಾಲ ಚಿನ್ನದ ಹರಿವಾಣದಲ್ಲಿ ಭೋಗಿಪುದು ಭೂಷಣವಲ್ಲದೆ
> ಮಣ್ಣ ಹರಿವಾಣದಲ್ಲಿ ಭೂಷಣವೆ ?....
>
> – ಕಿನ್ನರಿ ಬ್ರಹ್ಮಯ್ಯ (ಸ.ವ.ಸಂ. 7, ವ. 55)

ಚಿನಿಪಾಲನ ಚಿನ್ನದ ಹರಿವಾಣಕ್ಕೆ ಪ್ರಾಮುಖ್ಯತೆ ನೀಡಿದ್ದ ಕಿನ್ನರಿ ಬ್ರಹ್ಮಯ್ಯ, ಅಕ್ಕಸಾಲಿಗನ ವೃತ್ತಿಯನ್ನು ಬಿಟ್ಟು, ಕಲ್ಯಾಣದಲ್ಲಿ ಕಿನ್ನರಿ ಕಾಯಕ ಮಾಡತೊಡಗಿದಾಗ ಮಣ್ಣಹರಿವಾಣವೇ ಶ್ರೇಷ್ಠವೆನಿಸಿತು. ಹಾವಿನಹಾಳ ಕಲ್ಲಯ್ಯನ ವಚನಗಳಲ್ಲಿ ಅಕ್ಕಸಾಲಿಗ ವೃತ್ತಿಗೆ ಸಂಬಂಧಿಸಿದ ವಿವರಗಳಿಲ್ಲ. ಅಕ್ಕಸಾಲಿಗ ವೃತ್ತಿಯಲ್ಲಿ ಮೋಸವಾಗುತ್ತಿತ್ತು. ಬಂಗಾರಕ್ಕೆ ಹೆಚ್ಚು ಪ್ರಮಾಣದಲ್ಲಿ ಸೀಸ ಕೂಡಿಸಿ ಬಂಗಾರ ಕದಿಯುತ್ತಿದ್ದ ಅಕ್ಕಸಾಲಿಗರಿಗೆ ಸಮಾಜದಲ್ಲಿ ಗೌರವವಿರಲಿಲ್ಲ. ಇದನ್ನೇ ಜೇಡರ ದಾಸಿಮಯ್ಯ, ಚೆನ್ನಬಸವಣ್ಣ ಮೊದಲಾದ ವಚನಕಾರರು ತಮ್ಮ ವಚನಗಳಲ್ಲಿ ಪ್ರಸ್ತಾಪಿಸಿದ್ದಾರೆ. ಆ ಎಲ್ಲ ಮೋಸಗಳನ್ನು ಬಿಟ್ಟು ಸತ್ಯಶುದ್ಧ ಕಾಯಕ ಮಾಡಬೇಕೆಂದು ಹೇಳಿದ್ದಾರೆ. ಹಾವಿನಹಾಳ ಕಲ್ಲಯ್ಯನಂತಹ ಅಕ್ಕಸಾಲಿಗ ಕಾಯಕದ ಶರಣರು ಈ ಕಾಯಕಕ್ಕೆ ಪಾವಿತ್ರತೆಯನ್ನು ತಂದುಕೊಟ್ಟಿದ್ದಾರೆ.

**(v) ಬಡಿಗ**

ಬಡಿಗ ಆಯಾಗಾರನೂ ಹೌದು, ಕುಶಲಕರ್ಮಿಯೂ ಹೌದು. ರೈತನ ಕೃಷಿ ಸಾಮಗ್ರಿಗಳಾದ ಕುಂಟಿ, ನೇಗಿಲು, ಬುಕ್ಕಾ, ಚಕ್ಕಡಿ ಈ ಮೊದಲಾದವುಗಳನ್ನು

ಸಿದ್ಧಪಡಿಸುತ್ತಿದ್ದ ಬಡಿಗನು, ಕಟ್ಟಿಗೆಯಿಂದ ಮಾಡುತ್ತಿದ್ದ ಬೊಂಬೆಗಳಲ್ಲಿ ತನ್ನ ಕೌಶಲ್ಯವನ್ನು ತೋರಿಸುತ್ತಿದ್ದ. ಬಡಗಿ, ಬಡಿಗ, ಬಡಿಗೇರ, ಮರಗೆಲಸದವನೆಂದು ಈತನನ್ನೂ ಕರೆಯಲಾಗುತಿತ್ತು. ವರ್ಧಕಿಯೆಂದರೆ ಕತ್ತರಿಸು, ಕಡಿಯೆಂಬ ಅರ್ಥಗಳಿವೆ. ವರ್ಧಕಿ ಪದವೇ ಬಡ್ಡಕಿಯಾಗಿ, ಅದೇ ಮುಂದೆ ಬಡಗಿಯಾಗಿರಬಹುದಾಗಿದೆ. ಅರೆಕುಶಲಕರ್ಮಿ ಬಡಿಗರು ಆಯಗಾರರಾಗಿ ರೈತರ ಕೃಷಿ ಸಲಕರಣೆಗಳನ್ನು ಮಾಡಿಕೊಡುತ್ತಿದ್ದರೆ, ಕುಶಲಕರ್ಮಿ ಬಡಿಗರು ದೇವಾಲಯಗಳ ಕಂಬ, ಬಾಗಿಲು ಪಲ್ಲಕ್ಕಿ ರಥಗಳನ್ನು ಮಾಡಿ ತಮ್ಮ ಕೌಶಲ್ಯವನ್ನು ತೋರಿಸಿದ್ದಾರೆ. ಕಟ್ಟಿಗೆಯಲ್ಲಿ ಕೆತ್ತಲ್ಪಟ್ಟ ಅನೇಕ ಗ್ರಾಮ ದೇವತೆಗಳ ಶಿಲ್ಪಿಯೂ ಬಡಿಗನೇ ಆಗಿದ್ದಾನೆ. ಧಾರವಾಡ ಜಿಲ್ಲೆಯ ಚಿಕ್ಕಹಂದಿಗೋಳದ ಕ್ರಿ.ಶ. 1135ರ ಶಾಸನದಲ್ಲಿ ಬಡಗಿಯ ಪ್ರಸ್ತಾಪವಿದೆ.

12ನೇ ಶತಮಾನದ ಶರಣರು ಬಡಗಿಯನ್ನು ಬಾಚಿಕಾಯಕದ ಶರಣನೆಂದು ಕರೆದರು. ಬಾಚಿಯು ಬಡಗಿಯ ಪ್ರಮುಖ ಸಲಕರಣೆಯಾಗಿದ್ದರಿಂದ ಬಾಚಿಕಾಯಕವೆಂಬ ಹೆಸರು ಪ್ರಚಲಿತಕ್ಕೆ ಬಂದಿರಬೇಕು. 12ನೇ ಶತಮಾನದ ಶರಣರಲ್ಲಿ ಬಾಚಿಕಾಯಕದ ಬಸವಣ್ಣನು ಹೆಸರುವಾಸಿಯಾಗಿದ್ದಾನೆ. ಈತ ತನ್ನ ವಚನದಲ್ಲಿ ಬಾಚಿಕಾಯಕದ ವಿವರಗಳನ್ನು ನೀಡಿದ್ದು, ಈತ ರಚಿಸಿದ ವಚನಗಳೆಲ್ಲ ಗಾತ್ರದಲ್ಲಿ ದೀರ್ಘವಾಗಿವೆ. ಬಡಗಿ ಮಾಚಲದೇವಿಯ ಪ್ರಸ್ತಾಪವು ಬೇರೆ ವಚನಗಳಲ್ಲಿ ಬರುವುದನ್ನು ನೋಡಿದರೆ ಮಾಚಲದೇವಿಯೂ ಇದೇ ವೃತ್ತಿಯ ಮನೆತನಕ್ಕೆ ಸೇರಿರಬೇಕೆಂದು ತಿಳಿದುಬರುತ್ತದೆ.

> ಆರು ದರ್ಶನವೆಲ್ಲ ಎನ್ನ ಬಾಚಿಯ ಕಲೆ,
> ಮಿಕ್ಕಾದ ಮೀರಿದ ಅವಧೂತರುಗಳೆಲ್ಲ
> ಎನ್ನ ಉಳಿಯೊಳಗಣ ಉಡುಪು
> ಇಂತಿವ ಮೀರಿ ವೇಧಿಸಿ ಭೇದಿಸಿಹೆನೆಂಬವರೆಲ್ಲ
> ಎನ್ನ ಕೊಡತಿಯಡಿಯಲ್ಲಿ ಬಡೆಯಿಸಿಕೊಂಬ ಬಡಿಹೋರಿಗಳು....
>
> – ಬಾಚಿಕಾಯಕದ ಬಸವಣ್ಣ (ಸ.ವ.ಸಂ 8. ವ. 205)

ಈ ವಚನದಲ್ಲಿ ಬಾಚಿಕಾಯಕದ ಬಸವಣ್ಣನು ತನ್ನ ವೃತ್ತಿ ಪ್ರತಿಮೆಯ ಮೂಲಕ ಮಾತನಾಡಿದ್ದಾನೆ. ಷಡ್‌ದರ್ಶನಗಳೆಲ್ಲ ಬಾಚಿಕಾಯಕದ ಕಲೆಯೆಂದು ಈ ಶರಣ ಹೇಳಿದ್ದಾನೆ.

### (vi) ಕಂಚುಗಾರ

ಕಂಚುಗಾರಿಕೆ ಸ್ವತಂತ್ರ ಕಾಯಕವಾಗಿರುವಂತೆ, ಕೌಶಲ್ಯಮೂಲ ಕಾಯಕವೂ ಆಗಿದೆ. ಕಂಚುಗಾರರನ್ನು ಶಾಸನಗಳಲ್ಲಿ ಕಂಚಗಾರ ಎಂದು ಪ್ರಸ್ತಾಪಿಸಲಾಗಿದೆ. ಕಂಚು, ಹಿತ್ತಾಳೆ, ತಾಮ್ರ, ಸೀಸ ಈ ಮೊದಲಾದ ಲೋಹಗಳನ್ನು ತಂದು ಕಾಯಿಸಿ ಚರಿಗೆ, ಪಾತ್ರೆ, ಗಿಂಡಿ, ಬಟ್ಟಲು, ತಾಟು, ಹಂಚು ಈ ಮೊದಲಾದ ಲೋಹದ ಪಾತ್ರೆಗಳನ್ನು ಇವರು

ಸಿದ್ಧಪಡಿಸುತ್ತಿದ್ದರು. ಇವುಗಳ ಜತೆಗೆ ದೇವತಾ ವಿಗ್ರಹಗಳನ್ನು ಇವರು ತಯಾರಿಸುತ್ತಿದ್ದರು. ದೇವತಾಮೂರ್ತಿಗಳನ್ನು ಮಾಡುವಾಗ ಹೆಚ್ಚಿನ ಕೌಶಲ ಬೇಕಾಗುತ್ತದೆ. ಲೋಹಕ್ಕೆ ಮೂರ್ತಿರೂಪ ಕೊಟ್ಟು, ಆ ಮೂರ್ತಿಗಳು ಸುಂದರವಾಗಿ ಕಾಣಬೇಕಾದರೆ ಕಂಚುಗಾರರಲ್ಲಿ ಜಾಣ್ಮೆ, ಕುಶಲಗಾರಿಕೆ ಇರಬೇಕಾಗುತ್ತದೆ. ಇವರು ಪಾಂಚಾಳರ ಉಪವರ್ಗಕ್ಕೆ ಸೇರುತ್ತಾರೆ. ಕಾಳಿಕಾದೇವಿಯ ಭಕ್ತರಾಗಿದ್ದ ಇವರು 12ನೇ ಶತಮಾನದಲ್ಲಿ ಬಸವಣ್ಣ ಮೊದಲಾದ ಶರಣರ ಪ್ರಭಾವಕ್ಕೊಳಗಾಗಿ, ಲಿಂಗದೀಕ್ಷೆ ಪಡೆದು ಶರಣರಾದರು. ಕಂಚುಗಾರರನ್ನು ಮಲಹರ ಎಂದೂ ಕರೆಯಲಾಗುತ್ತಿತ್ತು.

ಶರಣರಲ್ಲಿ ಮಲಹರ ಕಾಯಕದ ಚಿಕ್ಕದೇವಯ್ಯ ಪ್ರಮುಖನಾಗಿದ್ದಾನೆ. ಈ ಶರಣನು ಕಂಚುಗಾರಿಕೆಯಲ್ಲಿ ನಿಪುಣನಾಗಿದ್ದನೆಂದು ತಿಳಿದುಬರುತ್ತದೆ. "ಕಂಚುಗಾರನೇಸು ಭಕ್ತನಾದಡೆಯೂ ಕಾಳಿಕಾದೇವಿಯ ಹಂಗ ಬಿಡ (ವ. 451)" ಎಂದು ಹೇಳಿದ ಬಸವಣ್ಣನು ಉಣ್ಣುವ ಬಟ್ಟಲು, ನೋಡುವ ದರ್ಪಣ ಒಂದೇ ಕಂಚಿನಿಂದ ಮಾಡಲಾಗಿದೆಯೆಂದು ಹೇಳುತ್ತ "ಅರಿದಡೆ ಶರಣ, ಮರೆದಡೆ ಮಾನವ" ಎಂದು ಈ ಶರಣನ ಮಹತ್ವವನ್ನು ತಿಳಿಸಿದ್ದಾನೆ. ದಾಸಿಮಯ್ಯ ತನ್ನ ವಚನವೊಂದರಲ್ಲಿ ಅಕ್ಕಸಾಲಿಗರನ್ನು, ಕಂಚುಗಾರರನ್ನು ವಿಡಂಬಿಸಿದ್ದಾನೆ (ವ. 825). "ಸಂಚವ ಕಂಚುಗಾರ ಬಲ್ಲ"ನೆಂದು ಮೋಳಿಗೆ ಮಾರಯ್ಯ ಹೇಳಿದ್ದಾನೆ.

> ಮುರಿಗಂಚು ತವರ ಹಿತ್ತಾಳೆ ತಾಮ್ರ
> ಇವು ಮೊದಲಾದ ಲೋಹವ ತನ್ನಿ
> ಕಳ್ಳವಣ, ಕಂದುವೆಳ್ಳ ಮೊದಲಾದ ರೊಕ್ಕವ ತನ್ನಿ
> ನಿಮಗಲ್ಲದ ಒಡವೆ ಎನಗೆ
> ನಿಮಗೆ ಒಳ್ಳಿಹ ಒಡವೆಯ ಕೊಡುವೆ...."
>
> – ಮಲಹರ ಕಾಯಕದ ಚಿಕ್ಕದೇವಯ್ಯ (ಸ.ವ.ಸಂ. 8, ವ. 1142)

ಹೀಗೆ ವೃತ್ತಿ ಪ್ರತಿಮೆಯ ಮೂಲಕ ಮಲಹರದ ಚಿಕ್ಕದೇವಯ್ಯನು ತನ್ನ ಅನೇಕ ವಚನಗಳಲ್ಲಿ ಆಧ್ಯಾತ್ಮದ ವಿಕಾಸವನ್ನು ಕಂಡುಕೊಂಡಿದ್ದಾನೆ. ಕಂಚು, ತಾಮ್ರ, ಹಿತ್ತಾಳೆ ಇವು ಮೂರು ಸೀಸದಂಗದ ಭೇದವೆಂದು ಹೇಳಿ, ಮನ, ಬುದ್ಧಿ, ಚಿತ್ತ ಇವು ಮೂರೂ ಅಹಂಕಾರದಂಗದೊಡಲು ಎಂದು ತಿಳಿಸಿದ್ದಾನೆ.

### vii) ಸಿಂಪಿಗ

ಸಿಂಪಿಗ ವೃತ್ತಿಯು ಸ್ವತಂತ್ರ ಕಾಯಕವಾಗಿರುವಂತೆ, ಕೌಶಲ್ಯದ ಕಾಯಕವೂ ಆಗಿದೆ. ಸಿಂಪಿಗನನ್ನು ಚಿಪ್ಪಿಗ ಎಂದೂ ಕರೆಯಲಾಗುತ್ತಿತ್ತು. ಇವರನ್ನು ಸಿಂಪಿಗ, ಚಿಪ್ಪಿಗ, ದರ್ಜಿ ಎಂದು ಕರೆಯುವ ವಾಡಿಕೆಯಿದೆ. ಶರಣರ ಕಾಲಕ್ಕೆ ಇವರನ್ನು ಸೂಜಿಕಾಯಕದವರೆಂದು ಕರೆಯುತ್ತಿದ್ದರು. ಕ್ರಿ.ಶ. 1139ರ ಶಾಸನವೊಂದರಲ್ಲಿ ಚಿಪ್ಪಿಗ

ಎಂದು ಪ್ರಸ್ತಾಪಿಸಲಾಗಿದೆ. ಸೂಜಿ, ದಾರ ಬಳಸಿ ಬಟ್ಟೆ ಹೊಲಿದು ಕೊಡುವುದು ಸಿಂಪಿಗರ ಪ್ರಮುಖ ಕಾಯಕವಾಗಿತ್ತು. ಜತೆಗೆ ಮಕ್ಕಳ ಕುಲಾಯಿ, ಟೋಪಿ, ಹೆಣ್ಣುಮಕ್ಕಳ ಸೀರೆಗಳಿಗೆ ಜರಿ ಹಚ್ಚಿಕೊಡುವುದು, ಸೀರೆಗೆ ಕಸೂತಿ ಹಾಕಿಕೊಡುವುದು. ಇಲ್ಲೆಲ್ಲಾ ಕೌಶಲ್ಯವನ್ನು ಕಾಣಬಹುದಾಗಿದೆ. ಸೂಜಿಕಾಯಕದ ಮಾರಿತಂದೆ, ಶಿವದಾಸಿಮಯ್ಯ ಈ ಮೊದಲಾದ ಶರಣರು ಸಿಂಪಿಗ ಕಾಯಕ ಮಾಡುತ್ತಿದ್ದರೆಂದು ತಿಳಿದುಬರುತ್ತದೆ.

> ಸೂಜಿಯ ಹಿನ್ನಿಯಲ್ಲಿ ಮುಗಿಲ ತೋರದ ದಾರ ಹಿಡಿಯಿತ್ತು
> ಸೂಜಿಯ ಮೊನೆ ಹಳೆಯ ಅರಿವೆಯ ಚುಚ್ಚಲಾರದು...'
>
> –ಸುಂಕದ ಬಂಕಣ್ಣ (ಸ.ವ.ಸಂ. 9, ವ. 695)

> ಸೂಜಿಯ ಪೋಣಿಸಿ ದಾರವ ಮರೆದಡೆ
> ಹೊಲಿಗೆ ಬಿಚ್ಚಿತ್ತು ಗುಹೇಶ್ವರಾ
>
> –ಅಲ್ಲಮಪ್ರಭು (ಸ.ವ.ಸಂ. 2, ವ. 1374)

ಶರಣರ ಈ ಎರಡು ವಚನಗಳಲ್ಲಿ ಸೂಜಿಕಾಯಕದ ಪ್ರಸ್ತಾಪವಿದೆ. ಇಲ್ಲಿ ಬಂದಿರುವ ವಿಷಯವು ಆಧ್ಯಾತ್ಮದ ಪರಿಭಾಷೆಯಲ್ಲಿ ಸಾಗಿರುವುದನ್ನು ಕಾಣಬಹುದಾಗಿದೆ. ಸೂಜಿ ಕಾಯಕದ ಶರಣರ ಬಗೆಗೆ, ಮತ್ತು ಅವರ ಕಾಯಕದ ಬಗೆಗೆ ಇನ್ನೂ ಕೆಲವು ವಚನಗಳಲ್ಲಿ ಪ್ರಸ್ತಾಪ ಬಂದಿದೆ. 12ನೇ ಶತಮಾನಕ್ಕೆ ಸೂಜಿಕಾಯಕ ದೊಡ್ಡದಾಗಿ ಬೆಳೆದಿತ್ತೆಂದು ಭಾವಿಸಬಹುದಾಗಿದೆ.

"ಕಾಲ ಕುಪ್ಪಸವ ಮೇಲಾಗಿ ಹೊಲಿದೆ, ಅಂಗದ ಕುಪ್ಪಸವ ಮಂಡೆಗೆ ಹೊಲಿದೆ (ವ. 721)" ಎಂದು ಹೇಳಿರುವ ಸೂಜಿಕಾಯಕದ ರಾಮಿತಂದೆಯು "ತಲೆಗೆ ಮೂರು ಚಿಪ್ಪು, ಅಂಗಕ್ಕೆ ಆರು ಚಿಪ್ಪು, ಮಿಕ್ಕಾದ ಸರ್ವಾಂಗಕ್ಕೆಲ್ಲಕ್ಕೂ ಒಂದೆ ಚಿಪ್ಪಿನ ಕುಪ್ಪಸ (ವ. 722)" ಎಂದು ಕುಪ್ಪಸದ ರೂಪಕದ ಮೂಲಕ ಆಧ್ಯಾತ್ಮದೆತ್ತರವನ್ನು ಕಟ್ಟಿಕೊಟ್ಟಿದ್ದಾನೆ.

> ಮೊನೆಮೂರು, ಹಿನ್ನೆ ಒಂದು
> ಆ ಸೂಜಿಯಲ್ಲಿ ಹೊಲಿದಿಹೆನೆಂದಡೆ
> ಕುಪ್ಪಸಕ್ಕೆ ಚಿಪ್ಪು ಒಡಗೂಡವು ನೋಡಾ.
> ಮೊನೆಯೊಂದು ಹಿನ್ನೆ ಮೂರಾಗಿ ಹೊಲಿದಡೆ
> ಹಿನ್ನೆಯ ಮೂರುದಾರ ಮೊನೆಯನಾಳದಲ್ಲಿ ಅಡಗಿದವು ನೋಡಾ...
>
> –ಸೂಜಿಕಾಯಕದ ರಾಮಿತಂದೆ (ಸ.ವ.ಸಂ. 9, ವ. 725)

ಈ ವಚನದಲ್ಲಿ ರಾಮಿತಂದೆಯು ತನ್ನ ವೃತ್ತಿ ಪ್ರತಿಮೆಯ ಮೂಲಕ ಆಧ್ಯಾತ್ಮದ ಮಾರ್ಗವನ್ನು ತೋರಿಸಿದ್ದಾನೆ.

□

# ಅಭಿನವ ಕಾಳಿದಾಸ: ಆಸ್ಥಾನ ವಿದ್ವಾಂಸ ಬಸವಪ್ಪಶಾಸ್ತ್ರಿಗಳ ಕೆಲ ಗೀತೆಗಳು

ಡಾ॥ ಬಿ. ನಂಜುಂಡಸ್ವಾಮಿ

**ಕ**ನ್ನಡ ನಾಡಿನ ಸಾಹಿತ್ಯ–ಸಂಸ್ಕೃತಿ ಬೆಳವಣಿಗೆಗೆ ಮೈಸೂರು ನಗರದ ವಿದ್ವಾಂಸರ ಕೊಡುಗೆ ಅಪಾರವಾದದ್ದು. ೧೮೯೦–೧೯೬೦ರ ಕಾಲಮಾನದ ಪ್ರಕಟಿತ ಪುಸ್ತಕಗಳು, ನಾಶವಾಗದೆ ಉಳಿದ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ನಮಗೆ ಗೊತ್ತಿಲ್ಲದ ವಿವರಗಳು ಲಭ್ಯವಾಗುತ್ತವೆ. ಇವುಗಳನ್ನು ಯುವ ವಿದ್ವಾಂಸರು ಸೂಕ್ಷ್ಮವಾಗಿ ಅಧ್ಯಯನ ಮಾಡಬೇಕು.

ಮೈಸೂರು ನಗರದಲ್ಲಿದ್ದ "Department of Public Instruction, Mysore" ವತಿಯಿಂದ H.H. The Maharani Girl's School Series **"**ಬಾಲಿಕಾ ಗೀತಮುಕ್ತಾಕಲಾಪಾ**"** Balika Gitamuktakalapa ೧೮೯೩ರಲ್ಲಿ ನಾಲ್ಕನೇ ಮುದ್ರಣ ಹೊರಬಂದಿದ್ದು ೩೦೦೦ ಪ್ರತಿಗಳನ್ನು ಮುದ್ರಣ ಮಾಡಲಾಗಿದೆ. ೧೧೫ ಪುಟಗಳ ಈ ಪುಸ್ತಕ ಮುದ್ರಣವಾದ ಮುದ್ರಣಾಲಯ Printed at the Government Branch Press, Mysore. ಪ್ರಕಟಿತ ಪುಸ್ತಕಕ್ಕೆ ಒಂದು ಪುಟದ ಪೀಠಿಕೆ ಇದ್ದು ಅವನ್ನು ಯಥಾವತ್ತಾಗಿ ಕೊಡಲಾಗಿದೆ.

**ಪೀಠಿಕೆ**

ಮೈಸೂರು ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಉಪಯೋಗಾರ್ಥವಾಗಿ **"**ಗೀತಮುಕ್ತಾಕಲಾಪ**"**ವೆಂಬ ಈ ಪುಸ್ತಕವು ಶ್ರೀಮನ್ಮಹಾರಾಜರಾಜಾ ಸಾಹೇಬ್ಬಹದ್ದೂರವರ ದರಬಾರ್ ಬಕ್ಷಿಯವರಾದ ವಿದ್ಯಾಭಿಮಾನಿಗಳಾದ ಮಹಾರಾಜಶ್ರೀ ರಾಯಬಹದೂರ್ ಅಂಬಿಲ್ ನರಸಿಂಹಯ್ಯಂಗಾರ್ಯರವರ ಅಪ್ಪಣೆಮೇರೆ ಈ ಕೆಳಗೆ ಬರೆಯಲ್ಪಟ್ಟಿರುವ ಕವಿಗಳಿಂದ ರಚಿಸಲ್ಪಟ್ಟಿತ್ತು. ಮತ್ತು ಪ್ರತಿ ಪದಗಳ ಪ್ರಾರಂಭದಲ್ಲಿಯೂ ತೋರಿಸಿರುವ ಗುರುತುಗಳು ಅವುಗಳನ್ನು ರಚಿಸಿದ ಈ ಕವಿಗಳನ್ನು ತಿಳಿಸುತ್ತವೆ.

ಮೈಸೂರಲ್ಲಿರುವ ವೇ॥ ಮ॥ ಕವಿ ಗಿರಿಯಪ್ಪನವರು
ಮೈಸೂರಲ್ಲಿರುವ ವೇ॥ ಮ॥ ಗಿರಿಭಟ್ಟ ತಮ್ಮೈಯ್ಯನವರು

ಮೈಸೂರಲ್ಲಿರುವ ಅರಮನೇ ಸಂಗೀತವಿದ್ವಾಂಸರು ಮ॥ ಸದಾಶಿವರಾಯರು.
ಮೈಸೂರಲ್ಲಿರುವ ಅರಮನೇ ವಿದ್ವಾಂಸರು ವೇ॥ ನಂಜನಗೂಡು ಸುಬ್ಬಾಶಾಸ್ತ್ರಿಗಳು.
ಮೈಸೂರಲ್ಲಿರುವ ಅರಮನೇ ವಿದ್ವಾಂಸರು ವೇ॥ ಚಾ॥ ರಾಮಾಶಾಸ್ತ್ರಿಗಳು.
ಮೈಸೂರಲ್ಲಿರುವ ಅರಮನೇ ವಿದ್ವಾಂಸರು ವೇ॥ ಜಯರಾಯಾಚಾರ್ಯರು.
ಮೈಸೂರಲ್ಲಿರುವ ಅರಮನೇ ವಿದ್ವಾಂಸರು ಮ॥ ಬಸವಪ್ಪಶಾಸ್ತ್ರಿಗಳು.
ಮೈಸೂರಲ್ಲಿರುವ ಅರಮನೇ ವಿದ್ವಾಂಸರು ವೇ॥ ನರಸಿಹ್ಮಶಾಸ್ತ್ರಿಗಳು.
ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ವಿ. ಮ॥ ಪದ್ಮನಾಭೈಯ್ಯನವರು.

(ಮೂಲದಲ್ಲಿರುವ ಈ ಗುರುತುಗಳನ್ನು ಯಥಾವತ್ತಾಗಿ ಕೊಡಲು ಸಾಧ್ಯವಾಗುವುದಿಲ್ಲ. ಡಿ.ಟಿ.ಪಿ ಆದ ಅನಂತರ ಆ ಗುರುತುಗಳು ಅಸ್ತವ್ಯಸ್ತವಾಗುತ್ತವೆ.)

ಆಸ್ಥಾನ ವಿದ್ವಾನ್ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳು ಹೆಸರಾಂತ ಕವಿಗಳು, ವಿದ್ವಾಂಸರು, ಪುರೋಹಿತರು, ನಾಟಕಕಾರರು ಆಗಿದ್ದರು. ಅವರ ಪೂರ್ವಜರ ಊರು ಶಿವಗಂಗೆ ಬೆಟ್ಟದ ತಪ್ಪಲಿಗೆ ಹತ್ತಿರ ಇರುವ ಇಂದಿನ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ನಾರಸಂದ್ರ ಗ್ರಾಮ. ವೇದಮೂರ್ತಿ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳು, ವೀರಶೈವ ಜಂಗಮ ಮನೆತನಕ್ಕೆ ಸೇರಿದವರು. ಶಾಸ್ತ್ರಿಗಳ ತಾತನ ಹೆಸರು ವೇದಮೂರ್ತಿ ಮುರುಡು ಬಸವಸ್ವಾಮಿಗಳು, ನಾರುಸಂದ್ರದ ರುದ್ರಾಕ್ಷಿ ಮಠದೊಡೆಯರು. ಇವರದು ಪುತ್ರವರ್ಗ ಪರಂಪರೆ ಮಠವಿರಬೇಕು. ಶಾಸ್ತ್ರಿಗಳ ತಂದೆ ಹೆಸರು ಮಹದೇವಶಾಸ್ತ್ರಿಗಳು, ತಾಯಿಯ ಹೆಸರು ಶಿವಶರಣೆ ಬಸವಮ್ಮನವರು. ಮುಮ್ಮಡಿ ಕೃಷ್ಣರಾಜ ಒಡೆಯರು ಶಿವಗಂಗಾ ಕ್ಷೇತ್ರಕ್ಕೆ ಭೇಟಿ ಕೊಟ್ಟ ವಿಷಯ ಅವರ ಜೀವನಚರಿತ್ರೆಯಲ್ಲಿ ದಾಖಲಾಗಿದೆ. ಶಿವಗಂಗಾ ಬೆಟ್ಟಕ್ಕೆ ಹೋಗುವಾಗಲೂ ಅಥವಾ ವಾಪಸ್ಸು ಬರುವಾಗ ಮಹಾಜನತೆಯ ಅಭಿಮಾನದ ಕೋರಿಕೆಯಂತೆ ನಾರಸಂದ್ರ ಗ್ರಾಮಕ್ಕೆ ಭೇಟಿ ಕೊಟ್ಟಾಗ ರುದ್ರಾಕ್ಷಿಮಠದ ಕರ್ತೃಗದ್ದುಗೆ ದರ್ಶನಕ್ಕೆ ಬಂದಾಗ, ಪುತ್ರವರ್ಗ ಪರಂಪರೆಯ ವೇದಮೂರ್ತಿ ಮಹದೇವಶಾಸ್ತ್ರಿಗಳು ಮಾಡಿದ ರಾಜಾಶೀರ್ವಾದ ಮಂತ್ರಗಳನ್ನು ಕೇಳಿ ಮುಮ್ಮಡಿ ಕೃಷ್ಣರಾಜ ಒಡೆಯರು ಮಂತ್ರಮುಗ್ಧರಾಗಿ ಜಂಗಮ ದಂಪತಿಗಳನ್ನು ಮೈಸೂರು ಅರಮನೆಗೆ ಸಮ್ಮುಖ ಪುರೋಹಿತರನ್ನಾಗಿ ಕರೆಸಿಕೊಂಡರು. ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳ ದೌರ್ಭಾಗ್ಯ, ಬಾಲ್ಯದಲ್ಲಿ ಪಿತೃವಿಯೋಗವಾಯಿತು. ಸ್ವಲ್ಪ ಕಾಲದ ನಂತರ ಮಾತೃವಿಯೋಗವಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರವರ ಕೃಪಾಕಟಾಕ್ಷದಿಂದ, ಅಳಿಯ ಲಿಂಗರಾಜರ ಆಶ್ರಯದಲ್ಲಿ ಸಂಸ್ಕೃತ–ಕನ್ನಡ ಭಾಷೆಯ ಘನ ಪಂಡಿತರಾದರು. ಸಂಗೀತಾದಿ ಕಲೆಗಳಲ್ಲಿ ವೇದಾದಿ ದರ್ಶನಗಳಲ್ಲಿ ಘನ ಪಂಡಿತರಾದರು. ಇವರ ವಿದ್ಯಾಗುರುಗಳು ಸೋಸಲೆ ವೇದಮೂರ್ತಿ ಗರಳಪುರಿಶಾಸ್ತ್ರಿಗಳು, ವ್ಯಾಕರಣದ ಬಿ. ಮಲ್ಲಪ್ಪನವರು ಇನ್ನೂ ಮುಂತಾದವರು.

ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳು ಮಹಾರಾಜಾ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರನ್ನು ಕುರಿತು 'ಕೃಷ್ಣರಾಜಾಭ್ಯುದಯ'ವೆಂಬ ಕೃತಿ ರಚಿಸಿದರು. ಆದರೆ ಆ ಕೃತಿ ಲಭ್ಯವಾಗಿಲ್ಲ. ಮಹಾರಾಜಾ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಉಪಯೋಗಕ್ಕಾಗಿ 'ಬಿಲ್ವವೃಕ್ಷ ಪೂಜಾವಿಧಿ' ಎಂಬ ಕೃತಿಯನ್ನು ಶಾಸ್ತ್ರಸಮ್ಮತವಾಗಿ ರಚಿಸಿದ್ದರು. ಈ ಎರಡು ಕೃತಿ ರಚಿಸಿದಾಗ ಬಸವಪ್ಪಶಾಸ್ತ್ರಿಗಳಿಗೆ ಹದಿನೆಂಟು ವರ್ಷ. ನಮ್ಮಗಳ ದೌರ್ಭಾಗ್ಯ 'ಬಿಲ್ವವೃಕ್ಷ ಪೂಜಾವಿಧಿ' ಪುಸ್ತಕವು ಲಭ್ಯವಿಲ್ಲ.

ಮುಮ್ಮಡಿ ಕೃಷ್ಣರಾಜ ಒಡೆಯರ ತರುವಾಯ ಪಟ್ಟಕ್ಕೆ ಬಂದ ದತ್ತುಪುತ್ರ ರಾಜಕುಮಾರ ಶ್ರೀ ಚಾಮರಾಜೇಂದ್ರ ಒಡೆಯರಿಗೆ ವಿದ್ಯಾಬೋಧಕರಾಗಿದ್ದರು. ಅಂದಿನ ದಿವಾನರಾಗಿದ್ದ ದಿವಾನ್ ರಂಗಾಚಾರ್ಯರು, ರಾವ್‌ಬಹದ್ದೂರ್ ಅಂಬಿಲ್ ನರಸಿಂಹಯ್ಯಂಗಾರರು, ಸಾಹುಕಾರ್ ನೀಲಗಿರಿ ಪಾಪಣ್ಣ ಮುಂತಾದ ಮಹನೀಯರ ಪ್ರೋತ್ಸಾಹದಿಂದ ಹಲವು ಕೃತಿಗಳನ್ನು ರಚಿಸಿದರು.

ಮೈಸೂರು ಮಹಾರಾಜರಾಗಿದ್ದ ಶ್ರೀ ಚಾಮರಾಜೇಂದ್ರ ಒಡೆಯರವರ ನೆಚ್ಚಿನ ಕಲಾನುರಾಗದ ಕುರುಹಾಗಿ ಆರಂಭವಾದ ಅರಮನೆ ನಾಟಕ ಮಂಡಳಿಗೆ ಶಾಸ್ತ್ರಿಗಳು ಸಂಸ್ಕೃತ ಭಾಷೆಯ ನಾಟಕಗಳನ್ನು ಕನ್ನಡಿಸಿ ಕೊಡುತ್ತಿದ್ದರು. ಕಾಳಿದಾಸನ ಶಾಕುಂತಲಾ ಷೇಕ್ಸ್‌ಪಿಯರ್‌ನ Othello ನಾಟಕವನ್ನು 'ಶೂರಸೇನ ಚರಿತ್ರೆ'ವೆಂದು ಕನ್ನಡಕ್ಕೆ ಭಾಷಾಂತರಿಸಿಕೊಟ್ಟರು. ಈ ಕಾರಣದಿಂದ ಶಾಸ್ತ್ರಿಗಳನ್ನು ವಿದ್ವತ್‌ಜನತೆ ನಾಟಕಪ್ರೇಮಿಗಳು "ಕನ್ನಡ ನಾಟಕ ಪಿತಾಮಹ"ನೆಂದು ಕರೆದರು. ಶಾಸ್ತ್ರಿಗಳು ಶ್ರೇಷ್ಠ ಗಮಕಿಗಳು ಅವರ ಕಾವ್ಯವಾಚನ ಶಕ್ತಿ ಅಮೋಘವಾದದ್ದು ಎಂದು ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರು ತಮ್ಮ ಉಪನ್ಯಾಸದಲ್ಲಿ ಕೊಂಡಾಡಿದ್ದಾರೆ. ಕುಮಾರವ್ಯಾಸ ಭಾರತವನ್ನು ಅವರು ವಾಚನ ಮಾಡುವ ರೀತಿ ವಾಚನ ಮಾಡುವವರನ್ನು ಮತ್ತೊಬ್ಬರನ್ನು ನಾನು ಕಂಡಿಲ್ಲ ಎಂದು ಕೊಂಡಾಡಿದ್ದಾರೆ. ೧೮೯೧ ಫೆಬ್ರವರಿ ತಿಂಗಳು ಕುದುರೆಗಾಡಿಯಲ್ಲಿ ವಾಯುಸಂಚಾರಕ್ಕೆ ಹೋದಾಗ (ಮೈಸೂರಿನ ದೊಡ್ಡಕೆರೆ ಏರಿಯ ಮೇಲೆ) ಅಪಘಾತವಾಗಿ ಮಹಾಕವಿಯನ್ನು ನಾವು ಕಳೆದುಕೊಂಡೆವು. ಶಾಸ್ತ್ರಿಗಳು ಮಹಾಲಿಂಗದಲ್ಲಿ ಲೀನರಾದಾಗ ಅವರ ಪ್ರಿಯ ಶಿಷ್ಯ ಆಸ್ಥಾನ ಮಹಾವಿದ್ವಾನ್ ಕರ್ಣಾಟಕ ಭಾಷಾರತ್ನಂ ಪಿ.ಆರ್. ಕರಿಬಸವಶಾಸ್ತ್ರಿಗಳು ೨೬–೨–೧೮೯೧ರಂದು ರಚಿಸಿದ ಚರಮಗೀತೆಯಲ್ಲಿ:

> ನೆರೆ ಮರೆವ ವಿಕೃತಿಸಂವ
> ತ್ಸರಗತಮಾಘಾಖ್ಯಮಾಸಸಿತಪಕ್ಷಪರಿ ।
> ಸ್ಫರಿತತ್ರಯೋದಶೀತಿಥಿ
> ವರಪೋಷಿತಕಮಲಮಿತ್ರಸುತವಾಸರದೊಳ ॥ ೧ ॥

ಸ್ಪಷ್ಟವಾಗಿ ತಿಳಿಸಿದ್ದಾರೆ.

ಶುಭಕೃದ್ವತ್ಸರದೊಳ್ಸ
ದ್ವಿಭವದೆ ಜನಿಸುತ್ತೆ ಬಾಲ್ಯದೊಳೆ ನಲವಿನಂ ।
ಉಭಯಸುಭಾಷಿಗಳೊಳ್ದು
ರ್ಲಭಮಪ್ರನಿಚಕ್ಷಣತೆಯನುರೆ ಕೈಕೇಂತಂ ॥ ೪ ॥

ಈ ಮಾಹಿತಿಯಿಂದ ಶಾಸ್ತ್ರಿಗಳು ಜನಿಸಿದ್ದು ೧೮೪೩ರಲ್ಲಿ. ಮಹಾಲಿಂಗದಲ್ಲಿ ಲೀನವಾಗಿದ್ದು ಫೆಬ್ರವರಿ ೧೮೯೧. ಒಟ್ಟು ಜೀವಿತಾವಧಿ ೪೮ ವರ್ಷ ಮಾತ್ರ. ಅಂದಿನ ಸಮಕಾಲೀನ ವಿದ್ವಾಂಸರು ಒಂದು ಸಂಸ್ಮರಣ ಗ್ರಂಥವನ್ನು ಹೊರತಂದಿದ್ದರೆ ಸಾಕಷ್ಟು ಮಾಹಿತಿ ಉಳಿದುಬರುತ್ತಾ ಇತ್ತು. ೧೯೭೭ರಲ್ಲಿ ಮೈಸೂರು ನಗರದಲ್ಲಿ ನೆಲೆಸಿದ್ದ ಲಿಂ॥ ಆಸ್ಥಾನ ವಿದ್ವಾನ್ ಪ್ರೊ॥ ಎಂ.ಜಿ. ನಂಜುಂಡಾರಾಧ್ಯರು ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳು ಸಮಗ್ರ ಕೃತಿಗಳನ್ನು ತಮ್ಮ ಪ್ರಬೋಧ ಪುಸ್ತಕ ಮಾಲೆಯಿಂದ ಹೊರತಂದು ಮಹದುಪಕಾರ ಮಾಡಿದ್ದಾರೆ. ಹಳೆಯ ಪ್ರಕಟಿತ ಬಾಲಿಕಾ ಗೀತಮುಕ್ತಾಕಲಾಪ ಪರಿಶೀಲಿಸುವಾಗ ಬಸವಪ್ಪಶಾಸ್ತ್ರಿಗಳು ವಿರಚಿಸಿದ ಈ ಗೀತೆಗಳು ನನ್ನ ಪರಿಶೀಲನೆಗೆ ಲಭ್ಯವಾದವು. ಅವುಗಳನ್ನು ಯಥಾವತ್ತಾಗಿ ಕೊಡಲಾಗಿದೆ.

**ರಾಗ–ಬೆಹಾಗು** **ರೂಪಕತಾಳ**

ತ್ರಿಪುರಸುಂದರಿ । ತಾರಾಧೀಶ । ನೀಕಾಶಾನನೆ ॥ ಪ ॥

ಚಪಲಲೋಚನೆಚರಣಭಕ್ತ । ವಿಪದಪಹರಣೈಕಚತುರೆ ।
ವಿಪುಲದನುಜಬೃಂದದಮನಿ । ಲಪನವಿಚಿತಜಲಜ ನಿಕರೆ ॥ ॥ ೧ ॥

ಕಮಲಸಂಭವಮಘವದಾದಿ । ನಮದಮರ ಕಿರೀಟಖಚಿತ ।
ವಿಮಲಮಣಿರೀಚಿರುಚಿರ । ತಮಸುಚರಣನಳಿನಯುಗಳೆ ॥ ॥ ೨ ॥

ಗಿರಿವರಾರ್ಜಿತಸುಕೃತಸಾರ । ಪರಿಣತಿಮಯಮೂರ್ತಿಲಲಿತೆ ।
ನಿರುಪಮಕೃಪೆಪಾಹಿಮಾಮಿಹ । ನರಹರಿಕವಿವಿನುತಚರಿತೆ ॥ ॥ ೩ ॥

**ಶ್ರೀರಾಮನು ಸೀತಾದೇವಿಯನ್ನು ರಕ್ಷಿಸೆಂದು ಭೂದೇವಿಯನ್ನು ಸ್ತುತಿಸಿದ ಪದ**

**ರಾಗ–ಜಂಜೋಟಿ** **ಮಿಶ್ರಛಾಪುತಾಳ**

ದೇವಿಪಾಲಿಸು ವೈದೇಹಿಯ–ಭೂಮಿ ॥ ಪ ॥

ಇನವಂಶದರಸರ । ಮನೆಗೆ ಮಂಗಳೆಯಾದ ।
ಜನಕಕುಲಾಂಬುಧಿಲಕ್ಷ್ಮಿಯ ॥ ೧ ॥

ದೇವಯಾಗದೆ ಭೂ । ದೇವಿನೀನೇ ಪೆತ್ತ ।
ಪಾವನಳಾದ ಸೀತೆಯ ॥ ೨ ॥

ಮನದಿನಾಂ ಪರಮಪಾವನೆಯೆಂದು ತಿಳಿದರು ।
ಜನವಮೆಚ್ಚಿಸೆ । ಬಿಟ್ಟ ಸೀತೆಯ ॥ ೩ ॥

**ಶ್ರೀರಾಮನು ಗಂಗೆಯನ್ನು ಸ್ತುತಿಸಿದ ಪದ**

**ರಾಗ–ಜಲಾಪು** **ಆದಿತಾಳ**

ಭಾಗೀರಥಿಮಹಾ । ಭಾಗೆವಂದಿಪೆನಾಂ ।
ನಾಗಭೂಷಣಶಿರೋ । ಭಾಗವಿಭೂಷೆ ॥ ಪ ॥

ಕಪಿಲಕೋಪಾಗ್ನಿಯಿಂ । ತಪಿಸಿದನಂಮಯ ।
ಪ್ರಪಿತಾಮಹರನು । ಕೃಪೆಯೊಳು ಪೊರೆದ ॥ ೧ ॥

ಅಭಿವಂದಕಜನ । ಕಭಿಮತವೆನಿಸುವ ।
ಶುಭಫಲವೀಯುವ । ತರಿಭುವನಪಾವನೆ ॥ ೨ ॥

ಕ್ಷಿತಿಸುತೆಯೊಳಗರುಂ । ಧತಿಯೊಲು ನೀನು ।
ಹಿತವನು ಚಿಂತಿಸು । ಶ್ರಿತಪರಿಪಾಲೆ ॥ ೩ ॥

**ಶ್ರೀರಾಮನು ಅಗಸ್ತ್ಯಾಶ್ರಮಕ್ಕೆ ಹೋಗುವುದಕ್ಕಾಗಿ ಪಂಚವಟಿಯನ್ನು ಸ್ತುತಿಸಿ ಹೊರಟದ್ದು**

**ರಾಗ–ಸುರಟ** **ರೂಪಕತಾಳ**

ಪಂಚವಟೀಮುನಿನಿಕರಸ । ಮಂಚಿತೆಮಹಾ ॥ ಪ ॥

ಶರಧಿಯನಾಚಮನಗೈದ । ಪರಮಮಹಿಮರು ।
ಬರುವದೆಂದು ಪೇಳಿದರಾ । ವರಮುನೀಂದ್ರರು ॥ ೧ ॥

ಗುರುಜನೋಪರೋಧಗೈಯ । ದಿರುವರಾಮನ ।
ಪಿರಿದತಿಕ್ರಮವಸ್ಯೆ । ಸಿರುನೀನೀಕ್ಷಣ ॥ ೨ ॥

ಆ ಗುರುಗಳ ಸನ್ನಿಧಿಗನು । ರಾಗದಿಂದ ನಾಂ ।
ಪೋಗಿಬರುವೆನೀಗ ಸುಜನ । ಪೊಗಸನ್ನುತೆ ॥ ॥ ೩ ॥

***

**ರಾಗ–ಹಮೀರಣಕಲ್ಯಾಣಿ** **ರೂಪಕತಾಳ**

ಆಲಿಸುಭೂಪಾಲಕ ಕುಲಮೌಳಿರತ್ನನೆ ।
ಬಾಲೆಪೇಳ್ವಬಿನ್ನಪವ ಕೃ । ಪಾಲವಾಲನೆ ॥ ಪ ॥

ಉಳಿದೆನ್ನ ಮನೆಯೊಳೆನ್ನಯ ಪತಿತೆರಳ್ದ ಬಳಿಕನಾಂ ।
ಫಲವಿಲ್ಲದುಪವಾಸವ ಮಾಡಿದವೊಲಾಯಿತು ॥ ೧ ॥

ಪತಿಸನ್ನಿಧಿಯೊಳಗಿಲ್ಲದೆ ನಿಮಿಷಾರ್ಧವನುಹಾ ।
ಅತಿಕಷ್ಟದಿಂದ ನೂಕುವೆ ಯುಗಕೆಣೆಯ ಮಾಡಿನಾಂ ॥ ೨ ॥

ಅದರಿಂದ ಪತಿಯ ಸಂಗಡನಾಂಪೋಗಲಾಜ್ಞೆಯಾ ।
ಮುದದಿಂದಕೊಟ್ಟು ಕಳುಹಿಪುವೈ ಸದಯಹೃದಯನೆ ॥ ೩ ॥

**ಸೀತಾದೇವಿ ಲಕ್ಷ್ಮಣನ ಸಂಗಡ ಹೇಳುವ ಪದ**

**ರಾಗ–ಕಾಂಭೋಜಿ** **ರೂಪಕತಾಳ**

ಆರನು ಆಡುವದೇತಕೆ ನನ್ನ । ಕ್ರೂರಕರ್ಮದ ಫಲವು ॥ ಪ ॥

ಕಡೆಗೆದಯಾಳುರಾಘವನಲ್ಲಿ ತಪ್ಪಿಲ್ಲ ।
ನುಡಿವುದೇನಣುಗನಿನ್ನಲ್ಲು ತಪ್ಪಿಲ್ಲ ॥
ಕಡುಪಾತಕಿ ನಾನು ಪೆಣ್ಣಾಗಿ ಪುಟ್ಟ ಬೆಂ ।
ದೊಡಲಪೊರೆವುದೆ ಯನ್ನದೆ ತಪ್ಪಲ್ಲದೆ ॥ ೧ ॥

**ಪತಿಭಕ್ತಿಯನ್ನು ಕುರಿತು ಹೇಳುವ ಪದಗಳು**

**ರಾಗ–ಮುಖಾರಿ** **ಆದಿತಾಳ**

ಆಲೀಸೈಯ್ಯಸತ್ಯ ಸು । ಶೀಲನೆ ನೀನು ।
ಪೇಳುವೆ ದೇವರ ಮುಂದೆ । ಪೇಳುವವೊಲ್ನಾನು ॥ ಪ ॥

ಮತಿಮನೋವಾಕ್ಕಾಯಕರ್ಮಂಗಳಿಂದಲಿ ।
ಪತಿಯಾ ಮೀರಿನಡೆದರಧೋಗತಿಯದಾಗಲಿ ॥ ೧ ॥

ಪಟ್ಟದರಸನೊಮ್ಮೆ ನಿರ್ದಯನಾಗಲು ನಾನು ।
ಬಿಟ್ಟರು ಬಿಡಲಾರೆನವನೊಳಿಟ್ಟಾಸೆಯನು ॥ ೨ ॥

ಇಂತು ನಿಜವಾಗಿನಾಂ ನಡೆಯುತಿರ್ದ್ದರು ।
ಕಾಂತನಂತಾಡಿದಮೆಲ್ಲಾನೆಂತು ಬಾಳುವೆನು ॥ ೩ ॥

**ರಾಗ–ಕಾಂಭೋಜಿ** **ಮಿಶ್ರಛಾಪುತಾಳ**

ಅಕ್ಕಟಾ ದ್ರೋಹಿಯೆಂದಾಡಿದ ನಾರ್ಯಪುತ್ರನೆನ್ನನು ॥ ಪ ॥

ಪತಿಯೆಯನಗೆ ಪರದೈವೆನ್ನು ತನಾಂ ।
ಮತಿಯಲ್ಲಿತಿಳಿದಿರ್ಪುದೆ ದ್ರೋಹವೊ ॥
ಮತಿಮನೋವಾಕ್ಕಾಯಂಗಳೊಳಾತನಾ ।
ಣತೆಯನುಮೀರದೆ ನಡೆದುದೆ ದ್ರೋಹವೊ ॥ ೧ ॥

ಪರಪುರುಷರ ಸಹೋ । ದರರೆಂದು
ಭಾವಿಸಿಬರಲಾದರಿಸಿದುದೆ ದ್ರೋಹವೊ ॥
ಪುರುಷನುಪೇಳದಿರ್ದರುಮಾತಿನಿಂಗಿತ ।
ವರಿತುನಾಂನಡೆದುದೇನಾದರು ದ್ರೋಹವೊ ॥ ೨ ॥

ಆತಂಗೆಬೇಸರಾಗುತ್ತ ಪೇಳಿದಾಗ ಸಂ ।
ಗೀತವ ಪಾಡಿದುದೆದ್ರೋಹವೊ ॥
ನೂತನಕಾವ್ಯಕಲಾಚಿತ್ರ ಕೌಶಲ್ಯ ।
ರೀತಿಯನಾನರಿತಿರ್ಪ್ಪುದೆ ದ್ರೋಹವೊ ॥ ೩ ॥

ಆಪತ್ತಡಸಿದಜನದೊಳುನಾನು ।
ತಾಪವನಾಂತುನಾಂ ನಡೆದುದೆ ದ್ರೋಹವೊ ॥
ಕೋಪದಿಪೊಡೆಯೆ ಸೈರಿಸಿಪ್ಪುದೆದ್ರೋಹವೊ ।
ರೂಪಾತಿಶಯವನಾಂ ಪಡೆದುದೆ ದ್ರೋಹವೊ ॥ ೪ ॥

# ವಾರ್ತಾವಿಹಾರ

ಕುಮಾರಸ್ವಾಮಿ ವಿರಕ್ತಮಠ

**ಆಂಗ್ಲಭಾಷೆಯಲ್ಲಿ ಪ್ರಭುತ್ವ ಹೊಂದಿದ್ದ ವಿದ್ವಾಂಸ ಪ್ರೊ. ಸಿಡಿಎನ್**

ಏಪ್ರಿಲ್ 12ರಂದು ಧ್ವನ್ಯಾಲೋಕದಲ್ಲಿ ಪ್ರೊ. ಸಿ.ಡಿ. ನರಸಿಂಹಯ್ಯನವರ ಶತಮಾನೋತ್ಸವದ ನೆನಪಿನ ಫಲಕವನ್ನು ಅನಾವರಣಗೊಳಿಸಿ, ಸಿಡಿಎನ್ ಸ್ಮಾರಕ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಮಾತನಾಡುತ್ತಾ ಪ್ರೊ. ಸಿಡಿಎನ್‌ರವರು ಆಂಗ್ಲಭಾಷೆಯಲ್ಲಿ ಪ್ರಭುತ್ವ ಹೊಂದಿದ್ದ ಅಪರೂಪದ ವಿದ್ವಾಂಸರಾಗಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು. ಗ್ರಾಮಾಂತರ ಪ್ರದೇಶದಿಂದ ಬಂದ ಸಿಡಿಎನ್‌ರವರು ಶ್ರದ್ಧೆ ಮತ್ತು ಆಳವಾದ ಅಧ್ಯಯನಗಳಿಂದ ದೇಶ–ವಿದೇಶಗಳಲ್ಲಿ ಅತ್ಯುತ್ತಮವಾದ ಸ್ಥಾನ ಗಳಿಸಿದ್ದರು. ಟಿ.ಎಸ್. ಈಲಿಯಟ್ ಅವರ 'ದಿ ಕ್ರೈಟಿರಿಯನ್' ಪತ್ರಿಕೆಯ ಮಾದರಿಯಲ್ಲಿ 'ದಿ ಲಿಟರರಿ ಕ್ರೈಟಿರಿಯನ್' ತ್ರೈಮಾಸಿಕ ಪ್ರಾರಂಭಿಸಿದರು. ಉತ್ತಮ ಆಡಳಿತಗಾರರಾಗಿದ್ದರು. ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ವಿಶೇಷ ಆಸಕ್ತಿ ಹೊಂದಿದವರಾಗಿದ್ದರು. ಅವರ ಶತಮಾನೋತ್ಸವದ ಉದ್ಘಾಟನೆಯ ಶುಭ ಸಂದರ್ಭದಲ್ಲಿ ಅವರ ಶಿಷ್ಯಪರಂಪರೆಯವರಾಗಿರುವ ಪಂ. ರಾಜೀವ್ ತಾರಾನಾಥ್, ಡಿ.ಎ. ಶಂಕರ್, ಡಾ. ಸಿ.ಎನ್. ರಾಮಚಂದ್ರನ್‌ರವರುಗಳಿಗೆ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಅತ್ಯಂತ ಶ್ಲಾಘನೀಯವಾದುದು. ಕೇಂದ್ರದ ನಿರ್ದೇಶಕರಾದ ಪ್ರೊ. ಸಿ.ಎನ್. ಶ್ರೀನಾಥ್‌ರವರು ಕೇಂದ್ರವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಶತಮಾನೋತ್ಸವದ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ನೆರವೇರಲೆಂದು ಹಾರೈಸಿದರು.

ಪ್ರಶಸ್ತಿ ಸ್ವೀಕರಿಸಿದ ಪಂ. ರಾಜೀವ್ ತಾರಾನಾಥ್‌ರವರು ಪ್ರೊ. ಸಿಡಿಎನ್ "ಸ್ಕೂಲ್ ಆಫ್ ಇಂಗ್ಲಿಷ್ ಸ್ಟಡೀಸ್" ಅನ್ನು ಪ್ರಾರಂಭಿಸಿ, ಗುರು–ಶಿಷ್ಯ ಪರಂಪರೆಯಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ಕಲಿಸುತ್ತಿದ್ದುದನ್ನು ಉದಾಹರಣೆಗಳ ಮೂಲಕ ವಿವರಿಸಿದರು.

ಮತ್ತೊಬ್ಬ ಪ್ರಶಸ್ತಿ ಪುರಸ್ಕೃತರಾದ ಡಾ. ಡಿ.ಎ. ಶಂಕರ್, ಪ್ರೊಫೆಸರ್ ಸಿಡಿಎನ್‌ರವರ ವಿದ್ಯಾರ್ಥಿಯಾಗಿದ್ದ ದಿನಗಳನ್ನು ನೆನಪಿಸಿಕೊಂಡರು.

ಸಂಸ್ಥೆಯ ನಿರ್ದೇಶಕರಾದ ಶ್ರೀ ಸಿ.ಎನ್. ಶ್ರೀನಾಥ್‌ರವರು ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರ್ಯಕ್ರಮ ನಿರೂಪಿಸಿದರು.

**ಕಲುಷಿತಗೊಳ್ಳುತ್ತಿರುವ ಭೂತಾಯಿಯನ್ನು ಸಂರಕ್ಷಿಸಿ**

ಮನುಷ್ಯನ ಅತಿಯಾದ ದಾಹದಿಂದ ಕಲುಷಿತಗೊಳ್ಳುತ್ತಿರುವ ಭೂತಾಯಿಯನ್ನು ಸಂರಕ್ಷಿಸಿ, ಫಲವತ್ತತೆಗೊಳಿಸಿ ಆ ಮೂಲಕ ಜನರ ಆರೋಗ್ಯ ರಕ್ಷಣೆ ಮಾಡಬೇಕಾದುದು ಇಂದಿನ ಅಗತ್ಯವಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು. ಪೂಜ್ಯರು ಏಪ್ರಿಲ್ 16ರಂದು ಬೆಂಗಳೂರಿನ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಾವಯವ ಕೃಷಿ ಮಿಷನ್‌ನಿಂದ ಏರ್ಪಡಿಸಿದ್ದ ಭೂಮಿ ಸುಪೋಷಣಾ ಮತ್ತು ಸಂರಕ್ಷಣಾ ಅಭಿಯಾನದ 'ಭೂತಾಯ ಕಾಯಕಕೆ – ಧರ್ಮ ಕಾಯ್ವರ ಹೆಗಲು' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಒಕ್ಕೊರಲಿನ ಸಂಕಲ್ಪದ ಸಂದೇಶವನ್ನು ಬೋಧಿಸಿದ ಸಂದರ್ಭದಲ್ಲಿ ತಿಳಿಸಿದರು.

ಅಭಿಯಾನಕ್ಕೆ ಚಾಲನೆ ನೀಡಿದ ಕನ್ಹೇರಿ ಮಠದ ಶ್ರೀ ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮಿಗಳು 'ಮಠಮಾನ್ಯಗಳು ಸಾವಯವ ಕೃಷಿ ಪುನರುಜ್ಜೀವನಕ್ಕೆ ಸಂಕಲ್ಪ ಮಾಡಬೇಕಾಗಿದೆ. ಹಲವಾರು ಕ್ರಮಗಳಿಂದ ರೈತರಿಗೆ ಮಾರ್ಗದರ್ಶನ ಮಾಡಲು ಅವಕಾಶಗಳಿವೆ. ಅದಕ್ಕೆ ಎಲ್ಲರೂ ಕಂಕಣಬದ್ಧರಾಗಬೇಕೆಂದು' ತಿಳಿಸಿದರು. ಚಿತ್ರದುರ್ಗದ ಶ್ರೀ ಮುರುಘಾ ಶರಣರು, ಸಾಣೆಹಳ್ಳಿ, ಪುಷ್ಪಗಿರಿ, ಬಳ್ಳಾರಿ, ತಾಡೋಳ ಮೊದಲಾದ ಮಠಗಳ ಶ್ರೀಗಳು ಹಾಗೂ ಶ್ರೀ ವಿನಯ್ ಗುರೂಜಿ ಮೊದಲಾದವರು ಪಾಲ್ಗೊಂಡು ಸಾವಯವ ಕೃಷಿಯಿಂದ ಭೂ ಫಲವತ್ತತೆಯ ಸಂರಕ್ಷಣೆ, ಅದರಿಂದ ಜನರ ಆರೋಗ್ಯ ಸುಧಾರಣೆ ಇದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಕೈಗೊಳ್ಳಬಹುದಾದ ಕ್ರಮಗಳು, ಇರುವ ಅಡೆತಡೆಗಳು ಹಾಗೂ ತೊಂದರೆಗಳು ಇವೆಲ್ಲವುಗಳ ಬಗೆಗೆ ಸುದೀರ್ಘವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಉಪಮುಖ್ಯಮಂತ್ರಿಗಳಾದ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ್‌ರವರು ಇದು ಅತ್ಯಂತ ತುರ್ತು ಕಾರ್ಯವಾಗಿದ್ದು, ಎಲ್ಲ ಪೂಜ್ಯರ ಮಾರ್ಗದರ್ಶನ ಅಗತ್ಯವೆಂದು ತಿಳಿಸಿದರು. ಸಾವಯವ ಕೃಷಿ ಮಿಷನ್ ಅಧ್ಯಕ್ಷರಾದ ಶ್ರೀ ಆ.ಶ್ರೀ. ಆನಂದ್‌ರವರು ಪ್ರಾಸ್ತಾವಿಕ ಭಾಷಣ ಮಾಡಿ ಸಾವಯವ ಕೃಷಿ ಮತ್ತು ಗೋಸಂರಕ್ಷಣೆ ಇವುಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲು ಮಾನ್ಯ ಮಠಾಧೀಶರುಗಳು ಮಾರ್ಗದರ್ಶನ ಮಾಡಬೇಕೆಂದು ಕೋರಿದರು. ಕ್ಷೇತ್ರೀಯ ಕಾರ್ಯನಿರ್ವಾಹಕರಾದ ಶ್ರೀ ತಿಪ್ಪೇಸ್ವಾಮಿಯವರು, ಸಾವಯವ ಕೃಷಿ ಪರಿವಾರದ ಅಧ್ಯಕ್ಷರಾದ ಶ್ರೀ ನಂಜುಂಡಪ್ಪನವರು ಮಿಷನ್‌ನ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಸಾವಯವ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಕಿರುಚಿತ್ರದ ಪ್ರದರ್ಶನ ಮಾಡಲಾಯಿತು. ಶ್ರೀ ಭಾಸ್ಕರ್ ಹೆಗಡೆ ಸ್ವಾಗತಿಸಿದರು. ವಿದ್ವಾನ್ ಶ್ರೀ ಜಿ.ಎಸ್. ಶ್ರೀಕಂಠ ಭಟ್ ಪ್ರಾರ್ಥನೆ ಸಲ್ಲಿಸಿದರು. ಶ್ರೀಮತಿ ಚೈತ್ರ ಲೋಹಿತಾಶ್ವ ಕಾರ್ಯಕ್ರಮ ನಿರೂಪಿಸಿದರು.

**ಆಕಸ್ಮಿಕವಾಗಿ ಮುಖ್ಯಮಂತ್ರಿ ಪಾತ್ರ ಮಾಡಿ ಶಾಶ್ವತ ಮುಖ್ಯಮಂತ್ರಿಯಾದ ಚಂದ್ರು**

ಆಕಸ್ಮಿಕವಾಗಿ ಮುಖ್ಯಮಂತ್ರಿ ಪಾತ್ರ ಮಾಡಿ ಶಾಶ್ವತವಾಗಿ ಶ್ರೀ ಚಂದ್ರಶೇಖರ್‌ರವರು ಮುಖ್ಯಮಂತ್ರಿ ಚಂದ್ರು ಆದರು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಏಪ್ರಿಲ್ 18 ರಂದು ಮೈಸೂರಿನ ಕಲಾಮಂದಿರದಲ್ಲಿ ನಗರ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ದೆಹಲಿಯ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ವತಿಯಿಂದ ಏರ್ಪಡಿಸಿದ್ದ ಕಲಾವಿದರು, ಮಾಜಿ ಶಾಸಕರು ಆದ ಶ್ರೀ ಮುಖ್ಯಮಂತ್ರಿ ಚಂದ್ರುರವರಿಗೆ ಅಭಿನಂದನಾ ಸಮಾರಂಭ, 'ಮುಖ್ಯಮಂತ್ರಿ' ನಾಟಕ ಹಾಗೂ ಡಾ. ಬಿ.ಆರ್. ಅಂಬೇಡ್ಕರ್‌ರವರನ್ನು ಕುರಿತ 'ಇವರೇ ಮಹಾನಾಯಕ' ವಿಡಿಯೋ ಪ್ರದರ್ಶನದ ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರುಗಳವರು ಚಂದ್ರಶೇಖರ್‌ರವರ ನಟನೆ ಕಂಡು ಅಂದಿನ ಮುಖ್ಯಮಂತ್ರಿಗಳೇ ಅವರಿಗೆ ಚಿನ್ನದ ಉಂಗುರ ಉಡುಗೊರೆಯಾಗಿ ನೀಡಿದ್ದರು. ಅಂತಹ ಆಕರ್ಷಕ ಅಭಿನಯ ಅವರದು. ಹಿಂದಿ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಮುಖ್ಯಮಂತ್ರಿ ನಾಟಕದ ಮುಖ್ಯ ಪಾತ್ರದಲ್ಲಿ ಆಕಸ್ಮಿಕವಾಗಿ ಅಭಿನಯಿಸುವ ಅವಕಾಶ ಶ್ರೀ ಚಂದ್ರು ಅವರಿಗೆ ಲಭಿಸಿತು. ಸದಾ ಹಾಸ್ಯಪ್ರಜ್ಞೆಯ ಚಂದ್ರು ಕನ್ನಡ ಭಾಷೆ ಅಭಿವೃದ್ಧಿ ವಿಚಾರ ಬಂದಾಗ ಗಂಭೀರವಾಗಿ ಚರ್ಚಿಸುತ್ತಾರೆ ಎಂದು ಹೇಳಿದರು.

ಮೈಸೂರು ವಿವಿ ಕುಲಪತಿಗಳಾದ ಪ್ರೊ. ಜಿ. ಹೇಮಂತ್‌ಕುಮಾರ್‌ರವರು ಹವ್ಯಾಸಿ ನಾಟಕವು ಇದೇ ರೀತಿ ಮುಂದುವರೆಯಬೇಕಾದರೆ ಯುವಪೀಳಿಗೆಯನ್ನು ನಾವು ಇದರಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ವಿಶ್ವವಿದ್ಯಾನಿಲಯದಲ್ಲೂ ರಂಗ ತರಬೇತಿ ಏರ್ಪಡಿಸುವ ಚಿಂತನೆ ಇದೆ. ಅದಕ್ಕೆ ಮುಖ್ಯಮಂತ್ರಿ ಚಂದ್ರು ಮತ್ತು ನಿರ್ದೇಶಕರಾದ ರಾಜಾರಾಮ್‌ರವರ ಮಾರ್ಗದರ್ಶನದ ಅಗತ್ಯವಿದೆ ಎಂದರು.

ಪ್ರೊ. ಎಂ. ಕೃಷ್ಣೇಗೌಡರವರು ಮುಖ್ಯಮಂತ್ರಿ ಚಂದ್ರುರವರು ಯಾವಾಗಲೂ ತಮ್ಮ ಮೊದಲ ಆದ್ಯತೆಯನ್ನು ಕನ್ನಡಕ್ಕೆ ನೀಡಿ, ನಂತರ ನಾಟಕಕ್ಕೆ ನೀಡುತ್ತಾ ಬಂದಿದ್ದಾರೆ. ಮುಖ್ಯಮಂತ್ರಿ ನಾಟಕ ಸಾವಿರ ಪ್ರದರ್ಶನ ಕಾಣುವಂತಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ರಂಗ ನಿರ್ದೇಶಕರಾದ ಶ್ರೀ ಬಿ.ವಿ. ರಾಜಾರಾಮ್‌ರವರನ್ನೂ ಅಭಿನಂದಿಸಲಾಯಿತು. ದಾಸ್ತಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಾದ ಡಾ. ಡಿ. ತಿಮ್ಮಯ್ಯ, ಬೆಂಗಳೂರಿನ ಸುಜೀವ್ ಹೆಲ್ತ್ ಮತ್ತು ಸ್ಪೋರ್ಟ್ಸ್ ಕ್ಲಬ್ ಮುಖ್ಯಸ್ಥರಾದ ಶ್ರೀ ಎಸ್. ರಾಜಾರಾಮ್, ಮಂಡ್ಯ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳಾದ ಶ್ರೀ ಜಿ.ಎಸ್. ಸೋಮಶೇಖರ್, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯ ರಾಜ್ಯಾಧ್ಯಕ್ಷರಾದ ಡಾ. ಸಿ. ವೆಂಕಟೇಶ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಶ್ರೀ ಮಡ್ಡೀಕೆರೆ

ಗೋಪಾಲ್, ಡಾ. ಕೆ. ರಘುರಾಂ ವಾಜಪೇಯಿ, ಶ್ರೀ ಎಂ. ನೂತನ್, ಶ್ರೀ ಪುಟ್ಟಯ್ಯ, ಶ್ರೀ ಎಸ್.ಬಿ.ಎಂ. ಪ್ರಸನ್ನ ಪಾಲ್ಗೊಂಡಿದ್ದರು. ಶ್ರೀ ನಿಂಗರಾಜು ಮತ್ತು ತಂಡದವರು ಪ್ರಾರ್ಥನೆ ಸಲ್ಲಿಸಿದರು. ಕಸಾಪ ನಗರಾಧ್ಯಕ್ಷರಾದ ಶ್ರೀ ಕೆ.ಎಸ್. ಶಿವರಾಮು ಸ್ವಾಗತಿಸಿದರು. ಕಸಾಪ ಜಿಲ್ಲಾಧ್ಯಕ್ಷರಾದ ಡಾ. ವೈ.ಡಿ. ರಾಜಣ್ಣ ವಂದಿಸಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಎಂ. ಚಂದ್ರಶೇಖರ್ ಕಾರ್ಯಕ್ರಮ ನಿರೂಪಿಸಿದರು.

**ಭಗವಂತನಲ್ಲಿ ಭಕ್ತಿ ಸಮರ್ಪಿಸುವವರು ಸದಾಕಾಲ ಪರೀಕ್ಷೆಗೆ ಒಳಗಾಗುತ್ತಾರೆ**

ಭಗವಂತನಲ್ಲಿ ಭಕ್ತಿ ಸಮರ್ಪಿಸುವವರು ಸದಾಕಾಲ ಪರೀಕ್ಷೆಗೆ ಒಳಗಾಗುತ್ತಾರೆ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಏಪ್ರಿಲ್ 19ರಂದು ಟಿ. ನರಸೀಪುರ ತಾಲ್ಲೂಕು ಹೊಸೂರುಹುಂಡಿಯ ಶ್ರೀ ಗುರುಮಲ್ಲೇಶ್ವರ ದಾಸೋಹ ಶಾಖಾ ಮಠದ ನೂತನ ಕಟ್ಟಡದ ಉದ್ಘಾಟನೆಯ ದಿವ್ಯಸಾನ್ನಿಧ್ಯ ವಹಿಸಿ, ಭಗವಂತ ನೀಡುವ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಭಗವಂತನಿಗೆ ಹತ್ತಿರವಾಗುತ್ತಾರೆ. ಭಕ್ತಿಯಿಲ್ಲದೆ ಯಾವುದೇ ಪೂಜೆ ಪುನಸ್ಕಾರ ಮಾಡಿದರೂ ಅದು ಭಗವಂತನಿಗೆ ಸಲ್ಲಿಕೆಯಾಗಲು ಸಾಧ್ಯವಿಲ್ಲ. ಆದರೆ ಪ್ರೀತಿಯ ಸೆಲೆ ಇರುವೆಡೆ ಭಕ್ತಿ ನೆಲೆಸಿರುತ್ತದೆ. ಶ್ರೀ ಗುರುಮಲ್ಲೇಶ್ವರರು ಶ್ರೇಷ್ಠ ಸಂತರು. ಈ ಭಾಗದ ಜನಮಾನಸದಲ್ಲಿ ಅಚ್ಚಳಿಯದಂತಹ ಪ್ರಭಾವದ ಮುದ್ರೆ ಒತ್ತಿದ್ದಾರೆ. ಸರಳ ಹಾಗೂ ಸಹಜವಾದ ಜೀವನದ ಮೂಲಕವೂ ಜನಸಾಮಾನ್ಯರು ಹೇಗೆ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು ಎಂದು ತೋರಿಸಿದ್ದಾರೆ' ಎಂದು ತಿಳಿಸಿದರು.

ಶಾಸಕರಾದ ಶ್ರೀ ಎಂ. ಅಶ್ವಿನ್‌ಕುಮಾರ್‌ರವರು ಮಠಗಳು ಇದ್ದಲ್ಲಿ ಗ್ರಾಮದ ಜನ ಸುಖ, ಶಾಂತಿ ಮತ್ತು ನೆಮ್ಮದಿಗಳಿಂದ ಬದುಕಲು ಸಾಧ್ಯ. ಸಾಮರಸ್ಯದಿಂದ ಜೀವನ ಸಾಗಿಸಬೇಕು ಹಾಗೂ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವುದು ಅವಶ್ಯಕ ಎಂದರು.

ಕನಕಪುರ, ವಾಟಾಳು ಹಾಗೂ ಸೋಮಹಳ್ಳಿ ಶ್ರೀಗಳು ದಿವ್ಯ ಸಮ್ಮುಖ ವಹಿಸಿದ್ದರು. ಮುಡಿಗುಂಡ ಮಠದ ಶ್ರೀಗಳು, ಮಾಜಿ ಶಾಸಕರಾದ ಡಾ. ಎನ್.ಎಲ್. ಭಾರತೀಶಂಕರ್, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಅಪರ ಆಯುಕ್ತರಾದ ಡಾ. ಹೆಳವರಹುಂಡಿ ಸಿದ್ದಪ್ಪ ಮಾತನಾಡಿದರು. ವೀರಶೈವ–ಲಿಂಗಾಯತ ಮಹಾಸಭಾದ ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀ ತೊಟ್ಟವಾಡಿ ಮಹದೇವಸ್ವಾಮಿ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ಪುಷ್ಪಾ ವಚನ ಗಾಯನ ಮಾಡಿದರು. ಶ್ರೀ ಬಸವರಾಜು ಪ್ರಾರ್ಥಿಸಿದರು. ಶ್ರೀ ತೋಟೇಶ್ ಸ್ವಾಗತಿಸಿದರು. ಶ್ರೀ ಜ್ಞಾನೇಂದ್ರಮೂರ್ತಿ ವಂದಿಸಿದರು. ಶ್ರೀ ಕುಮಾರಸ್ವಾಮಿ ಮೂಗೂರು ಕಾರ್ಯಕ್ರಮ ನಿರೂಪಿಸಿದರು.

**ಜನಾನುರಾಗಿ ಜರಗನಹಳ್ಳಿ ಶಿವಶಂಕರ್**

ಜರಗನಹಳ್ಳಿ ಶಿವಶಂಕರ್ ಸಂಘಜೀವಿಗಳಾಗಿ ಎಲ್ಲರೊಂದಿಗೆ ಅನ್ಯೋನ್ಯವಾದ ಸಂಬಂಧ ಹೊಂದಿ ಜನಾನುರಾಗಿಗಳಾಗಿದ್ದವರು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು. ಮೇ 5ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಿಂದ ವೆಬಿನಾರ್ ಮೂಲಕ ಆಯೋಜಿಸಿದ್ದ ಸಾಹಿತಿಗಳಾದ ಶ್ರೀ ಜರಗನಹಳ್ಳಿ ಶಿವಶಂಕರ್‌ರವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು.

ಶಿವಶಂಕರ್ ಬದುಕನ್ನು ಸಾಹಿತ್ಯಕ್ಕೆ ಮೀಸಲಾಗಿರಿಸಿದ್ದವರು. ಅವರು ಜರಗನಹಳ್ಳಿಯಲ್ಲಿ ನಡೆಸುತ್ತಿದ್ದ ಬೆಳದಿಂಗಳ ಕೂಟ ಕಾರ್ಯಕ್ರಮ ಎಲ್ಲೆಡೆ ಹೆಸರುವಾಸಿಯಾಗಿತ್ತು. ಪರಿಸ್ಥಿತಿ ಎಷ್ಟೇ ಗಂಭೀರವಾಗಿದ್ದರು ತಿಳಿಹಾಸ್ಯ ಮತ್ತು ಚುಟುಕುಗಳಿಂದ ಹಾಸ್ಯಮಯಗೊಳಿಸಿ ಸೌಹಾರ್ದ ವಾತಾವರಣವನ್ನು ಮೂಡಿಸುತ್ತಿದ್ದರು. ಖ್ಯಾತ ಸಾಹಿತಿಗಳು, ಕಲಾವಿದರುಗಳೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿದ್ದರು. ಅವರುಗಳ ನಡುವಿನ ಒಡನಾಟದ ಅನೇಕ ರಸಮಯ ಸನ್ನಿವೇಶಗಳನ್ನು ಹಂಚಿಕೊಳ್ಳುತ್ತಿದ್ದರು. ಅವರು ಬರೆದ ಚುಟುಕಗಳು, ಕವಿತೆಗಳು ಎಲ್ಲರನ್ನು ಬೆರಗುಗೊಳಿಸುತ್ತಿದ್ದವು. ವೈಚಾರಿಕಪ್ರಜ್ಞೆಯುಳ್ಳವರಾಗಿದ್ದರೂ ಅದರ ನೆಲೆಯಲ್ಲೇ ಭಗವಂತನ ವೈಶಾಲ್ಯತೆಯನ್ನು ಕಂಡುಕೊಂಡಿದ್ದರು ಎಂದು ತಿಳಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಗೊ.ರು. ಚನ್ನಬಸಪ್ಪನವರು ಸಾಹಿತ್ಯ ಕ್ಷೇತ್ರದಲ್ಲಿ ಶಿವಶಂಕರ್ ಸಾಕಷ್ಟು ಕೃಷಿ ಮಾಡಿದ್ದವರು. 'ಹನಿಗವನದ ಭೀಷ್ಮ' ಎಂದೇ ಅವರನ್ನು ಗುರುತಿಸಲಾಗುತ್ತಿತ್ತು. ಹತ್ತಾರು ವರ್ಷಗಳಿಂದ ಅವರು ನನ್ನ ಜೊತೆ ಪರಿಷತ್ತಿನ ಬೆಳವಣಿಗೆಗೆ ಸಾಕಷ್ಟು ಶ್ರಮಿಸಿದ್ದರು. ಸಂಘಜೀವಿಯಾಗಿದ್ದವರು. ಸಜ್ಜನಿಕೆಯ ವ್ಯಕ್ತಿತ್ವವುಳ್ಳವರಾಗಿದ್ದರು. ತಂದೆ-ತಾಯಿಗಳ ಬಗ್ಗೆ ಅಪಾರವಾದ ಗೌರವವನ್ನು ಹೊಂದಿದ್ದರು ಎಂದು ಹೇಳಿದರು.

ಸಾಹಿತಿಗಳಾದ ಡಾ. ಚಂದ್ರಶೇಖರ ಕಂಬಾರರವರು ಮಾತನಾಡಿ ಅಪರೂಪದ ವ್ಯಕ್ತಿತ್ವ ಮತ್ತು ಅಪರೂಪದ ಸ್ವಭಾವವನ್ನು ಶಿವಶಂಕರ್ ಹೊಂದಿದ್ದರು. ಭಿನ್ನವಾದ ಆಲೋಚನೆ, ಗ್ರಹಿಕೆ ಮತ್ತು ದೃಷ್ಟಿಕೋನ ಅವರಲ್ಲಿತ್ತು. ಒಳ್ಳೆಯದಕ್ಕಾಗಿಯೇ ಬಾಳಿದವರು. ಅವರ ಚುಟುಕಗಳು ಕನ್ನಡದ ಎಲ್ಲ ದಿನಪತ್ರಿಕೆಗಳಲ್ಲು ಪ್ರಕಟವಾಗುತ್ತಿದ್ದವು ಎಂದರು.

ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಶಿವಶಂಕರ್ ಸ್ನೇಹಮಯ ವ್ಯಕ್ತಿತ್ವ ಹೊಂದಿದ್ದರು. ಬಸವಣ್ಣನವರ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿ ಕೊಂಡಿದ್ದರು. ತಮ್ಮ ಊರಿನ ಬಗ್ಗೆ ಅಪಾರ ಅಭಿಮಾನ ಹೊಂದಿದ್ದರು. ಸಾಮಾನ್ಯ ಕಾರ್ಯಕರ್ತನಂತೆ ಅವರು ಕೆಲಸ ಮಾಡುತ್ತಿದ್ದರು. ಮಠಮಾನ್ಯಗಳ ಬಗ್ಗೆ ಅಪಾರ ಭಕ್ತಿ-ಗೌರವಗಳನ್ನು ಹೊಂದಿದ್ದರು ಎಂದರು.

ಮಾಜಿ ಸಚಿವರಾದ ಡಾ. ಲೀಲಾದೇವಿ ಆರ್. ಪ್ರಸಾದ್, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್, ಕಲಾವಿದರಾದ ಶ್ರೀಮತಿ ಅಪರ್ಣ, ಬೆಂಗಳೂರು ಆಕಾಶವಾಣಿ ನಿರ್ದೇಶಕರಾದ ಶ್ರೀಮತಿ ನಿರ್ಮಲ ಎಲಿಗಾರ್ ಮತ್ತು ಶ್ರೀಮತಿ ಶೀಲಾದೇವಿ ಮಳಿಮಠರವರುಗಳು ಮಾತನಾಡಿ ಶಿವಶಂಕರ್‌ರವರೊಂದಿಗೆ ಒಡನಾಟದ ನೆನಪುಗಳನ್ನು ಹಂಚಿಕೊಂಡರು. ಶ್ರೀ ಸಿದ್ಧರಾಮ ಕೇಶ್ವಾಪುರ ಹಾಗೂ ಶ್ರೀ ಮೃತ್ಯುಂಜಯ ದೊಡ್ಡವಾಡರವರುಗಳು ತತ್ತ್ವಪದಗಳನ್ನು ಹಾಡಿದರು. ಶ್ರೀ ಕೆ.ವಿ. ನಾಗರಾಜಮೂರ್ತಿ ಕಾರ್ಯಕ್ರಮ ನಿರ್ವಹಿಸಿದರು.

**ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಕ್ಸಿಜಿನೇಟೆಡ್ ಬೆಡ್ ಹೆಚ್ಚಿಸಲು ಕ್ರಮ**

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಕ್ಸಿಜಿನೇಟೆಡ್ ಬೆಡ್‌ಗಳನ್ನು ಹೆಚ್ಚಿಸಲಾಗುವುದು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಮೇ 10ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ನಡೆದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಕ್ಸಿಜಿನೇಟೆಡ್ ಬೆಡ್‌ಗಳನ್ನು ಹೆಚ್ಚಿಸುವ ಕುರಿತು ನಡೆದ ಸಭೆಯಲ್ಲಿ ಆಶೀರ್ವದಿಸುತ್ತಾ ಕರೋನ ನಿರ್ವಹಣೆಗೆ ಆಕ್ಸಿಜನ್ ಬೆಡ್‌ಗಳನ್ನು ಹೆಚ್ಚಿಸುವುದರಿಂದ ಎಲ್ಲವೂ ಸರಿಹೋಗುವುದಿಲ್ಲ. ಜನರು ಎಚ್ಚರಿಕೆಯಿಂದ ಇರಬೇಕು. ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಜೀವ ಇದ್ದರೆ ಜೀವನ ಎಂಬುದನ್ನು ಜನರು ತಿಳಿದುಕೊಳ್ಳಬೇಕು. ಕೋವಿಡ್ ಸಮಯದಲ್ಲಿ ಯಾರೂ ಉದಾಸೀನತೆ ತೋರಬಾರದು. ತರಕಾರಿ, ದಿನಸಿ ಖರೀದಿಸುವ ನೆಪದಲ್ಲಿ ಜನ ಗುಂಪು ಸೇರಬಾರದು. ಆರೋಗ್ಯ ಕೆಟ್ಟರೆ ಸರ್ಕಾರ ಇದೆ, ಆಸ್ಪತ್ರೆ ಇದೆ ಎಂಬ ಉಡಾಫೆ ಯಾರಿಗೂ ಬೇಡ. ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿದೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು ಎಂದು ಹೇಳಿದರು.

ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಜೆಎಸ್‌ಎಸ್ ಆಸ್ಪತ್ರೆಯಿಂದ ಈಗಾಗಲೇ 100 ಆಕ್ಸಿಜನ್ ಬೆಡ್‌ಗಳನ್ನು ನೀಡಲಾಗಿದೆ. ಹೆಚ್ಚುವರಿಯಾಗಿ 300 ಬೆಡ್‌ಗಳನ್ನು ನೀಡಲು ಒಪ್ಪಿದ್ದಾರೆ. ಸರ್ಕಾರದಿಂದ ಹಾಸಿಗೆಗೆ ಬೇಕಾದ ಆಕ್ಸಿಜನ್ ಪೂರೈಸಲು ಸರ್ಕಾರದಿಂದ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಹಲವಾರು ಸಂಕಷ್ಟದ ಸಂದರ್ಭದಲ್ಲಿ ಸುತ್ತೂರು ಶ್ರೀಮಠ ಸರ್ಕಾರಕ್ಕೆ ನೆರವು ನೀಡಿದೆ. ಈ ಭಾಗದ ಜನರಿಗೆ ಒಳ್ಳೆಯದನ್ನೇ ಮಾಡುತ್ತಾ ಬಂದಿದೆ ಎಂದು ತಿಳಿಸಿದರು.

ಸಂಸದರಾದ ಶ್ರೀ ಪ್ರತಾಪ ಸಿಂಹರವರು ಕೋವಿಡ್‌ನಿಂದಾಗಿ ನೂರಾರು ಜನ ಆಸ್ಪತ್ರೆಗೆ ಧಾವಿಸುತ್ತಿದ್ದಾರೆ. ಎಲ್ಲರಿಗೂ ಬೆಡ್ ಸಿಗುತ್ತಿಲ್ಲ. ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಅಗತ್ಯ ಮೂಲಸೌಕರ್ಯಗಳು ಸಿದ್ಧವಿರುವ ಕಾರಣ 300 ಹಾಸಿಗೆಗಳನ್ನು ಹೆಚ್ಚುವರಿಯಾಗಿ ಒದಗಿಸಬೇಕೆಂದು ಮನವಿ ಮಾಡಿದರು.

ಶಾಸಕರಾದ ಶ್ರೀ ಎಲ್. ನಾಗೇಂದ್ರ ಸಂಕಷ್ಟ ಬಂದಾಗ ನಮಗೆ ಮೊದಲು ನೆನಪಾಗುವುದೇ ಸುತ್ತೂರು ಮಠ. ಇದೀಗ ಕರೋನ ಸಂಕಷ್ಟ ನಮ್ಮನ್ನು ಕಾಡುತ್ತಿದೆ. ಪ್ರತಿ 10 ನಿಮಿಷಕ್ಕೊಮ್ಮೆ ಬೆಡ್ ಕೇಳಿಕೊಂಡು ಕರೆ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಜೆಎಸ್‌ಎಸ್ ಆಸ್ಪತ್ರೆ ನೆರವಾಗಬೇಕೆಂದು ಕೋರಿಕೊಂಡರು.

ಸಭೆಯಲ್ಲಿ ಮುಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಆರ್. ರಘು ಕೌಟಿಲ್ಯ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಂ.ಎನ್. ನಂದೀಶ್ ಹಂಚೆ, ಅರಣ್ಯ ಮತ್ತು ವಸತಿ ವಿಹಾರಧಾಮಗಳ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ. ಅಪ್ಪಣ್ಣ, ಅಪರ ಜಿಲ್ಲಾಧಿಕಾರಿ ಶ್ರೀ ಬಿ.ಎಸ್. ಮಂಜುನಾಥಸ್ವಾಮಿ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಆಸ್ಪತ್ರೆಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಆತ್ಮಸ್ಥೈರ್ಯದಿಂದ ವಿಷಮ ಪರಿಸ್ಥಿತಿ ಎದುರಿಸಲು ಆಚಾರ್ಯ ಮಹಾಸಭಾ ಕರೆ**

ಸರ್ಕಾರಗಳು, ಸಂಘಸಂಸ್ಥೆಗಳು, ವೈದ್ಯರುಗಳು ಸಂಬಂಧಪಟ್ಟ ಎಲ್ಲರೂ ಯುದ್ಧೋಪಾದಿಯಲ್ಲಿ ಪರಿಹಾರಕ್ಕಾಗಿ ಮುಂದಾಗಿದ್ದರೂ ಕರೋನಾ ಸೋಂಕು ದೇಶದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಬಗ್ಗೆ ಆಚಾರ್ಯ ಮಹಾಸಭಾದ ಸಂತರೆಲ್ಲರೂ ಆತಂಕ ವ್ಯಕ್ತಪಡಿಸಿದ್ದಾರೆ. ಮೇ 11ರಂದು ಡಿಜಿಟಲ್ ಮಾಧ್ಯಮದ ಮೂಲಕ ಏರ್ಪಡಿಸಲಾಗಿದ್ದ ಆಚಾರ್ಯ ಮಹಾಸಭಾದಲ್ಲಿ ಭಾಗವಹಿಸಿದ್ದ ಪೂಜ್ಯರುಗಳು ಹಿಂದಿಗಿಂತಲೂ ಇಂದು ಈ ಸೋಂಕು ವ್ಯಾಪಕವಾಗಿ ಹರಡುತ್ತಿದೆ. ಎಲ್ಲರೂ ಸೋಂಕಿತರಿಗೆ ಉತ್ತಮ ಚಿಕಿತ್ಸೆ ನೀಡಲು ಮುಂದೆ ಬರಬೇಕಿದೆ. ಈ ಸೋಂಕು ಹರಡದಂತೆ ಸರ್ಕಾರ ನೀಡಿರುವ ಮುನ್ನೆಚ್ಚರಿಕೆ ಅಂಶಗಳನ್ನು ಪಾಲಿಸುವುದು ಅಗತ್ಯವಿದೆ. ಈ ಸೋಂಕಿನ ದುಷ್ಪರಿಣಾಮಗಳು ಕಣ್ಣೆದುರಿಗೇ ಕಾಣುತ್ತಿರುವಾಗ ಈ ಕಷ್ಟದ ಸಂದರ್ಭದಲ್ಲಿ ನಾಗರಿಕರು ಉದಾಸೀನ ಭಾವನೆ ತಾಳದೆ ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು, ಸ್ಯಾನಿಟೈಸ್ ಮಾಡಿಕೊಳ್ಳುವುದು ಇತ್ಯಾದಿಗಳನ್ನು ಕಡ್ಡಾಯವಾಗಿ ಪಾಲಿಸಬೇಕಿದೆ. ತಜ್ಞರ ಮಾರ್ಗದರ್ಶನದಲ್ಲಿ ಪ್ರಾರ್ಥನೆ, ಧ್ಯಾನ, ಯೋಗ, ಪ್ರಾಣಾಯಾಮಗಳನ್ನು ಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಅಗತ್ಯ. ಮಾಧ್ಯಮಗಳಲ್ಲಿ ಸಾವು–ನೋವುಗಳ ಬಗೆಗೆ ಬಿತ್ತರವಾಗುತ್ತಿರುವ ವರದಿಗಳು ಜನರನ್ನು ಮತ್ತಷ್ಟು ಭಯಭೀತಗೊಳಿಸುತ್ತಿವೆ. ಮಾಧ್ಯಮಗಳು ಸಾಧ್ಯವಾದಷ್ಟು ಸಕಾರಾತ್ಮಕವಾಗಿ ಸಂಗತಿಗಳನ್ನು ಬಿತ್ತರಿಸಿ ಜನರಲ್ಲಿ ಶಾಂತಿ, ಸಮಾಧಾನ, ಧೈರ್ಯ, ವಿಶ್ವಾಸಗಳು ಮೂಡುವಂತಹ ಕಾರ್ಯಕ್ರಮಗಳನ್ನು ಹೆಚ್ಚೆಚ್ಚು ಪ್ರಸಾರ ಮಾಡಿದರೆ ಅನುಕೂಲವಾಗುತ್ತದೆ. ಭಯ–ಭೀತಿ ಇವುಗಳು ಸೋಂಕಿನ ಉಲ್ಬಣಕ್ಕೆ ಪರೋಕ್ಷವಾಗಿ ಕಾರಣವಾಗಲಿದೆ. ಜೀವನದಲ್ಲಿ ಸಂತೋಷದಿಂದ ಇರಬೇಕು. ಜನರೂ ಸಹ ಸಕಾರಾತ್ಮಕ ಚಿಂತನೆಗಳಲ್ಲಿ ತೊಡಗಿಸಿಕೊಂಡು ಆತ್ಮಸ್ಥೈರ್ಯ

ಹೆಚ್ಚಿಸಿಕೊಳ್ಳಬೇಕು. ಪ್ರಸ್ತುತ ಸಂದರ್ಭದಲ್ಲಿ ಆಹಾರ ಪದ್ಧತಿಯು ಕೂಡ ಮಹತ್ವದ ಪಾತ್ರವನ್ನು ವಹಿಸುತ್ತದೆ. ಕಷ್ಟಕಾಲದಲ್ಲಿ ಒಬ್ಬರಿಗೊಬ್ಬರು ನೆರವಾಗಬೇಕು. ದೇಶದ ಸಮಸ್ತ ಜನತೆ ಆತಂಕಕ್ಕೆ ಒಳಗಾಗದೆ ಧೈರ್ಯದಿಂದ ಈ ಸಮಸ್ಯೆಯನ್ನು ಎದುರಿಸಬೇಕೆಂದು ಕರೆ ನೀಡಿದೆ.

ಸಭೆಯಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಆದಿಚುಂಚನಗಿರಿ ಶ್ರೀಗಳು, ಶ್ರೀ ಸ್ವಾಮಿ ಅವದೇಶಾನಂದ ಗಿರಿಯವರು, ಶ್ರೀ ಬಾಬಾ ರಾಮದೇವ್‌ರವರು, ಶ್ರೀ ಪರಮಾತ್ಮನಂದ ಸರಸ್ವತಿಯವರು, ಆಚಾರ್ಯ ಕೃಷ್ಣಮಣಿ ಮಹಾರಾಜ್‌ರವರು, ಶ್ರೀ ಗೀತಮನಿಷಿ ಸ್ವಾಮೀಜಿಯವರು, ಶ್ರೀ ಮಾಧ್ವಪ್ರಿಯ ದಾಸಜಿ ಸ್ವಾಮಿಗಳು, ಶಾಂತಿಕುಂಜ್‌ನ ಶ್ರೀ ಪ್ರಣವ್ ಪಾಂಡೆಜೀಯವರು, ಭಾಯ್ ಶ್ರೀ ರಮೇಶ್ ಭಾಯ್ ಓಝಾಜೀಯವರು ಹಾಗೂ ಶ್ರೀ ಮಿಲಮ್ ಬೊಮ್ಮಾಪುರಂ ಅಧೀನಂ ಶ್ರೀಗಳು ಭಾಗವಹಿಸಿದ್ದರು.

**ಸಮಾನತೆಯನ್ನು ಸಾರಿದ ಬಸವಣ್ಣನವರು**

ಸಮಾಜದಲ್ಲಿದ್ದ ಮೇಲು–ಕೀಳು, ಬಡವ–ಬಲ್ಲಿದ ಎಂಬ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯ ತತ್ತ್ವದ ಆಧಾರದ ಮೇಲೆ ಬಸವಣ್ಣನವರು ಸಮಾಜವನ್ನು ಕಟ್ಟಿದರು ಎಂದು ತಮ್ಮಡಿಹಳ್ಳಿ ಶ್ರೀ ವಿರಕ್ತಮಠದ ಡಾ. ಶ್ರೀ ಅಭಿನವ ಮಲ್ಲಿಕಾರ್ಜುನ ಸ್ವಾಮಿಗಳು ಮೈಸೂರು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಶಾಖಾಮಠದಲ್ಲಿ ಮೇ 14 ಶುಕ್ರವಾರ ಅಕ್ಷಯ ತೃತೀಯ ದಿನದಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು. ಕುವೆಂಪುರವರು ಬಸವಣ್ಣನವರ ಕುರಿತಾಗಿ ಕಾರ್ತೀಕದ ಕಗ್ಗತ್ತಲಲಿ ಆಕಾಶದೀಪವಾಗಿ ನೀ ಬಂದೆ ಎಂಬ ಮಾತು ಎಂದೆಂದಿಗೂ ಪ್ರಸ್ತುತವಾದುದು. ಬಸವಣ್ಣನವರ ಭಕ್ತಿಪರಾಕಾಷ್ಠೆ ಅಮೂಲ್ಯವಾದುದು. ಅವರ ವಚನಗಳನ್ನು ಎಲ್ಲರೂ ಪಾಲಿಸಬೇಕು. 12ನೇ ಶತಮಾನದಲ್ಲಿ ಅವರು ಹಾಕಿಕೊಟ್ಟ ಕಾಯಕ ದಾಸೋಹದ ಪರಿಕಲ್ಪನೆ ಇಂದಿನ 21ನೇ ಶತಮಾನದವರೆಗೂ ಉಳಿದುಕೊಂಡು ಬಂದಿದೆ. ಲಕ್ಷಾಂತರ ಮಕ್ಕಳಿಗೆ ಅರಿವು, ಆಚಾರ, ಅನ್ನ ದಾಸೋಹ ಮಾಡುತ್ತಿರುವ ಶ್ರೀ ಸುತ್ತೂರು ಮಠದ ಕೊಡುಗೆ ಬಹಳ ಮಹತ್ವದ್ದು. ಕರೋನಾ ಹಾವಳಿಯಿಂದ ಎಲ್ಲರೂ ತತ್ತರಿಸಿ ಹೋಗಿದ್ದೇವೆ. ಇದು ಆದಷ್ಟು ಬೇಗ ಕೊನೆಗೊಂಡು ನೆಮ್ಮದಿ ನೆಲೆಸಲಿ ಎಂದು ಹೇಳಿದರು.

ಶ್ರೀ ಸುತ್ತೂರು ಮಠದ ಶ್ರೀ ಜಯರಾಜೇಂದ್ರರು ಒಂದು ಕಲ್ಲು ಮೂರ್ತಿಯಾಗಿ ಪೂಜಿಸಲ್ಪಡಬೇಕಾದರೆ ಸಾಕಷ್ಟು ಉಳಿಪೆಟ್ಟನ್ನು ತಿಂದಿರುತ್ತದೆ. ಹಾಗೇ ಬಸವಣ್ಣನವರು ಜೀವನದಲ್ಲಿ ಸಾಕಷ್ಟು ಸವಾಲುಗಳನ್ನು ಎದುರಿಸಿ, ಅವುಗಳನ್ನು ಮೆಟ್ಟಿ ನಿಂತರು.

ಅವರ ವ್ಯಕ್ತಿತ್ವ ಅತ್ಯಂತ ಉನ್ನತವಾದದ್ದು. ಆದರ್ಶ ಸಮಾಜ ನಿರ್ಮಾಣದ ಕನಸು ಕಂಡವರು. ಪ್ರಾಣಿದಯೆ, ಕರುಣೆ, ದಾನಗುಣ ಸರ್ವರನ್ನು ತನ್ನಂತೆ ಕಾಣುವ ವಿಶಾಲ ಮನೋಧರ್ಮವನ್ನು ಹೊಂದಿದ್ದವರು. ಮಾನವ ಜನ್ಮ ಅತ್ಯಂತ ಪವಿತ್ರವಾದುದು, ಆಧ್ಯಾತ್ಮಿಕತೆಯ ಮೂಲಕ ಅದನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಹೇಳಿದರು.

ಶ್ರೀಮಠದ ಸೇವಾ ಸಿಬ್ಬಂದಿಗಳಾದ ಶ್ರೀ ಬಿ.ಎಂ. ಕುಮಾರ್ ಮತ್ತು ಶ್ರೀ ಗಿರೀಶ್‌ರವರು ಬಸವಣ್ಣನವರ ತತ್ತ್ವಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ನಡೆದರೆ ಈ ಆಚರಣೆಗೆ ಮಹತ್ವ ಬರುತ್ತದೆ. ಬಸವಣ್ಣನವರು ವಚನಗಳ ಮೂಲಕ ಸಾಮಾಜಿಕ ಅರಿವು ಹರಡಿದರು, ಲಿಂಗ ಮತ್ತು ಸಾಮಾಜಿಕ ತಾರತಮ್ಯ, ಮೂಢನಂಬಿಕೆಗಳನ್ನು ನಿರಾಕರಿಸಿದರು. ಕೆಲಸ ಮಾಡಿ ಜೀವನ ನಡೆಸಬೇಕು. ಕೆಲಸದಲ್ಲಿ ಮೇಲು–ಕೀಳೆಂಬುದಿಲ್ಲ. ಪುರುಷನಂತೆ ಮಹಿಳೆಗೂ ತನ್ನ ಜೀವನವನ್ನು ರೂಪಿಸಿಕೊಳ್ಳುವ ಅವಕಾಶವಿದೆ ಎಂಬ ಬಸವಣ್ಣನವರ ಮಾತುಗಳನ್ನು ಮೆಲುಕುಹಾಕಿದರು.

ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ವಿಶೇಷ ಪೂಜೆ, ಮಹಾಮಂಗಳಾರತಿ ಹಾಗೂ ಪುಷ್ಪಾಂಜಲಿ ನಂತರ ಪ್ರಾರಂಭದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು. ಶ್ರೀ ಕೆ.ಎಸ್. ಶಿವಪ್ರಸಾದ್ ಸ್ವಾಗತಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ವಂದಿಸಿದರು. ಶ್ರೀ ಎಂ.ಎಸ್. ನಂಜುಂಡಸ್ವಾಮಿ ನಿರೂಪಿಸಿದರು. ಶ್ರೀಮಠದ ಸಾಧಕರು ಮತ್ತು ಸೇವಾ ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಬಸವಣ್ಣನವರು ನೊಂದವರ ಉದ್ಧಾರಕ್ಕೆ ದುಡಿದವರು**

ಬಸವಣ್ಣನವರು ನೊಂದವರು, ದೀನರು ಹಾಗೂ ದಲಿತರ ಏಳಿಗೆಗಾಗಿ ಬದುಕನ್ನು ಮುಡಿಪಾಗಿಟ್ಟವರು ಎಂದು ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮೇ 14 ಶುಕ್ರವಾರ ಅಕ್ಷಯ ತೃತೀಯ ದಿನದಂದು ಬೆಂಗಳೂರು ಬಸವ ವೇದಿಕೆ ಡಿಜಿಟಲ್ ಮಾಧ್ಯಮದ ಮೂಲಕ ಏರ್ಪಡಿಸಿದ್ದ ಬಸವ ಜಯಂತಿ ಸಮಾರಂಭ ಮತ್ತು ಬಸವಣ್ಣನವರ ವಿಚಾರಧಾರೆ –ಒಂದು ಜಾಗತಿಕ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಕಾಯಕವೇ ಕೈಲಾಸ ಎಂದು ದುಡಿದು ಬದುಕುವ ಪಥದಲ್ಲಿ ಮುನ್ನಡೆಸಿದವರು. ಜಾತಿರಹಿತ ಸಮಾಜ ನಿರ್ಮಾಣವನ್ನು ಸಾಕಾರಗೊಳಿಸಿದವರು. ಸಮ ಸಮಾಜದ ನಿರ್ಮಾಣಕ್ಕೆ 12ನೇ ಶತಮಾನದಲ್ಲೇ ಬುನಾದಿ ಹಾಕಿದರು. ಕಾಯಕ ಮತ್ತು ದಾಸೋಹ ತತ್ತ್ವಗಳ ಮೂಲಕ ಮನುಕುಲದ ಮಹತ್ವವನ್ನು ಎತ್ತಿ ಹಿಡಿದರು. ಸರಳ ಭಾಷೆಯಲ್ಲಿ ನೀತಿಗಳನ್ನು ತಿಳಿಸುವ ವಚನಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯಕ್ಕೆ ಮೆರಗು ತಂದರು. ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸುಧಾರಣೆಗಳನ್ನು ಕಂಡುಕೊಳ್ಳಲು ಬಸವಾದಿ ಶರಣರ ತತ್ತ್ವಗಳು ಸಾರ್ವಕಾಲಿಕವಾದವು ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳು ಆಶೀರ್ವಚನ ನೀಡುತ್ತಾ ಬಸವಣ್ಣನವರು ಇಡೀ ಮನುಕುಲಕ್ಕೆ ಸಾರ್ವತ್ರಿಕವಾಗಿ ಅನ್ವಯವಾಗುವಂಥ ಮೌಲಿಕ ಸಂದೇಶಗಳನ್ನು ಕೊಟ್ಟಿದ್ದಾರೆ. ಬಸವಣ್ಣನವರು ಇಂದಿಗೂ ಪ್ರಸ್ತುತವಾಗಿರಲು ಕಾರಣ ಅವರ ಅಂತರಂಗ ಮತ್ತು ಬಹಿರಂಗಗಳಲ್ಲಿ ಸಾಮ್ಯತೆ ಇದ್ದದ್ದು. ಬಸವಣ್ಣನವರು ಕಾಲಜ್ಞಾನಿಗಳಂತೆ ಇದ್ದವರು. ಅವರು ಅಂದು ಮಾಡಿದ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಯ ಕಾರ್ಯಗಳು ಇಂದು ಫಲ ನೀಡುತ್ತಿವೆ. ಅವರ ಸಂದೇಶಗಳು ಇಂದು ಜಗತ್ತಿನ ಮೂಲೆಮೂಲೆಗೂ ತಲುಪುತ್ತಿವೆ. ಬಸವಣ್ಣನವರು ಪರಿಶುದ್ಧವಾದ ಜೀವನ ಸಾಗಿಸಿದವರು ಮತ್ತು ಅದಕ್ಕೆ ಮಹತ್ವಪೂರ್ಣವಾದ ಅರ್ಥವನ್ನು ನೀಡಿದವರು. 'ಕಾರ್ತೀಕದ ಕಗ್ಗತ್ತಲಲಿ ಆಕಾಶದೀಪವಾಗಿ ನೀ ಬಂದೆ, ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ ಎಂಟು ಶತಮಾನಗಳ ಹಿಂದೆ' ಎಂದು ರಾಷ್ಟ್ರಕವಿ ಕುವೆಂಪುರವರು ಹೇಳಿದ ಮಾತು ಎಂದೆಂದಿಗೂ ಪ್ರಸ್ತುತವಾದುದು. ಬಸವಣ್ಣನವರು ನಡೆ–ನುಡಿಯಲ್ಲಿ ಏಕತೆಯನ್ನು ಕಂಡುಕೊಂಡವರು. ಸುಧಾರಣೆಗಳನ್ನು ಸಹಿಸದವರ ವಿರೋಧದ ಸಂದರ್ಭಗಳಲ್ಲಿಯೂ ಎಂದೂ ಅವರು ಸಂಯಮವನ್ನು ಕಳೆದುಕೊಳ್ಳಲಿಲ್ಲ. ಉತ್ತಮ ಸಂಘಟಕರಾಗಿ ಇಡೀ ಸಮುದಾಯವನ್ನು ತಮ್ಮತ್ತ ಸೆಳೆದುಕೊಳ್ಳುವ ಚುಂಬಕಶಕ್ತಿಯಾಗಿದ್ದರು ಎಂದು ತಿಳಿಸಿದರು.

ಭಾಲ್ಕಿಯ ಶ್ರೀ ಹಿರೇಮಠ ಸಂಸ್ಥಾನದ ಡಾ. ಶ್ರೀ ಬಸವಲಿಂಗ ಪಟ್ಟದ್ದೇವರು ಎಂತಹ ಸಂಕಷ್ಟದ ಸಂದರ್ಭ ಎದುರಾದರು ಅಂಜದೆ, ಅಳುಕದೆ ಮುನ್ನಡೆಯಬೇಕು ಎಂದು ಬಸವಣ್ಣನವರು ಆತ್ಮವಿಶ್ವಾಸವನ್ನು ತುಂಬುತ್ತಾರೆ. ಶರಣರಿಗೆ ಮರಣವೇ ಮಹಾನವಮಿ. ನಾಳೆ ಬರುವುದು ನಮಗೀಗಲೇ ಬರಲಿ ಎಂದವರು ಶರಣರು. ಬಸವಣ್ಣನವರು ಅನುಭವ ಮಂಟಪದ ಮೂಲಕ ಅನೇಕ ಕಾರ್ಯಗಳನ್ನು ಮಾಡಿದರು. ಸ್ಥಾವರಕ್ಕೆ ಮಹತ್ವ ಕೊಡದೇ ಜಂಗಮಕ್ಕೆ ಮಹತ್ವ ಕೊಟ್ಟರು. ಬಡವರ ಕಣ್ಣೀರನ್ನು ಒರೆಸುವ ಕೆಲಸವನ್ನು ಮಾಡಿದರು ಎಂದು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಗೊ.ರು. ಚನ್ನಬಸಪ್ಪನವರು ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪ ಚಿಂತನೆಯ ಮಂಟಪವಾಗಿತ್ತು. ಇಂದಿನ ಬಸವಕಲ್ಯಾಣದಲ್ಲಿ ನೂತನ ಅನುಭವ ಮಂಟಪವನ್ನು ಸ್ಥಾಪಿಸುತ್ತಿರುವುದು ಸ್ವಾಗತಾರ್ಹ. ಇದನ್ನು ರಾಜ್ಯದ ಪ್ರತಿಷ್ಠಿತ ಮತ್ತು ಪವಿತ್ರವಾದ ಕಾರ್ಯ ಎಂದು ಪರಿಗಣಿಸಬೇಕು. ಯೋಜಿತ ಅನುಭವ ಮಂಟಪ ಜಗತ್ತಿನ ಮೂಲೆಮೂಲೆಗಳಿಂದ ಬರುವ ಅಧ್ಯಯನಕಾರರಿಗೆ ಅದು ವೇದಿಕೆಯಾಗಬೇಕು ಮತ್ತು ಜಾಗತಿಕ ಪ್ರವಾಸಿ ಕೇಂದ್ರವೂ ಆಗಬೇಕು ಎಂದು ತಿಳಿಸಿದರು.

ಬಸವ ವೇದಿಕೆಯ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿ ಬಸವ ವೇದಿಕೆ ಪ್ರಾರಂಭಿಸಿದಂದಿನಿಂದ ನಡೆದುಬಂದ ಹಾದಿಯನ್ನು

ವಿವರಿಸಿ, ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಮೊದಲು ಧ್ವನಿ ಎತ್ತಿದ ದಾರ್ಶನಿಕರು ಬಸವಣ್ಣನವರು. ಸತ್ಯವ ನುಡಿಯುವುದೇ ದೇವಲೋಕ, ಮಿಥ್ಯವ ನುಡಿಯುವುದೇ ಮರ್ತ್ಯಲೋಕವೆಂದರು. ಆಚಾರವೇ ಸ್ವರ್ಗ ಅನಾಚಾರವೇ ನರಕ ಇವೇ ಮೊದಲಾದ ಸಾರ್ವತ್ರಿಕ ಸಂಗತಿಗಳನ್ನು ಬಸವೇಶ್ವರರು ಜಗತ್ತಿಗೆ ಸಾರಿದರು ಎಂದು ತಿಳಿಸಿದರು. ಕಾರ್ಯಕ್ರಮವನ್ನು ಅವರೇ ನಿರೂಪಿಸಿದರು.

ಸಾಹಿತಿಗಳಾದ ಶ್ರೀ ರಂಜಾನ್ ದರ್ಗಾ, ಶರಣಚಿಂತಕರಾದ ಡಾ. ಗಂಗಾಂಬಿಕೆ ಹಾಗೂ ಆಕಾಶವಾಣಿ ನಿರ್ದೇಶಕರಾದ ಡಾ. ನಿರ್ಮಲ ಸಿ. ಎಲಿಗಾರ್‌ರವರುಗಳು ಮಾತನಾಡಿ ಬಸವ ಧರ್ಮಕ್ಕೆ ಯಾವುದೇ ರೇಖೆಗಳಿಲ್ಲ. ಅದು ಬಯಲ ಧರ್ಮ ಮತ್ತು ಮಾನವ ಧರ್ಮ. ಅವರ ಸಪ್ತಶೀಲಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಬಸವಣ್ಣನವರು ಸಕಲ ಜೀವಾತ್ಮರಿಗೂ ಲೇಸನೆ ಬಯಸಿದವರು. ದಯವೇ ಧರ್ಮದ ಮೂಲ ಎಂದು ಸಾರಿದವರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ವಿಶ್ರಾಂತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರು ವಿಚಾರ–ಸಂವಾದ ಪದಗಳ ನಡುವಿನ ವಿವರಣೆಯನ್ನು ಅರ್ಥಮಾಡಿಕೊಂಡು ಮುನ್ನಡೆಯಬೇಕು. ಸಂವಾದಗಳು ಅರ್ಥಪೂರ್ಣವಾಗಿರಬೇಕು ಎಂದು ಹೇಳಿದರು. ರಮಣಶ್ರೀ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಎಸ್. ಷಡಕ್ಷರಿಯವರು ಸ್ವಾಗತಿಸಿದರು. ಶ್ರೀಮತಿ ಸಂಗೀತ ಕಟ್ಟಿಯವರು ವಚನ ಗಾಯನ ಮಾಡಿದರು. ಶ್ರೀ ಕೆ.ವಿ. ನಾಗರಾಜಮೂರ್ತಿ ವಂದಿಸಿದರು.

## ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಮ್ಲಜನಕ ಸಂಗ್ರಹಣಾ ಸೌಲಭ್ಯದ ವಿಸ್ತರಣೆ ಮತ್ತು ಆಮ್ಲಜನಕ ಉತ್ಪಾದನಾ ಘಟಕದ ಸ್ಥಾಪನೆ

ಮೇ 17ರಂದು ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ನಡೆದ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಮ್ಲಜನಕ ಸಂಗ್ರಹಣ ಸೌಲಭ್ಯದ ವಿಸ್ತರಣೆ ಮತ್ತು ಆಮ್ಲಜನಕ ಉತ್ಪಾದನಾ ಘಟಕದ ಸ್ಥಾಪನೆಯ ಕುರಿತು ಸಭೆಯಲ್ಲಿ ಈ ಕೆಳಕಂಡ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಸಭೆಯಲ್ಲಿ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್, ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್, ಉಪಕುಲಪತಿಗಳಾದ ಡಾ. ಸುರೀಂದರ್ ಸಿಂಗ್, ಆಸ್ಪತ್ರೆಯ ನಿರ್ದೇಶಕರಾದ ಡಾ. (ಕರ್ನಲ್) ಎಂ. ದಯಾನಂದ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ ಮತ್ತು ಆಸ್ಪತ್ರೆಯ ವಿಭಾಗಗಳ ನಿರ್ದೇಶಕರುಗಳು, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್ ಹಾಗೂ ಆಸ್ಪತ್ರೆಯ ಅಧಿಕಾರಿಗಳು ಭಾಗವಹಿಸಿದ್ದರು.

ಕೋವಿಡ್–19 ರೋಗಿಗಳ ಸಂಖ್ಯೆಯು ದಿನೇದಿನೇ ಹೆಚ್ಚಾಗುತ್ತಿದೆ. ರೋಗಿಗಳಿಗೆ ಆಮ್ಲಜನಕ ಸಹಿತ ಹಾಸಿಗೆಗಳ ಅವಶ್ಯಕತೆಯು ತೀವ್ರವಾಗಿದೆ. ಜೆಎಸ್‌ಎಸ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಇನ್ನೂ ಹೆಚ್ಚಿನ ಆಮ್ಲಜನಕ ಸಹಿತ ಹಾಸಿಗೆಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸಂಬಂಧ ಸುಮಾರು 3 ಕೋಟಿ ರೂ.ಗಳ ವೆಚ್ಚದಲ್ಲಿ ಆಮ್ಲಜನಕ ಸಂಗ್ರಹಣ ಸೌಲಭ್ಯದ ವಿಸ್ತರಣೆ ಮತ್ತು ಆಮ್ಲಜನಕ ಉತ್ಪಾದನಾ ಘಟಕವನ್ನು ಆಸ್ಪತ್ರೆಯ ಆವರಣದಲ್ಲಿ ಸ್ಥಾಪಿಸಲಾಗುತ್ತಿದೆ.

ಜೆಎಸ್‌ಎಸ್ ಆಸ್ಪತ್ರೆಯು ಹಾಲಿ 13 KL ಆಮ್ಲಜನಕ ಸಂಗ್ರಹದ ಸೌಲಭ್ಯ ಹೊಂದಿದೆ. ದಿನೇದಿನೇ ಕೋವಿಡ್–19 ರೋಗಿಗಳ ಸಂಖ್ಯೆಯು ಹೆಚ್ಚುತ್ತಿದ್ದು, ಆಸ್ಪತ್ರೆಯಲ್ಲಿ ಇನ್ನೂ ಹೆಚ್ಚಿನ ಆಮ್ಲಜನಕ ಸಹಿತ ಹಾಸಿಗೆಗಳನ್ನು ರೋಗಿಗಳಿಗೆ ಒದಗಿಸುವ ಸಲುವಾಗಿ ಆಮ್ಲಜನಕ ಸಂಗ್ರಹ ಸೌಲಭ್ಯವನ್ನು ವಿಸ್ತರಿಸಲಾಗುತ್ತಿದೆ. ವಿಸ್ತರಣಾ ಸೌಲಭ್ಯವು ಮುಂದಿನ ಕೆಲವು ವಾರಗಳಲ್ಲಿ ರೋಗಿಗಳ ಅನುಕೂಲಕ್ಕೆ ಸಿದ್ಧವಾಗುತ್ತದೆ.

ಕೋವಿಡ್–19ರ 3ನೇ ಅಲೆಯು ಬಹಳ ತೀವ್ರವಾಗಿರುತ್ತದೆ ಎಂದು ಅನೇಕ ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಆಮ್ಲಜನಕ ಸಹಿತ ಹಾಸಿಗೆಗಳ ಅವಶ್ಯಕತೆಯು ಬಹಳ ಅಗತ್ಯವಾಗಿರುತ್ತದೆ. ಇದನ್ನು ಸಮರ್ಥವಾಗಿ ನಿರ್ವಹಿಸಲು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಆಮ್ಲಜನಕ ಉತ್ಪಾದನಾ ಘಟಕವನ್ನೂ ಸ್ಥಾಪಿಸಲಾಗುತ್ತಿದೆ. ಸದರಿ ಘಟಕವು ಪ್ರತಿ ನಿಮಿಷಕ್ಕೆ 500 ಲೀಟರ್ ಆಮ್ಲಜನಕ ಉತ್ಪಾದನಾ ಸೌಲಭ್ಯವನ್ನು ಹೊಂದಿರುತ್ತದೆ. ಘಟಕವು ಅತ್ಯಾಧುನಿಕ ತಂತ್ರಜ್ಞಾನವನ್ನು ಒಳಗೊಂಡಿದ್ದು, ಆಸ್ಪತ್ರೆಯ ಆಮ್ಲಜನಕ ಬೇಡಿಕೆಯನ್ನು ಪೂರೈಸಲು ಶಕ್ತವಾಗಿರುತ್ತದೆ.

ಸುತ್ತಮುತ್ತಲಿನ ಜಿಲ್ಲೆಗಳ ಕೋವಿಡ್–19 ರೋಗಿಗಳ ಶುಶ್ರೂಷೆಗಾಗಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಈಗಾಗಲೇ ಅತಿ ಹೆಚ್ಚಿನ ICU, ಆಮ್ಲಜನಕ ಸಹಿತ ಹಾಸಿಗೆಗಳು ಮತ್ತು ಸಾಮಾನ್ಯ ಹಾಸಿಗೆಗಳನ್ನು ಒದಗಿಸಿದೆ.

ಈ ಸಂಬಂಧ ಪ್ರಾಥಮಿಕವಾಗಿ ಹೆಚ್ಚುವರಿ AV ಕಾಯಿಲ್‌ಅನ್ನು ಈಗಿರುವ ಆಮ್ಲಜನಕ ಸಂಗ್ರಹ ಘಟಕಕ್ಕೆ ಅಳವಡಿಸಲಾಗುವುದು. ಇದರಿಂದ 60ರಿಂದ 70 ಹೆಚ್ಚು ಆಮ್ಲಜನಕ ಸಹಿತ ಹಾಸಿಗೆಗಳನ್ನು ಒದಗಿಸಬಹುದಾಗಿದೆ. ಆಮ್ಲಜನಕ ಸಂಗ್ರಹ ಸೌಲಭ್ಯದ ಸಂಪೂರ್ಣ ವಿಸ್ತರಣೆಯಾದ ನಂತರ ಹೆಚ್ಚುವರಿಯಾಗಿ ಸುಮಾರು 125 ರಿಂದ 150 ಹೆಚ್ಚಿನ ಹಾಸಿಗೆಗಳ ವ್ಯವಸ್ಥೆಯನ್ನು ಕಲ್ಪಿಸಬಹುದಾಗಿದೆ. ತದನಂತರ ಆಮ್ಲಜನಕ ಉತ್ಪಾದನಾ ಘಟಕದ ಸ್ಥಾಪನೆಯಿಂದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಇನ್ನೂ 250ರಿಂದ 300 ಹೆಚ್ಚಿನ ಆಮ್ಲಜನಕ ಸಹಿತ ಹಾಸಿಗೆಗಳನ್ನು ರೋಗಿಗಳ ಶುಶ್ರೂಷೆಗೆ ನೀಡಬಹುದಾಗಿದೆ.

ಸಭೆಯ ನಂತರ ಮಾಧ್ಯಮದ ಪ್ರತಿನಿಧಿಗಳೊಂದಿಗೆ ಮಾತನಾಡಿದ ಶ್ರೀಗಳು

ಸರ್ಕಾರ ಹಾಗೂ ಆಸ್ಪತ್ರೆಗಳು ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಬಹುದು. ಆದರೆ ಸಾರ್ವಜನಿಕರು ಈ ಸೋಂಕು ಹರಡದ ಹಾಗೆ ಎಚ್ಚರಿಕೆ ವಹಿಸಬೇಕಾದುದು ಅಗತ್ಯ. ಈ ಸೋಂಕು ಗ್ರಾಮಾಂತರ ಪ್ರದೇಶಗಳಿಗೂ ವ್ಯಾಪಿಸುತ್ತಿದೆ. ಇದು ಮತ್ತಷ್ಟು ತೀವ್ರತರವಾಗಿ ಹರಡಲು ಅವಕಾಶ ನೀಡಬಾರದು. ಎಲ್ಲರೂ ಸರ್ಕಾರದ ಸೂಚನೆಗಳಾದ ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು, ಸ್ಯಾನಿಟೈಸ್ ಮಾಡಿಕೊಳ್ಳುವುದು ಇತ್ಯಾದಿಗಳನ್ನು ಕಡ್ಡಾಯವಾಗಿ ಪಾಲಿಸಲು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಪೂಜ್ಯ ಶ್ರೀಗಳು ಆಸ್ಪತ್ರೆಯಲ್ಲಿ ದಾಖಲಾಗಿರುವ ಕೋವಿಡ್–19 ರೋಗಿಗಳ ಸಂಬಂಧಿಕರನ್ನು ಭೇಟಿಯಾಗಿ ರೋಗಿಗಳ ಯೋಗಕ್ಷೇಮ ವಿಚಾರಿಸಿ ಆತ್ಮಸ್ಥೈರ್ಯ ತುಂಬಿದರು.

**ಶ್ರೀ ಸುತ್ತೂರು ಮಠದಿಂದ ಉಚಿತ ಶಿಕ್ಷಣ**

**ಕ್ವಾರಂಟೈನ್‌ಗೆ ಸ್ಥಳಾವಕಾಶ ಹಾಗೂ ಉಚಿತ ಊಟ–ತಿಂಡಿಗೆ ವ್ಯವಸ್ಥೆ**

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿಯೂ ಕರೋನ ಸೋಂಕು ವ್ಯಾಪಕವಾಗಿ ಹರಡುತ್ತಿರುವುದರಿಂದ ಕಾಯಿಲೆಯ ಲಕ್ಷಣಗಳಿದ್ದು ಪ್ರತ್ಯೇಕವಾಗಿ ವಾಸ ಮಾಡುವವರಿಗೆ ಹಾಗೂ ಕರೋನ ಸೋಂಕಿನಿಂದ ಗುಣಮುಖರಾಗುತ್ತಿರುವವರಿಗೆ ಪ್ರತ್ಯೇಕ ವಸತಿ ಸೌಲಭ್ಯ ಕಲ್ಪಿಸಲಾಗುವುದು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಮೇ 22ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ನಡೆದ ಸಭೆಯಲ್ಲಿ ಮಾತನಾಡುತ್ತಾ ಎರಡೂ ಜಿಲ್ಲೆಗಳಲ್ಲಿ ಶ್ರೀ ಸುತ್ತೂರು ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಿಕ್ಷಣ ಸಂಸ್ಥೆಗಳ ಲಭ್ಯವಿರುವ ಸಮುದಾಯ ಭವನಗಳು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಅವಕಾಶ ಕಲ್ಪಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಸುತ್ತೂರು, ಮೈಸೂರು, ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲಗಳಲ್ಲಿ ಶಾಲಾ–ಕಾಲೇಜುಗಳಿಗೆ ಹೊಂದಿಕೊಂಡಿರುವ ವಿದ್ಯಾರ್ಥಿನಿಲಯಗಳು ಹಾಗೂ ನಂಜನಗೂಡು, ಗುಂಡ್ಲುಪೇಟೆ, ಟಿ. ನರಸೀಪುರ, ಹೆಚ್.ಡಿ. ಕೋಟೆ, ಸರಗೂರು, ಸುತ್ತೂರು ಹಾಗೂ ರಾಮಾಪುರಗಳಲ್ಲಿರುವ ಸಮುದಾಯ ಭವನಗಳನ್ನು ಬಳಸಿಕೊಳ್ಳಬಹುದು. ಎಲ್ಲಾ ಕಡೆ ಸ್ವಚ್ಛತೆ ಇತ್ಯಾದಿ ನಿರ್ವಹಣೆ ಮಾಡಿ, ಉಚಿತವಾಗಿ ಊಟ–ತಿಂಡಿ ವ್ಯವಸ್ಥೆಯನ್ನು ಶ್ರೀಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠಗಳಿಂದ ಮಾಡಲಾಗುವುದು. ಔಷಧೋಪಚಾರ ಮತ್ತು ವೈದ್ಯಕೀಯ ಉಪಚಾರಗಳನ್ನು ಸರ್ಕಾರದಿಂದ ಮಾಡಬಹುದೆಂದು ತಿಳಿಸಲಾಗಿದೆ. ಕರ್ನಾಟಕದಾದ್ಯಂತ ಅನೇಕ ಕುಟುಂಬಗಳವರು ಸಾವು–ನೋವುಗಳಿಂದ ದುಃಖಿತರಾಗಿದ್ದಾರೆ. ಕುಟುಂಬದ ಸದಸ್ಯರು ಜೀವನ ನಿರ್ವಹಣೆಗೆ ಕಷ್ಟಪಡುವ ಸಂದರ್ಭ ಬಂದೊದಗಿದೆ. ಇಂತಹ ಸಂದಿಗ್ಧ

ಪರಿಸ್ಥಿತಿಯಲ್ಲಿ ಅವರ ಮಕ್ಕಳ ವಿದ್ಯಾಭ್ಯಾಸದ ಮುಂದುವರಿಕೆಯೂ ಅವರಿಗೆ ಸವಾಲಾಗಿರುತ್ತದೆ. ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಾವು–ನೋವುಗಳಾಗಿ ಸಂಕಷ್ಟದಲ್ಲಿರುವ ಕುಟುಂಬದ ಮಕ್ಕಳಿಗೆ ಸುತ್ತೂರು ಶ್ರೀಕ್ಷೇತ್ರದ ವಸತಿ ಶಾಲೆಯಲ್ಲಿ ಉಚಿತ ಶಿಕ್ಷಣ ಅನುಕೂಲ ಕಲ್ಪಿಸಲಾಗುವುದು ಎಂದು ಹೇಳಿದರು.

ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಸುತ್ತೂರು ಶ್ರೀಗಳು ಕರೋನ ಸಂಕಷ್ಟದ ಸಂದರ್ಭದಲ್ಲಿ ನಮಗೆ ಎಲ್ಲ ರೀತಿಯಿಂದಲೂ ಸಹಕರಿಸುತ್ತಿದ್ದಾರೆ. ಸೋಂಕಿನಿಂದ ಗುಣಮುಖರಾದವರಿಗೆ ಪ್ರತ್ಯೇಕ ವಸತಿ ವ್ಯವಸ್ಥೆಯ ಅಗತ್ಯವಿರುವ ಹಿನ್ನೆಲೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿರುವ ಸಂಸ್ಥೆಯ ಸಮುದಾಯ ಭವನಗಳು ಮತ್ತು ವಿದ್ಯಾರ್ಥಿನಿಲಯಗಳಲ್ಲಿ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಔಷಧ ಮತ್ತು ವೈದ್ಯಕೀಯ ಉಪಚಾರಗಳನ್ನು ಸರ್ಕಾರದಿಂದ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಸಂಸದರಾದ ಶ್ರೀ ಪ್ರತಾಪ ಸಿಂಹ, ಶಾಸಕರಾದ ಶ್ರೀ ಎಲ್. ನಾಗೇಂದ್ರ, ಮುಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್, ಮೃಗಾಲಯ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಲ್.ಆರ್. ಮಹದೇವಸ್ವಾಮಿ, ಅರಣ್ಯ ಮತ್ತು ವಸತಿ ವಿಹಾರಧಾಮಗಳ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ. ಅಪ್ಪಣ್ಣ, ಪಾಲಿಕೆ ಆಯುಕ್ತರಾದ ಶ್ರೀಮತಿ ಶಿಲ್ಪಾನಾಗ್, ಮುಡಾ ಆಯುಕ್ತರಾದ ಡಾ. ಡಿ.ಬಿ. ನಟೇಶ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು ಉಪಸ್ಥಿತರಿದ್ದರು.

**ಸಚಿವ ಸೋಮಶೇಖರ್‌ರವರದ್ದು ಮಾನವೀಯತೆಯ ವ್ಯಕ್ತಿತ್ವ**

ಸಚಿವ ಸೋಮಶೇಖರ್‌ರವರದ್ದು ಮಾನವೀಯತೆಯ ವ್ಯಕ್ತಿತ್ವ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಮೇ 26ರಂದು ಬೆಂಗಳೂರು ಯಶವಂತಪುರ ವಿಧಾನಸಭಾ ಕ್ಷೇತ್ರದ ಹೆಮ್ಮಿಗೆಪುರ ವಾರ್ಡ್ ನಂ. 198ರಲ್ಲಿ ಮಾನ್ಯ ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಕೋವಿಡ್–19ರಿಂದ ಮೃತಪಟ್ಟ 24 ಕುಟುಂಬದವರಿಗೆ ವೈಯಕ್ತಿಕವಾಗಿ ನೀಡಿದ ಒಂದು ಲಕ್ಷ ರೂ.ಗಳ ಸಹಾಯಧನ ವಿತರಣೆ ಹಾಗೂ ಆಸ್ಪತ್ರೆಯಲ್ಲಿ ದಾಖಲಾಗಿರುವ ಐವರು ಕೋವಿಡ್ ಸೋಂಕಿತರಿಗೆ ಆರ್ಥಿಕ ಸಹಾಯ ಮಾಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಶೀರ್ವದಿಸುತ್ತಾ ಕೋವಿಡ್–19ರ ಸಂದರ್ಭದಲ್ಲಿ ಜನತೆ ಬಹಳ ಸಂಕಷ್ಟದಲ್ಲಿ ಸಿಲುಕಿದ್ದಾರೆ. ಅವರಿಗೆ ಚಿಕಿತ್ಸೆಯ ಜೊತೆಗೆ ಧೈರ್ಯವೂ ಸಹ ಬೇಕಿದೆ. ಈ ಕೆಲಸವನ್ನು ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಮಾಡುತ್ತಿದ್ದು, ತಮ್ಮ ಕ್ಷೇತ್ರದಲ್ಲಿ ಮೃತಪಟ್ಟವರಿಗೆ ಒಂದು ಲಕ್ಷ ರೂ.ಗಳನ್ನು ವೈಯಕ್ತಿಕವಾಗಿ ನೀಡುವ ಮೂಲಕ ಮಾದರಿಯಾಗಿದ್ದಾರೆ.

ಅಲ್ಲದೆ, ಮಾನವೀಯತೆಯನ್ನು ಪ್ರದರ್ಶಿಸಿದ್ದಾರೆ. ಸಹಕಾರ ಸಚಿವರಾಗಿ ರಾಜ್ಯದ ಜವಾಬ್ದಾರಿಯನ್ನು ನಿರ್ವಹಿಸಬೇಕು. ಅಲ್ಲದೆ, ಇಡೀ ಮೈಸೂರು ಜಿಲ್ಲೆಯನ್ನೂ ಅವರು ಸಂಚರಿಸಿ, ಪಿಎಚ್‌ಸಿಗಳಿಗೂ ಭೇಟಿ ನೀಡಿ ಆಯಾ ಕ್ಷೇತ್ರದ ಶಾಸಕರು ಮಾಡುವಂತಹ ಕೆಲಸವನ್ನು ಮಾಡುವ ಮೂಲಕ ಮಾದರಿಯಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಬಂಡೀಪುರ, ನಾಗರಹೊಳೆ ಕಾಡುಪ್ರದೇಶಗಳಲ್ಲಿರುವ ಸೋಲಿಗರು ಸೇರಿದಂತೆ ಇತರ ಕುಟುಂಬದವರು ಹೇಗೆ ಸುರಕ್ಷಿತವಾಗಿರಬೇಕು ಎಂಬ ನಿಟ್ಟಿನಲ್ಲಿ ಮಾರ್ಗದರ್ಶನವನ್ನು ಕೊಟ್ಟು ಬಂದಿದ್ದಾರೆ. ಈ ಮೂಲಕ ಅಧಿಕಾರಿಗಳಿಗೂ ಮಾಹಿತಿ–ಸೂಚನೆಯನ್ನು ಕೊಟ್ಟು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಲು ಪ್ರೋತ್ಸಾಹ ನೀಡುತ್ತಿದ್ದಾರೆ. ಅವರದ್ದು ಮಾತು ಕಡಿಮೆ, ಕೆಲಸ ಜಾಸ್ತಿ ಎಂಬ ಪ್ರವೃತ್ತಿ ಎಂದು ಹೇಳಿದರು.

ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ನಾವೀಗ ಕ್ಷೇತ್ರದಲ್ಲಿ ಪ್ರತಿ ಮನೆಮನೆಗೆ ಭೇಟಿ ನೀಡಿ ಜಾಗೃತಿ ಮೂಡಿಸುವ ಕೆಲಸಕ್ಕೆ ಕೈಹಾಕಿದ್ದೇವೆ. ಲಕ್ಷಣಗಳು ಕಂಡುಬಂದರೆ ತಕ್ಷಣ ಚಿಕಿತ್ಸೆ ಪಡೆಯುವಂತೆ ಮನವೊಲಿಸಲು ನಾನೂ ಸಹ ಖುದ್ದು ಮುಂದಾಗಿದ್ದೇನೆ. ಜನರ ಆರೋಗ್ಯ ನಮಗೆ ಮುಖ್ಯವಾಗಿದೆ. ಕೆಲವರು ರೋಗವನ್ನು ಹೇಳಿಕೊಳ್ಳಲು ಮುಜುಗರ ಮಾಡಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕ್ಷೇತ್ರದಲ್ಲಿ ಹೆಚ್ಚೆಚ್ಚು ಕೋವಿಡ್ ಕೇರ್ ಸೆಂಟರ್‌ಗಳನ್ನು ತೆರೆದಿದ್ದೇವೆ. ಇಲ್ಲಿ ವೈದ್ಯರು ಇದ್ದು, ಭೇಟಿ ನೀಡಿದವರಿಗೆ ಯಾವ ರೀತಿಯ ಚಿಕಿತ್ಸೆಯ ಅವಶ್ಯಕತೆ ಇದೆ. ಅವರಿಗೆ ಮನೆಯಲ್ಲಿಯೇ ಚಿಕಿತ್ಸೆ ಸಾಕೇ? ಆಸ್ಪತ್ರೆಗೆ ದಾಖಲಾಗಬೇಕೇ? ಆಕ್ಸಿಜನ್ ಬೆಡ್ ಅವಶ್ಯಕತೆ ಇದೆಯೆ? ಎಂಬೆಲ್ಲ ಮಾಹಿತಿಯನ್ನು ನೀಡಿ ಸೂಕ್ತ ಸಲಹೆಗಳನ್ನು ನೀಡುತ್ತಾರೆ. ಹೀಗಾಗಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು. ರಾಜ್ಯದ ಎಲ್ಲಿಯೇ ಕೋವಿಡ್‌ನಿಂದ ಮೃತಪಟ್ಟು ತಬ್ಬಲಿಯಾಗುವ ಮಕ್ಕಳಿಗೆ 1ನೇ ತರಗತಿಯಿಂದ 10ನೇ ತರಗತಿವರೆಗೆ ಉಚಿತ ಶಿಕ್ಷಣವನ್ನು ಸುತ್ತೂರು ಶ್ರೀಮಠದಿಂದ ಕೊಡುವುದಾಗಿ ಈಗಾಗಲೇ ಮಹಾಸ್ವಾಮಿಗಳು ಘೋಷಿಸಿದ್ದಾರೆ. ಇಂತಹ ಮಾನವೀಯ ಗುಣಗಳು ಜನತೆಯನ್ನು ಕಾಪಾಡುತ್ತಿದೆ. ಇದರಿಂದ ಅದೆಷ್ಟೋ ವಿದ್ಯಾರ್ಥಿಗಳ ಬಾಳು ಬೆಳಕಾಗಲಿದೆ. ಮೈಸೂರಿನಲ್ಲಿಯೂ ಸಹ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸುತ್ತಮುತ್ತಲ ಜಿಲ್ಲೆಗಳಿಂದ ಬಂದರೂ ಸಹ ಚಿಕಿತ್ಸೆಯನ್ನು ನೀಡುತ್ತಿದ್ದಾರೆ. ಆಸ್ಪತ್ರೆಯಲ್ಲಿ ಆಕ್ಸಿಜನ್, ವೆಂಟಿಲೇಟರ್, ಐಸಿಯು ಬೆಡ್‌ಗಳು ಸೇರಿದಂತೆ ಯಾವುದಕ್ಕೂ ಕೊರತೆ ಇಲ್ಲ. 500 ಬೆಡ್‌ಗಳನ್ನು ಮೈಸೂರು ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಕೊಡಲಾಗಿದೆ. ಅಲ್ಲದೆ, ಮೈಸೂರಿನಲ್ಲಿರುವ ಜೆಎಸ್‌ಎಸ್ ಶಾಲೆಗಳು ಹಾಗೂ ಕಲ್ಯಾಣಮಂಟಪಗಳನ್ನು ಕೋವಿಡ್ ಕೇರ್ ಸೆಂಟರ್‌ಗಳಾಗಿ ಪರಿವರ್ತಿಸಿ ಚಿಕಿತ್ಸೆಗೆ ಉಚಿತವಾಗಿ ಬಳಸಿಕೊಳ್ಳಲು ಜಗದ್ಗುರುಗಳು ಸೂಚಿಸಿದ್ದಾರೆ. ಅಲ್ಲದೆ, ಸರ್ಕಾರಕ್ಕೆ ಹಾಗೂ ಜಿಲ್ಲಾಡಳಿತಕ್ಕೆ ಆಗಾಗ ಅಗತ್ಯ ಸಲಹೆಗಳನ್ನು ನೀಡುತ್ತಾ ಬಂದಿದ್ದಾರೆ ಎಂದು ತಿಳಿಸಿದರು.

ಶ್ರೀ ಅನಿಲ್ ಚಳಗೇರಿ, ಶ್ರೀ ಆರ್ಮ ಶ್ರೀನಿವಾಸ್, ಶ್ರೀ ಪ್ರಕಾಶ್ ಹಾಗೂ ಶ್ರೀ ನಿಶಾಂತ್ ಸೋಮಶೇಖರ್ ಮೊದಲಾದವರು ಉಪಸ್ಥಿತರಿದ್ದರು.

**ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಆಸ್ಪತ್ರೆ ಕೈಗೊಂಡಿರುವ ಕಾರ್ಯಗಳಿಗೆ ಮೆಚ್ಚುಗೆ**

ಜೂನ್ 1ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಮಾಜಿ ಸಚಿವರು ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು.

ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಆಸ್ಪತ್ರೆಯ ವತಿಯಿಂದ ಕೋವಿಡ್ ಸಂದರ್ಭದಲ್ಲಿ ಕೈಗೊಂಡಿರುವ ಪರಿಹಾರ ಕಾರ್ಯಗಳ ವಿವರಗಳನ್ನು ಪಡೆದರು. ಬ್ಲಾಕ್‌ಫಂಗಸ್‌ಗೆ ಅಗತ್ಯವಿರುವ ಔಷಧಿಯನ್ನು ಕೇಂದ್ರ ಸರ್ಕಾರ ಖರೀದಿಸಲು ಸೂಕ್ತ ಕ್ರಮ ಕೈಗೊಳ್ಳುತ್ತಿದೆ. ಸದ್ಯದಲ್ಲೇ ಇದಕ್ಕೆ ಪರಿಹಾರ ದೊರೆಯಲಿದೆ ಎಂದರು. ಕರೋನ ಹಾಗೂ ಬ್ಲಾಕ್‌ಫಂಗಸ್‌ಗಳಿಗೆ ಅಗತ್ಯವಾದ ಔಷಧಗಳನ್ನು ಆಸ್ಪತ್ರೆಗಳಿಗೆ ಒದಗಿಸುವಲ್ಲಿ ಸರ್ಕಾರ ರೂಪಿಸಿರುವ ಕಠಿಣ ನಿಯಮಗಳಿಂದಾಗಿ ಸೋಂಕಿತರಿಗೆ ಆಗಿರುವ ತೊಂದರೆಯನ್ನು ಗಮನಕ್ಕೆ ತಂದಾಗ ಅದನ್ನು ಸಡಿಲಗೊಳಿಸುವ ಬಗೆಗೆ ಸಂಬಂಧ ಪಟ್ಟವರೊಂದಿಗೆ ಚರ್ಚಿಸಲಾಗುವುದೆಂದು ತಿಳಿಸಿದರು. ಅನಂತರ ಜೆಎಸ್‌ಎಸ್ ಆಸ್ಪತ್ರೆಗೆ ಭೇಟಿ ನೀಡಿ ಕೋವಿಡ್ ಚಿಕಿತ್ಸೆಗೆ ಕೈಗೊಂಡಿರುವ ಕಾರ್ಯಗಳನ್ನು ಪರಿಶೀಲಿಸಿದರು. ಕೋವಿಡ್ ಸೋಂಕಿತರ ಸಂಬಂಧಿಕರನ್ನು ಭೇಟಿಯಾಗಿ ಆತ್ಮಸ್ಥೈರ್ಯ ತುಂಬಿದರು.

**ಚಾಮರಾಜನಗರ ಜೆಎಸ್‌ಎಸ್ ಆಸ್ಪತ್ರೆಗೆ ಆಕ್ಸಿಜನ್ ಕಾನ್ಸನ್ಟ್ರೇಟರ್‌ಗಳ ಕೊಡುಗೆ**

ಜೂನ್ 1ರಂದು ಚಾಮರಾಜನಗರ ಜೆಎಸ್‌ಎಸ್ ಆಸ್ಪತ್ರೆಗೆ ರೋಟರಿ ಬೆಂಗಳೂರು ಬ್ರಿಗೇಡ್ಸ್ ವತಿಯಿಂದ ಆಕ್ಸಿಜನ್ ಕಾನ್ಸನ್ಟ್ರೇಟರ್‌ಗಳನ್ನು ಸದಸ್ಯರಾದ ಶ್ರೀ ಅಕ್ಷಯ್ ಮಲ್ಲಪ್ಪ, ದುಗ್ಗಹಟ್ಟಿ ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿಯವರು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಎಸ್. ಸುರೇಶ್‌ಕುಮಾರ್‌ರವರ ಮೂಲಕ ನೀಡಿದರು.

ಕೋವಿಡ್ ಸೋಂಕಿತರ ಶುಶ್ರೂಷೆಗೆ ಸೌಲಭ್ಯ ಒದಗಿಸುವ ಬಗ್ಗೆ ಪೂಜ್ಯರೊಂದಿಗೆ ಸಚಿವರು ಚರ್ಚಿಸಿ ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆಗಳಲ್ಲಿ ವ್ಯವಸ್ಥೆ ಮಾಡಿಕೊಟ್ಟರೆ ಅನುಕೂಲವಾಗುತ್ತದೆಂದು ತಿಳಿಸಿದರು. ಅದರಂತೆ ವ್ಯವಸ್ಥೆ ಮಾಡುವುದಾಗಿ ಪೂಜ್ಯರು ಸಮ್ಮತಿಸಿದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಗಳ ಪರೀಕ್ಷೆಗಳನ್ನು ನಡೆಸುವ ಬಗೆಗೂ ಮಾನ್ಯ ಸಚಿವರು ಪೂಜ್ಯರೊಂದಿಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲಾಧಿಕಾರಿಗಳಾದ ಡಾ. ಎಂ.ಆರ್. ರವಿ, ಶಾಸಕರುಗಳಾದ ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಎನ್. ಮಹೇಶ್,

ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್ ಹಾಗೂ ಚಾಮರಾಜನಗರ ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಕುಲದೀಪ್‌ರವರು ಉಪಸ್ಥಿತರಿದ್ದರು.

**ಕೋವಿಡ್ ಸೋಂಕಿತ ವ್ಯಕ್ತಿಗಳನ್ನು ನೋಯಿಸಬೇಡಿ**

ಕೋವಿಡ್ ಸೋಂಕಿತರನ್ನು ಕೀಳರಿಮೆಯಿಂದ ಕಾಣುವುದು, ಅವರಿಗೆ ನೋವಾಗುವಂತೆ ನಡೆದುಕೊಳ್ಳಬಾರದು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಜೂನ್ 4ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಮೈಸೂರು ನಾಗರಿಕರ ವೇದಿಕೆಯಿಂದ ಕೋವಿಡ್ ಸೋಂಕಿಗೆ ತುತ್ತಾಗಿ ಹೋಂ ಐಸೋಲೇಷನ್ ನಲ್ಲಿರುವವರಿಗೆ ಮೈಸೂರು ನಾಗರಿಕರ ವೇದಿಕೆಯಿಂದ ವೈದ್ಯಕೀಯ ಕಿಟ್‌ಗಳನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರಿಗೆ ಹಸ್ತಾಂತರಿಸಿದ ಸಂದರ್ಭದಲ್ಲಿ ಪೂಜ್ಯರು ಮಾತನಾಡಿ ಜಿಲ್ಲೆಯಲ್ಲಿ ಇತ್ತೀಚೆಗೆ ಸೋಂಕು ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದೆ. ಇದು ಪೂರ್ಣ ಪ್ರಮಾಣದಲ್ಲಿ ನಿರ್ಮೂಲನೆಯಾಗುವವರೆಗೂ ಪ್ರತಿಯೊಬ್ಬರು ಎಚ್ಚರಿಕೆಯಿಂದಿರಬೇಕು. ಕೋವಿಡ್ ಸೋಂಕಿತ ವ್ಯಕ್ತಿಗಳನ್ನು ಕೀಳಾಗಿ ಕಾಣದೇ ಸಾಧ್ಯವಾದರೆ ಅವರಿಗೆ ನೆರವು ನೀಡಿ ಎಂದು ಹೇಳಿದರು.

ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಣಕ್ಕೆ ಸಂಘ–ಸಂಸ್ಥೆಗಳು ಸಾಕಷ್ಟು ಸಂಖ್ಯೆಯಲ್ಲಿ ನೆರವು ನೀಡುತ್ತಿರುವುದು ಸಂತಸದ ವಿಚಾರ. ಕೋವಿಡ್ ಮೊದಲನೇ ಅಲೆಗಿಂತ ಎರಡನೇ ಅಲೆ ತೀವ್ರವಾಗಿದೆ. ಈ ಬಾರಿ ಹಳ್ಳಿಗಳಲ್ಲೂ ಸೋಂಕು ವ್ಯಾಪಕವಾಗಿ ಹರಡಿದೆ. ಹಳ್ಳಿಗಳಲ್ಲಿ ಸೋಂಕು ತಡೆಗೆ ವೈದ್ಯರ ನಡಿಗೆ ಹಳ್ಳಿ ಕಡೆಗೆ, ಮನೆ ಮನೆ ಸಮೀಕ್ಷೆ ನಡೆಸಿ ಸೋಂಕಿತರನ್ನು ಗುರುತಿಸುವ ಕಾರ್ಯ ಮಾಡಲಾಗುತ್ತಿದೆ ಎಂದರು.

ಮೈಸೂರು ನಾಗರಿಕ ವೇದಿಕೆಯ ಶ್ರೀ ವಾಸುದೇವ್‌ಭಟ್‌ರವರು ಸಚಿವರ ಕೋರಿಕೆಯಂತೆ ಐದು ಸಾವಿರ ಔಷಧದ ಕಿಟ್‌ಗಳನ್ನು ಹಸ್ತಾಂತರಿಸಲಾಗಿದೆ. ಕಿಟ್‌ನಲ್ಲಿ ಹೋಂ ಐಸೋಲೇಷನ್‌ನಲ್ಲಿರುವವರಿಗೆ ಅಗತ್ಯವಿರುವ ಮಾತ್ರೆಗಳು ಹಾಗೂ ಮಾಸ್ಕ್‌ಗಳನ್ನು ಇಡಲಾಗಿದೆ. ಯಾವಾಗ ಯಾವ ಮಾತ್ರೆಗಳನ್ನು ತೆಗೆದುಕೊಳ್ಳಬೇಕು ಎಂಬ ಸಲಹಾ ಚೀಟಿಯನ್ನು ಇಡಲಾಗಿದೆ. ಮತ್ತೆ ಅಗತ್ಯತೆಯನ್ನು ತಿಳಿಸಿದರೆ ಅದರಂತೆ ಕಿಟ್‌ಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಸಂಸದರಾದ ಶ್ರೀ ಪ್ರತಾಪ ಸಿಂಹ, ಶಾಸಕರುಗಳಾದ ಶ್ರೀ ಎಸ್.ಎ. ರಾಮದಾಸ್, ಪಾಲಿಕೆ ಆಯುಕ್ತರಾದ ಶ್ರೀಮತಿ ಶಿಲ್ಪಾ ನಾಗ್‌ರವರು ಮಾತನಾಡಿದರು. ಶಾಸಕರಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ತನ್ವೀರ್ ಸೇಠ್, ಶ್ರೀ ಎಲ್. ನಾಗೇಂದ್ರ, ಮುಡಾ

ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ಹಾಗೂ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು, ಜೆಎಸ್ಎಸ್ ಮಹಾವಿದ್ಯಾಪೀಠದ ಡಾ. ಸಿ.ಜಿ. ಬೆಟಸೂರಮಠ, ಶ್ರೀ ಆರ್. ಮಹೇಶ್ ಉಪಸ್ಥಿತರಿದ್ದರು.

**ಪ್ರಕೃತಿ ಸಮತೋಲನ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ**

ಪ್ರಕೃತಿ ಸಮತೋಲನ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಜೂನ್ 5ರಂದು ಮೈಸೂರಿನಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮಹಾನಗರಪಾಲಿಕೆ ಹಾಗೂ ಹಸಿರು ಫೌಂಡೇಷನ್‌ಗಳ ಸಂಯುಕ್ತ ಆಶ್ರಯದಲ್ಲಿ 25 ಸಾವಿರ ಸಸಿಗಳನ್ನು ನೆಡುವ ಅಭಿಯಾನದ ದಿವ್ಯಸಾನ್ನಿಧ್ಯ ವಹಿಸಿ ಪರಿಸರ ಸಂರಕ್ಷಣೆ ಇಂದು ಬಹುಮುಖ್ಯವಾಗಿದೆ. ಕಾರಣ ಮಾನವನ ಅತಿಯಾದ ಆಸೆಗಳಿಂದ ಪ್ರಕೃತಿಯಲ್ಲಿ ಅಸಮತೋಲನ ಉಂಟಾಗುತ್ತಿದೆ. ಅದರಿಂದ ಪ್ರಾಕೃತಿಕ ವಿಕೋಪಗಳು ಸಂಭವಿಸುತ್ತಿವೆ. ಈ ಬಗ್ಗೆ ತಜ್ಞರು ಕಳಕಳಿ ವ್ಯಕ್ತಪಡಿಸುತ್ತಿದ್ದಾರೆ. ಮನೆಗೊಂದು ಮರ ಊರಿಗೊಂದು ವನ ಇರಬೇಕು. ಈ ಅಭಿಯಾನದ ಸಂಬಂಧ ಅಗತ್ಯವಾದಲ್ಲಿ ಗಿಡ ನೆಡಲು ಪೂರ್ಣಪ್ರಮಾಣದ ಸಹಕಾರವನ್ನು ಶ್ರೀಮಠದಿಂದ ನೀಡಲಾಗುವುದು ಎಂದು ಹೇಳಿದರು.

ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಮೈಸೂರನ್ನು ಹಸಿರು ನಗರವನ್ನಾಗಿಸಲು ಇಲ್ಲಿನ ಸಂಘಸಂಸ್ಥೆಗಳು, ಜನಪ್ರತಿನಿಧಿಗಳು ಸಾಕಷ್ಟು ಬೆಂಬಲ ನೀಡುತ್ತಿದ್ದಾರೆ. ಇದಕ್ಕೆ ಪೂರಕವಾಗಿ ರಾಜೀವ್ ಅವರು ಅಭೂತಪೂರ್ವ ಬೆಂಬಲ ನೀಡುತ್ತಿದ್ದಾರೆ ಎಂದರು.

ಶಾಸಕರಾದ ಶ್ರೀ ಎಸ್.ಎ. ರಾಮದಾಸ್‌ರವರು ನಮೋ ಗಂಗಾ ಯೋಜನೆಯಡಿ ನದಿಗಳ ಶುದ್ಧೀಕರಣ, ಸ್ವಚ್ಛ ಭಾರತ ಅಭಿಯಾನ ಸೇರಿದಂತೆ ಪರಿಸರ ಸಂರಕ್ಷಣೆಗೆ ಹಲವಾರು ಯೋಜನೆಗಳನ್ನು ಸರ್ಕಾರದಿಂದ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಂಸದರಾದ ಶ್ರೀ ಪ್ರತಾಪ ಸಿಂಹ ಮೈಸೂರು ಜಿಲ್ಲೆಯಲ್ಲಿ ಅಪಾರ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಮೈಸೂರಿನ ರಿಂಗ್ ರಸ್ತೆಯ ವಿಭಜಕದಲ್ಲಿ ಆರು ಸಾವಿರ ಹೆಬ್ಬೇವಿನ ಗಿಡಗಳನ್ನು ನೆಡಲಾಗಿದೆ ಮತ್ತು ಸರ್ವೀಸ್ ರಸ್ತೆಯಲ್ಲಿ ಆರು ಸಾವಿರ ಹಣ್ಣಿನ ಗಿಡಗಳನ್ನು ನೆಡಲಾಗಿದೆ ಎಂದು ಹೇಳಿದರು.

ಮುಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್‌ರವರು ಲಕ್ಷ ವೃಕ್ಷ ಮೈಸೂರಿನಲ್ಲಿ ಬೆಳೆಸಬೇಕೆಂದು ಹೆಚ್.ವಿ. ರಾಜೀವ್ ಸ್ನೇಹ ಬಳಗದಿಂದ ಸಂಕಲ್ಪ ಮಾಡಲಾಗಿದೆ. ಎರಡು ವರ್ಷದಲ್ಲಿ ತಲಾ 15 ಸಾವಿರ ಗಿಡಗಳನ್ನು ನೆಡಲಾಗಿದೆ. ಈ ವರ್ಷ 20

ಸಾವಿರ ಸಸಿಗಳನ್ನು ಉಚಿತವಾಗಿ ಮುಡಾಗೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ರಘು ಆರ್. ಕೌಟಿಲ್ಯ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಲ್.ಆರ್. ಮಹದೇವಸ್ವಾಮಿ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರಾದ ಶ್ರೀ ಎನ್.ಆರ್. ಕೃಷ್ಣಪ್ಪಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಹೇಮಂತ್‌ಕುಮಾರ್‌ಗೌಡ, ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷರಾದ ಶ್ರೀ ಫಣೀಶ್, ಮುಡಾ ಆಯುಕ್ತರಾದ ಶ್ರೀ ಡಿ.ಬಿ. ನಟೇಶ್ ಮೊದಲಾದವರು ಭಾಗವಹಿಸಿದ್ದರು.

**ಧಾರ್ಮಿಕವಾಗಿಯೂ ಸಂಪದ್ಭರಿತವಾದುದು ಆರ್ಯವೈಶ್ಯ ಸಮಾಜ**

ಆರ್ಥಿಕವಾಗಿ ಮಾತ್ರವಲ್ಲದೆ ಧಾರ್ಮಿಕವಾಗಿಯೂ ಸಂಪದ್ಭರಿತ ಸಮಾಜ ಆರ್ಯವೈಶ್ಯ ಸಮಾಜ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು. ಜೂನ್ 20ರಂದು ಬೆಂಗಳೂರಿನ ವಾಸವಿಪೀಠಂನ ಶ್ರೀ ಸಚ್ಚಿದಾನಂದ ಸರಸ್ವತಿಜೀಯವರ ಪೀಠಾರೋಹಣ ಮಹೋತ್ಸವದಲ್ಲಿ ಪಾಲ್ಗೊಂಡು ಧರ್ಮ ಮತ್ತು ಶ್ರೀಮಂತಿಕೆಯನ್ನು ಸರಿದೂಗಿಸಿಕೊಂಡು ಹೋಗುವುದು ಬಹಳ ಕಷ್ಟಕರವಾದುದು. ಎಲ್ಲಿ ಶ್ರೀಮಂತಿಕೆ ಇರುತ್ತದೆಯೋ ಅಲ್ಲಿ ಧರ್ಮ ಮರೆಯಾಗುತ್ತಿರುತ್ತದೆ. ಆದರೆ ಧರ್ಮ ಮತ್ತು ಶ್ರೀಮಂತಿಕೆಯನ್ನು ಸಮಾನವಾಗಿ ಕಾಯ್ದುಕೊಂಡಿರುವ ಸಮಾಜ ಆರ್ಯವೈಶ್ಯ ಸಮಾಜ. ಸಮಾಜದಲ್ಲಿನ ಎಲ್ಲ ಸಂಕಷ್ಟಗಳ ಸಂದರ್ಭಗಳಲ್ಲಿಯೂ ಉದಾರವಾದ ಮನಸ್ಸಿನಿಂದ ಪಾಲ್ಗೊಂಡು ಜನರ ನೋವುಗಳನ್ನು ನಿವಾರಣೆ ಮಾಡುವಲ್ಲಿ ಆರ್ಯವೈಶ್ಯ ಸಮಾಜ ಸದಾ ಮುಂದಿದೆ. ಸ್ವಾಮಿಗಳಾಗುವುದು ಸುಲಭವಾದ ಕಾರ್ಯವಲ್ಲ. ಅದು ಮುಳ್ಳಿನ ಹಾಸಿಗೆಯಂತೆ. ಇಡೀ ಸಮಾಜವನ್ನೇ ತಾಯಿಯಂತೆ ಕಾಣಬೇಕು. ಸಮಸ್ತ ಜನರ ಪೋಷಣೆ ಜವಾಬ್ದಾರಿ ಮಠಾಧಿಪತಿಗಳದ್ದಾಗಿರುತ್ತದೆ. ಸಮಾಜ ಸುಧಾರಣೆಗೆ ಅಗತ್ಯವಿರುವ ಮಾರ್ಗದರ್ಶನ ನೀಡಿ ಇಡೀ ಸಮಾಜ ಸರಿದಾರಿಯಲ್ಲಿ ನಡೆಯುವಂತೆ ಮಾಡುವುದು ಪೀಠಾಧಿಪತಿಗಳ ಜವಾಬ್ದಾರಿ. ಧರ್ಮಪೀಠಗಳ ಕೆಲಸ ಮನುಷ್ಯನ ಆತ್ಮಸಾಕ್ಷಾತ್ಕಾರ ಮತ್ತು ಆತನ ಮಾನಸಿಕ ಸುಖ–ಸಂತೋಷಕ್ಕೆ ಮಾರ್ಗದರ್ಶನ ಮಾಡುವುದಾಗಿದೆ. ಅಂತಹ ಜವಾಬ್ದಾರಿಯನ್ನು ಸಚ್ಚಿದಾನಂದ ಸರಸ್ವತಿಯವರು ವಹಿಸಿಕೊಂಡಿದ್ದಾರೆ. ಅಪಾರವಾದ ವಿದ್ವತ್ತಿದ್ದರೂ ಮನಸ್ಸಿನ ಯಾವ ಮೂಲೆಯಲ್ಲೂ ಅದರ ಅಹಮಿಕೆ ಇಲ್ಲದವರು. ಸದುವಿನಯವೇ ಸದಾಶಿವನ ಒಲುಮೆ ಎಂಬಂತಹ ವ್ಯಕ್ತಿತ್ವವನ್ನು ಹೊಂದಿದ್ದಾರೆ ಎಂದು ತಿಳಿಸಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಬಹಳ ದೊಡ್ಡ ಸ್ಥಾನವಿದೆ. ಶಿಷ್ಯನಿಗೆ ಜ್ಞಾನವನ್ನು ನೀಡಿ ಆ ಜ್ಞಾನ ಯಾವತ್ತಿಗೂ ಫಲವನ್ನೇ ನೀಡುವಂತೆ ಮಾಡುವ ಶಕ್ತಿ ಗುರುವಿಗಿದೆ. ಆರ್ಯವೈಶ್ಯ

ಸಮಾಜ ಸೇವೆ, ಧಾನ–ಧರ್ಮಗಳಿಗೆ ಶ್ರಮವಹಿಸಿ ದುಡಿಯುವ ಸಮಾಜ. ಸಚ್ಚಿದಾನಂದ ಸರಸ್ವತಿಯವರು ಅಧ್ಯಯನಶೀಲರು, ಜ್ಞಾನತ್ರಯರು ಆಗಿದ್ದಾರೆ. ಇಂತಹ ಶ್ರೀಗಳು ಸಮಾಜಕ್ಕೆ ದೊರೆತಿರುವುದು ಭಾಗ್ಯದ ಸಂಗತಿ ಎಂದು ಹೇಳಿದರು.

ಚಿನ್ಮಯ ಮಿಷನ್ ಟ್ರಸ್ಟ್‌ನ ಶ್ರೀ ಬ್ರಹ್ಮಾನಂದಜೀಯವರು ಸಚ್ಚಿದಾನಂದ ಸರಸ್ವತಿಯವರಿಗೆ ಇಂದಿನಿಂದ ಇಡೀ ಸಮಾಜವೇ ಅವರ ಕುಟುಂಬ. ಅದಕ್ಕಾಗಿಯೇ ಅವರು ಇಂದು ಈ ಪೀಠದಲ್ಲಿ ಕುಳಿತಿದ್ದಾರೆ. ಅವರ ಹಿಂದಿನ ಹಳೆಯ ವ್ಯಕ್ತಿತ್ವ ಹೋಗಿ ಇಂದು ಹೊಸ ಹುಟ್ಟನ್ನು ಅವರು ಪಡೆದಿದ್ದಾರೆ. ಹೃದಯವೈಶಾಲ್ಯತೆಯನ್ನು ಬೆಳೆಸಿಕೊಂಡು ದೀಕ್ಷೆ ತೆಗೆದುಕೊಂಡ ಈ ದಿನ ಬಹಳ ಮಹತ್ವದ್ದು ಎಂದು ತಿಳಿಸಿದರು.

ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳು ಸಚ್ಚಿದಾನಂದ ಸರಸ್ವತಿಯವರು ಇಂದಿನಿಂದ ಸಮಾಜಕ್ಕೆ ದೊಡ್ಡ ಬಲ. ಅವರು ಸಮರ್ಥ ಪೀಠಾಧಿಪತಿಗಳು. ಕೇವಲ ಆರ್ಯವೈಶ್ಯ ಸಮಾಜಕ್ಕೆ ಮಾತ್ರವಲ್ಲ ಇಡೀ ಭರತಖಂಡದ ಸಮುದಾಯಕ್ಕೇ ಒಬ್ಬ ಉತ್ತಮ ಸ್ವಾಮಿಗಳು ದೊರೆತಿದ್ದಾರೆ. ಸನಾತನ ಸಂಸ್ಕೃತಿ ಇಂತಹವರಿಂದ ಬೆಳೆಯಲಿ ಎಂದು ಹಾರೈಸಿದರು.

ನೂತನ ಪೀಠಾಧಿಪತಿಗಳಾದ ಶ್ರೀ ಸಚ್ಚಿದಾನಂದ ಸರಸ್ವತಿಯವರು ಸಂತರ ಒಡನಾಟ ನಮಗೆ ಯಾವತ್ತಿಗೂ ಸದಾ ವಿನಯವನ್ನೇ ತುಂಬಿದೆ. ಎಲ್ಲ ಸಂತರ ಆಶೀರ್ವಾದದಿಂದ ವಾಸವಿ ಪೀಠ ಗೌರವವನ್ನು ಗಳಿಸುವಂತಾಗಬೇಕು. ಮನಸ್ಸಿನ ಅಶಾಂತಿ, ಗೊಂದಲಗಳನ್ನು ತೊಡೆದುಹಾಕಿ, ಗಟ್ಟಿಯಾದ ನಿಲುವನ್ನು ತಾಳಬೇಕು. ಯುವ ಜನರಲ್ಲಿ ಆಧ್ಯಾತ್ಮದ ಒಲವನ್ನು ಬೆಳೆಸುವ ಕಾರ್ಯವನ್ನು ವಾಸವಿ ಪೀಠ ಮಾಡಲಿದೆ. ನಾಡಿನ ಇತರ ಎಲ್ಲ ಮಠಗಳಂತೆ ಸಾಮಾಜಿಕ ಕಾರ್ಯಗಳಲ್ಲಿ ಶ್ರೀಪೀಠ ತೊಡಗಿಸಿಕೊಳ್ಳಲಿದೆ ಎಂದು ಹೇಳಿದರು.

ಕರ್ನಾಟಕ ವಿಧಾನಪರಿಷತ್ತಿನ ಮಾಜಿ ಸಭಾಪತಿಗಳಾದ ಶ್ರೀ ಡಿ.ಹೆಚ್. ಶಂಕರಮೂರ್ತಿ, ಶಾಸಕರಾದ ಶ್ರೀ ಹೆಚ್.ಪಿ. ಮಂಜುನಾಥ್ ಮಾತನಾಡಿದರು. ಉಪಮುಖ್ಯಮಂತ್ರಿಗಳಾದ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ್, ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಪ್ರಮುಖರು ಉಪಸ್ಥಿತರಿದ್ದರು.

**ಸದೃಢ ಯುವಜನರಿಂದ ಬಲಿಷ್ಠ ಭಾರತ ನಿರ್ಮಾಣ ಸಾಧ್ಯ**

ಸದೃಢ ಯುವಜನರಿಂದ ಬಲಿಷ್ಠ ಭಾರತ ನಿರ್ಮಾಣ ಸಾಧ್ಯ ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಜೂನ್ 27ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಯೂಥ್ ಫಾರ್ ಸೇವಾ ಸಂಸ್ಥೆಯ ವತಿಯಿಂದ ಕೋವಿಡ್ ಸಾಂಕ್ರಾಮಿಕ ರೋಗ ಹರಡಿದ್ದ ಸಂದರ್ಭದಲ್ಲಿ ವಿವಿಧ ಸೇವಾಕಾರ್ಯದಲ್ಲಿ

ತೊಡಗಿಸಿಕೊಂಡಿದ್ದ ಸ್ವಯಂ ಸೇವಕರಿಗೆ ಅಭಿನಂದನಾ ಪತ್ರವನ್ನು ವಿತರಿಸಿ ಆಶೀರ್ವದಿಸುತ್ತಾ ತಿಳಿಸಿದರು. ಯೂಥ್ ಫಾರ್ ಸೇವಾ ಸಂಸ್ಥೆಯ ಸ್ವಯಂ ಸೇವಕರು ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇದೇ ತಂಡ ಚಾಮರಾಜನಗರದಲ್ಲೂ ಇದ್ದಿದ್ದರೆ ಕೋವಿಡ್‌ನಿಂದ ಮೃತಪಟ್ಟವರನ್ನು ಬದುಕಿಸಬಹುದಿತ್ತು ಎಂಬ ಆಶಯ ಮೂಡುತ್ತದೆ. ಸಮರ್ಥ ಸಮಾಜವನ್ನು ಕಟ್ಟಲು ಪ್ರಜ್ಞಾವಂತ ಯುವಕರ ಅವಶ್ಯಕತೆ ಇದೆ. ಸಮಾಜ ಸೇವೆಯಲ್ಲಿ ಇತರರೂ ತೊಡಗಿಕೊಳ್ಳುವಂತೆ ನಿಮ್ಮ ಸೇವೆ ಮಾದರಿಯಾಗಿರಬೇಕೆಂದು ಹೇಳಿದರು.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾದ ಡಾ. ಜಿ.ಎಂ. ಸಂಜೀವ್‌ರವರು ಚಾಮರಾಜನಗರದಲ್ಲಿ ಸಂಭವಿಸಿದ ಅನಾಹುತಕ್ಕೆ ವಿಷಾದ ವ್ಯಕ್ತಪಡಿಸಿ, ಯೂಥ್ ಫಾರ್ ಸೇವಾ ಸಂಸ್ಥೆಯ ಸೇವೆಯನ್ನು ಅಲ್ಲಿಗೂ ವಿಸ್ತರಿಸುವಂತೆ ಕೋರಿದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಹೇಮಂತ್‌ಕುಮಾರ್ ಗೌಡರವರು ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲಿ ಅನೇಕ ಸ್ವಯಂಸೇವಾ ಸಂಸ್ಥೆಗಳು ಸಾಕಷ್ಟು ಸಹಾಯಹಸ್ತ ಚಾಚಿವೆ. ಯೂಥ್ ಫಾರ್ ಸೇವಾ ಸಂಸ್ಥೆಯ ಕಾರ್ಯ ಮಾದರಿಯಾದದ್ದು. ಅತ್ಯಂತ ಧೈರ್ಯದಿಂದ ಎಲ್ಲ ಕಾರ್ಯಗಳನ್ನು ಸ್ವಯಂಸೇವಕರು ನಿರ್ವಹಿಸುತ್ತಿರುವುದು ಶ್ಲಾಘನಿಯ ಎಂದು ತಿಳಿಸಿದರು.

ಯೂಥ್ ಫಾರ್ ಸೇವಾ ಸಂಸ್ಥೆಯ ಟ್ರಸ್ಟಿ ಹಾಗೂ ರಾಷ್ಟ್ರೀಯ ಖಜಾಂಚಿಯಾದ ಶ್ರೀ ಹರೀಶ್ ಶೆಣೈರವರು ಸ್ವಯಂಸೇವಕರು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ನಿಸ್ವಾರ್ಥತೆಯಿಂದ ಸೇವೆ ಸಲ್ಲಿಸುತ್ತಿರುವುದು ಶ್ಲಾಘನಿಯ. ನಿಮ್ಮೆಲ್ಲರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ. ಯೂಥ್ ಫಾರ್ ಸೇವಾದ ಕಾರ್ಯಚಟುವಟಿಕೆಗಳನ್ನು ಬೇರೆ ಬೇರೆ ಜಿಲ್ಲೆಗೂ ವಿಸ್ತರಿಸಲಿದ್ದೇವೆ ಎಂದು ತಿಳಿಸಿದರು.

ಜಿಲ್ಲಾ ಸಂಯೋಜಕರಾದ ಕುಮಾರ ಸತೀಶ ಮೇತ್ರಿ ಮಾತನಾಡಿ ಸಂಸ್ಥೆಯ ಕಾರ್ಯಚಟುವಟಿಕೆಗಳು ಹಾಗೂ ಸಂಸ್ಥೆಯೊಂದಿಗಿನ ಅವರ ನಿಕಟವಾದ ಒಡನಾಟವನ್ನು ತಿಳಿಸಿದರು.

ಸ್ವಯಂಸೇವಕರುಗಳಾದ ಶ್ರೀ ಚಿರಂಜೀವಿ, ಶ್ರೀ ರಾಮಚಂದ್ರ, ಕು. ವಿಜಯಲಕ್ಷ್ಮಿ, ಕು. ಭೂಮಿಕಾ, ಕು. ಶ್ರೀವಾಣಿಯವರುಗಳು ಮಾತನಾಡಿ ಕರೋನಾ ಸಂದರ್ಭದಲ್ಲಿ ಸೇವಾಕಾರ್ಯದಲ್ಲಿ ಸ್ವಇಚ್ಛೆಯಿಂದ ಕಾರ್ಯಕರ್ತರಾಗಿ ಭಾಗವಹಿಸಿದುದು ವಿಶೇಷ ಅನುಭವ ಹಾಗೂ ಅತ್ಯಂತ ಸಂತೋಷವನ್ನುಂಟು ಮಾಡಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ 96 ಜನ ಸ್ವಯಂಸೇವಕರಿಗೆ ಪ್ರಶಂಸನಾ ಪತ್ರ ನೀಡಿ ಅಭಿನಂದಿಸ ಲಾಯಿತು.

**ಸದಾಚಾರ ಸಂಪನ್ನರಾಗಬೇಕು**

ಮನುಷ್ಯರು ದುರ್ವ್ಯಸಗಳಿಗೆ ಒಳಗಾಗಾದೆ ಸದಾಚಾರ ಸಂಪನ್ನರಾಗಬೇಕು ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಜೂನ್ 28ರಂದು ಮೈಸೂರಿನ ಬಸವ ಮಾರ್ಗ ಫೌಂಡೇಷನ್ ವತಿಯಿಂದ ಕಲಾವಿದರಿಗೆ ನೀಡಲಾದ ದಿನಸಿ ಕಿಟ್‌ಗಳ ವಿತರಣಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮನಷ್ಯ ತನ್ನ ಮನಸ್ಸನ್ನು ಸ್ಥಿಮಿತದಲ್ಲಿಟ್ಟುಕೊಳ್ಳಬೇಕು. ದುರ್ವ್ಯಸಗಳಿಂದ ದೂರವಿರಬೇಕು. ಒಳ್ಳೆಯ ಕಾರ್ಯಗಳನ್ನು ಮಾಡಬೇಕು. ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡುವುದು ಇಂದಿನ ಅಗತ್ಯವಾಗಿದೆ. ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಸಾಕಷ್ಟು ಜನ ತೊಂದರೆಯಿಂದ ಬಳಲುತ್ತಿದ್ದಾರೆ. ಅಂತಹವರನ್ನು ಗುರುತಿಸಿ ಅವರ ನೆರವಿಗೆ ಧಾವಿಸಬೇಕಾದುದು ಸಂಘ–ಸಂಸ್ಥೆಗಳ ಕರ್ತವ್ಯ. ಆ ನಿಟ್ಟಿನಲ್ಲಿ ಸಾಕಷ್ಟು ಸಂಸ್ಥೆಗಳು ಇಂತಹ ಕಾರ್ಯಗಳಲ್ಲಿ ತೊಡಗಿಸಿಕೊಂಡಿವೆ. ಸಮಾಜಕ್ಕೆ ಒಳಿತನ್ನು ಮಾಡುವ ಉದ್ದೇಶದಿಂದ ಬಸವ ಮಾರ್ಗ ಫೌಂಡೇಷನ್ ವತಿಯಿಂದ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಹಿರಿಯ ಕಲಾವಿದರಾದ ಶ್ರೀ ದೊಡ್ಡಣ್ಣನವರು ಕೋವಿಡ್‌ನ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಚಿತ್ರರಂಗವೂ ಸಹ ಸಾಕಷ್ಟು ಸಂಕಷ್ಟಕ್ಕೆ ಒಳಗಾಗಿದೆ. ಸಾಕಷ್ಟು ಜನ ಈ ಸ್ಥಿತಿಯನ್ನು ಕಂಡು ಸಹಾಯ ಹಸ್ತ ಚಾಚಿದ್ದಾರೆ. ಮೈಸೂರಿನಲ್ಲಿ ಸುತ್ತೂರು ಶ್ರೀಗಳ ಮಾರ್ಗದರ್ಶನದಲ್ಲಿ ಇಂತಹ ಹಲವಾರು ಕಾರ್ಯಗಳು ನಡೆಯುತ್ತಿವೆ. ಕಳೆದ ಬಾರಿಯ ಲಾಕ್‌ಡೌನ್ ಸಂದರ್ಭದಲ್ಲಿ ಶ್ರೀಮಠ ಹಾಗೂ ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಇಂತಹ ಕಾರ್ಯಗಳು ನಡೆದಿವೆ. ಪೂಜ್ಯರ ಮಾತೃ ಹೃದಯ ನಮ್ಮೆಲ್ಲರನ್ನು ಪಾವನಗೊಳಸಿದೆ ಎಂದು ಹೇಳಿದರು.

ಬಸವ ಮಾರ್ಗ ಫೌಂಡೇಷನ್‌ನ ಶ್ರೀ ಬಸವರಾಜುರವರು ಮದ್ಯವ್ಯಸನದಿಂದ ಮುಕ್ತರಾಗಿ ಸಂಸ್ಥೆಯನ್ನು ಕಟ್ಟಿದ ರೀತಿ ಮತ್ತು ಅದನ್ನು ಬೆಳೆಸಿದ ಬಗೆಯನ್ನು ವಿವರಿಸುತ್ತಾ, ಅನಾಥರಿಗೆ ಮತ್ತು ವಯೋವೃದ್ಧರಿಗೆ ನೆರವಾಗುವ ತಮ್ಮ ಕನಸನ್ನು ಸಾಕಾರಗೊಳಿಸಲು ಶ್ರಮಿಸುತ್ತಿರುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದರುಗಳಾದ ಶ್ರೀ ಶಂಕರ್ ಅಶ್ವಥ್, ಶ್ರೀ ಮಂಡ್ಯ ರಮೇಶ್, ಶ್ರೀ ಆನಂದ್ ಮೊದಲಾದವರು ಉಪಸ್ಥಿತರಿದ್ದರು. ಸುಮಾರು 200ಕ್ಕೂ ಹೆಚ್ಚು ಕಲಾವಿದರುಗಳಿಗೆ ಕಿಟ್‌ಗಳನ್ನು ವಿತರಿಸಲಾಯಿತು.

□

# ಪ್ರಸಾದ



## ಕೃತಿ-ಸ್ವೀಕೃತಿ

**ಮತ್ತೆ ಕಲ್ಯಾಣ ಸಂವಾದ ಭಾಗ–2**
ಲೇ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
ಪ್ರ.: ಶ್ರೀ ಶಿವಕುಮಾರ ಕಲಾ ಸಂಘ (ರಿ), ಸಾಣೇಹಳ್ಳಿ
ಪು. 252, ಬೆಲೆ: 200/-

**ಮತ್ತೆ ಕಲ್ಯಾಣ ಸಂವಾದ ಭಾಗ–3**
ಲೇ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
ಪ್ರ.: ಶ್ರೀ ಶಿವಕುಮಾರ ಕಲಾ ಸಂಘ (ರಿ), ಸಾಣೇಹಳ್ಳಿ
ಪು. 256, ಬೆಲೆ: 200/-

**ಆತ್ಮ ಕಲ್ಯಾಣ**
ಲೇ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
ಪ್ರ.: ಶ್ರೀ ಶಿವಕುಮಾರ ಕಲಾ ಸಂಘ (ರಿ), ಸಾಣೇಹಳ್ಳಿ
ಪು. 304, ಬೆಲೆ: 200/-

**ಭರವಸೆಯ ಬೆಳಕು**
ಲೇ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
ಪ್ರ.: ಶ್ರೀ ಶಿವಕುಮಾರ ಕಲಾ ಸಂಘ (ರಿ), ಸಾಣೇಹಳ್ಳಿ
ಪು. 276, ಬೆಲೆ: 200/-

**ಶಿವ ಸಂಸ್ಕೃತಿ**
ಲೇ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
ಪ್ರ.: ಶ್ರೀ ಶಿವಕುಮಾರ ಕಲಾ ಸಂಘ (ರಿ), ಸಾಣೇಹಳ್ಳಿ
ಪು. 296, ಬೆಲೆ: 200/-

**ಅರಿತರೆ ಶರಣ ಮರೆತರೆ ಮಾನವ (ವೈಚಾರಿಕ ಲೇಖನ ಮಾಲಿಕೆ)**
ಡಾ. ಆರ್.ಬಿ. ಚಿಲುಮಿ
ಪ್ರ.: ನಿವೇದಿತ ಪ್ರಕಾಶನ
ಶಾಸ್ತ್ರಿ ನಗರ, ಬನಶಂಕರಿ 2ನೇ ಹಂತ ಬೆಂಗಳೂರು
ಪು. 260. ಬೆಲೆ: 210/-

**ಜನಪದ ಹಾಡುಗಳಲ್ಲಿ ಬಸವಣ್ಣ**
ಡಾ. ಆರ್.ಬಿ. ಚಿಲುಮಿ
ಪ್ರ.: ನಿವೇದಿತ ಪ್ರಕಾಶನ
ಶಾಸ್ತ್ರಿ ನಗರ, ಬನಶಂಕರಿ 2ನೇ ಹಂತ ಬೆಂಗಳೂರು
ಪು. 88. ಬೆಲೆ: 70/-

**ಜ್ಞಾನಗಂಗಾ**
ಪ್ರೊ. ಜಿ.ಎನ್. ತೆಗ್ಗೆಳ್ಳಿ
ಪ್ರ.: ಭುವನೇಶ್ವರಿ ಪ್ರಕಾಶನ
ವಿಜಯಪುರ
ಪು. 116. ಬೆಲೆ: 50/-

**ಧರ್ಮಯಾನ**
ಪ್ರೊ. ತಾಳ್ತಜೆ ವಸಂತಕುಮಾರ
ಪ್ರೊ. ಬಿ. ಸುಶೀಂದ್ರರಾವ್
ಪ್ರೊ. ಚಿನ್ನಪ್ಪಗೌಡ
ಪ್ರ.: ಡಾ. ವೀರೇಂದ್ರ ಹೆಗ್ಗಡೆ ಪಟ್ಟಾಭಿಷೇಕದ ಸುವರ್ಣ ಮಹೋತ್ಸವ ಕಮಿಟಿ, ಧರ್ಮಸ್ಥಳ
ಪು. 748. ಬೆಲೆ: 1000/-

**ಮಹಾಜಂಗಮ (ಹಿಂದಿ)**
ಲೇ: ಡಾ. ಬಸವಲಿಂಗ ಪಟ್ಟದೇವರು
ಪ್ರ.: ಮಹಾರಾಷ್ಟ್ರ ಬಸವ ಪರಿಷತ್ ಹಿರೇಮಠ ಸಂಸ್ಥಾನ, ಬಾಲ್ಕಿ, ಬೀದರ್
ಪು. 144, ಬೆಲೆ: 100/-

**ಜನದೀಪ್ ಲಾಹು ಜಾಗಿ (ಹಿಂದಿ)**
ಲೇ: ರಾಜು ಬ. ಜುಬರೆ
ಪ್ರ.: ಮಹಾರಾಷ್ಟ್ರ ಬಸವ ಪರಿಷತ್ ಹಿರೇಮಠ ಸಂಸ್ಥಾನ, ಬಾಲ್ಕಿ, ಬೀದರ್
ಪು. 98, ಬೆಲೆ: 100/-

**ಮಹಿಳಾ ಕಾವ್ಯಕಾರಣ**
ಲೇ: ಎಂ.ಎಸ್. ವೇದಾ
ಪ್ರ.: ಸಂವಹನ ಪ್ರಕಾಶನ ಶಿವರಾಂಪೇಟೆ, ಮೈಸೂರು
ಪು. 328, ಬೆಲೆ: 250/-

**ಜಮೀನು**
ಲೇ: ಎಂ.ಎಸ್. ವೇದಾ
ಪ್ರ.: ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು
ಪು. 210, ಬೆಲೆ: 150/-

**ರಾಜ ಒಡೆಯರ್**
ಲೇ: ಎಂ.ಎಸ್. ವೇದಾ
ಪ್ರ.: ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು
ಪು. 264, ಬೆಲೆ: 180/-

**ಉತ್ತರ ಶಾಕುಂತಲಾ**
ಲೇ: ಎಂ.ಎಸ್. ವೇದಾ
ಪ್ರ.: ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು
ಪು. 104, ಬೆಲೆ: 80/-

**ಜಯ**
ಲೇ: ಎಂ.ಎಸ್. ವೇದಾ
ಪ್ರ.: ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು
ಪು. 328, ಬೆಲೆ: 250/-

## ಲೇಖಕರ ವಿಳಾಸ

**ಡಾ. ಬಿ.ಆರ್. ಚಿಲುಮಿ**
ನಂ. 03, 'ಹೊಂಬೆಳಕು'
ಓಂ ಸ್ಕೂಲ್ ಹತ್ತಿರ, ಜಲದರ್ಶಿನಿ ನಗರ
ಧಾರವಾಡ 580003
ಮೊ: 9880206032

**ಡಾ. ಎಂ.ಎನ್. ಗಿರಿಜಾಪತಿ**
ಸಹಾಯಕ ಪ್ರಾಧ್ಯಾಪಕರು
ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ
ಮೊ: 9844582238

**ವೆಂಕಟೇಶ ಕೆ. ಜನಾದ್ರಿ, ಕನಕಗಿರಿ**
ಸಹಾಯಕ ಲೆಕ್ಕಾಧಿಕಾರಿ
ಈ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ
ಕಲಬುರ್ಗಿ 585102
ಮೊ: 9945330492

**ಡಾ. ಬಸವರಾಜ ಸಬರದ**
ನಂ. 1, 2ನೇ ಕ್ರಾಸ್
2ನೇ ಮೈನ್
ಅಮರಜ್ಯೋತಿ ಲೇಔಟ್
ಕುಪ್ಪುಸ್ವಾಮಿ ಪಾರ್ಕ್
ಆರ್.ಟಿ. ನಗರ ಅಂಚೆ
ಬೆಂಗಳೂರು 560032
ಮೊ. 9886619220

**ಡಾ|| ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ್
ಆಯುರ್ವೇದ ಚಿಕಿತ್ಸಾಲಯ
ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್
ಬಿ.ಹೆಚ್. ರಸ್ತೆ
ತುಮಕೂರು 572102
ಮೊ: 9880996196




ಮೈಸೂರು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಶಾಖಾಮಠದಲ್ಲಿ ಮೇ 14 ಶುಕ್ರವಾರ ಅಕ್ಷಯ ತೃತೀಯ ದಿನದಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿದ ಬಸವ ಜಯಂತಿ ಕಾರ್ಯಕ್ರಮದಲ್ಲಿ ತಮ್ಮಡಿಹಳ್ಳಿ ಶ್ರೀ ವಿರಕ್ತಮಠದ ಡಾ. ಶ್ರೀ ಅಭಿನವ ಮಲ್ಲಿಕಾರ್ಜುನ ಸ್ವಾಮಿಗಳು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀಮಠದ ಸಾಧಕರು ಹಾಗೂ ಸೇವಾ ಸಿಬ್ಬಂದಿಯವರನ್ನು ಕಾಣಬಹುದು (14.5.2021)







ಜೆಎಸ್ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಆಸ್ಪತ್ರೆಯಲ್ಲಿ ಆಮ್ಲಜನಕ ಸಂಗ್ರಹಣ ಸೌಲಭ್ಯದ ವಿಸ್ತರಣೆ ಮತ್ತು ಆಮ್ಲಜನಕ ಉತ್ಪಾದನಾ ಘಟಕದ ಸ್ಥಾಪನೆಯ ಕುರಿತು ಸಭೆ ಜರುಗಿತು. ಶ್ರೀ ವಿಜಯ್ ಬೆನ್ನೂರ್, ಡಾ. ಸುರೀಂದರ್ ಸಿಂಗ್, ಡಾ. ಬಿ. ಸುರೇಶ್, ಡಾ. ಕರ್ನಲ್ ಎಂ. ದಯಾನಂದ, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಆರ್. ಮಹೇಶ್, ಡಾ. ಹೆಚ್. ಬಸವನಗೌಡಪ್ಪನವರುಗಳಿದ್ದಾರೆ (17.5.2021)

71



ಜೆಎಸ್‌ಎಸ್ ಆಸ್ಪತ್ರೆಗೆ ಭೇಟಿ ನೀಡಿದ್ದ ಪರಮಪೂಜ್ಯ ಜಗದ್ಗುರುಗಳು ಕೋವಿಡ್-19 ಸೋಂಕಿಗೆ ತುತ್ತಾಗಿರುವವರ ಸಂಬಂಧಿಕರನ್ನು ಭೇಟಿಯಾಗಿ ರೋಗಿಗಳ ಯೋಗಕ್ಷೇಮ ವಿಚಾರಿಸಿ ಆತ್ಮಸ್ಥೈರ್ಯ ತುಂಬಿದರು (17.5.2021)

72



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಉಪಮುಖ್ಯಮಂತ್ರಿಗಳಾದ ಡಾ. ಸಿ.ಎನ್. ಅಶ್ವಥ್ ನಾರಾಯಣ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪೂಜ್ಯರು ಸನ್ಮಾನಿಸಿ ಆಶೀರ್ವದಿಸಿದರು. ಶ್ರೀ ಶಿವಶಂಕರ್, ಶ್ರೀ ಸುನೀಲ್ ಯಜಮಾನ್ ಮೊದಲಾದವರಿದ್ದಾರೆ (20.5.2021)




ಬೆಂಗಳೂರು ಯಶವಂತಪುರ ವಿಧಾನಸಭಾ ಕ್ಷೇತ್ರದ ಹೆಮ್ಮಿಗೆಪುರ ವಾರ್ಡ್ ನಂ. 198ರಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಕೋವಿಡ್ 19ರಿಂದ ಮೃತಪಟ್ಟ 24 ಕುಟುಂಬದವರಿಗೆ ವೈಯಕ್ತಿಕವಾಗಿ ನೀಡಿದ ಒಂದು ಲಕ್ಷ ರೂ.ಗಳ ಸಹಾಯಧನದ ಚೆಕ್‌ಗಳನ್ನು ವಿತರಿಸಲಾಯಿತು. ಶ್ರೀ ಜಯರಾಜೇಂದ್ರರು ಹಾಗೂ ಶ್ರೀ ನಿತೀಶ್ ಸೋಮಶೇಖರ್‌ರವರಿದ್ದಾರೆ (26.5.2021)







ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀಗಳ 79ನೆಯ ಹುಟ್ಟುಹಬ್ಬದ ಶುಭಸಂದರ್ಭದಲ್ಲಿ ಸುತ್ತೂರು ಶ್ರೀಗಳು ಶುಭಹಾರೈಸಿದರು. ಪೂಜ್ಯದ್ವಯರೊಡನೆ ಶ್ರೀ ಜಯರಾಜೇಂದ್ರರು, ಶ್ರೀ ಎಸ್. ಶಿವಕುಮಾರಸ್ವಾಮಿ, ಶ್ರೀ ಪ್ರಸಾದ್, ಶ್ರೀಮಠ ಹಾಗೂ ಆಶ್ರಮದ ಸೇವಾಸಿಬ್ಬಂದಿಗಳಿದ್ದಾರೆ (27.5.2021)



ಜೆಎಸ್‌ಎಸ್ ಆಸ್ಪತ್ರೆಗೆ ಅಮೆರಿಕ ಕ್ಯಾಲಿಫೋರ್ನಿಯಾದ ಶ್ರೀಮತಿ ರೇಖಾ ಶಿವಪ್ಪನವರು ನೀಡಿದ ಆಕ್ಸಿಜನ್ ಕಾನ್ಸನ್ಟ್ರೇಟರ್‌ಗಳನ್ನು ಅವರ ಸಹೋದರರು ಹಾಗೂ ಉದ್ಯಮಿಗಳಾದ ಶ್ರೀ ಅರುಣ್‌ಕುಮಾರ್‌ರವರು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ, ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರ ಮೂಲಕ ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಕರ್ನಲ್ ಡಾ. ಎಂ. ದಯಾನಂದ್‌ರವರಿಗೆ ನೀಡಿದರು. ಚಿತ್ರದಲ್ಲಿ ಶ್ರೀ ಎಲ್.ಆರ್. ಮಹದೇವಸ್ವಾಮಿ, ಶ್ರೀ ನಂದೀಶ್ ಹಂಚೆ, ಶ್ರೀ ಪ್ರತಾಪ ಸಿಂಹ, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಎ.ಹೆಚ್. ವಿಶ್ವನಾಥ್, ಶ್ರೀ ಎಲ್. ನಾಗೇಂದ್ರ, ಶ್ರೀ ಟಿ.ಎಸ್. ಶ್ರೀವತ್ಸ ಹಾಗೂ ಶ್ರೀ ಹೆಚ್.ವಿ. ರಾಜೀವ್‌ರವರುಗಳಿದ್ದಾರೆ (29.5.2021)

75

76



ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಯಮಿಗಳಾದ ಶ್ರೀ ಪ್ರವೀಣ್‌ರವರು ಸುತ್ತೂರು ಶ್ರೀಕ್ಷೇತ್ರದ ಉಚಿತ ವಸತಿ ಶಾಲೆಗೆ ಒಂದು ಲಕ್ಷ ರೂ.ಗಳ ಚೆಕ್ಕನ್ನು ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರ ಮೂಲಕ ಕೊಡುಗೆಯಾಗಿ ನೀಡಿದರು. ಡಾ. ಕರ್ನಲ್ ಎಂ. ದಯಾನಂದ, ಶ್ರೀ ಎ.ಹೆಚ್. ವಿಶ್ವನಾಥ್, ಶ್ರೀ ಎಲ್. ನಾಗೇಂದ್ರರವರುಗಳಿದ್ದಾರೆ (29.5.2021)



77

ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪೂಜ್ಯರು ಗೌರವಿಸಿ ಆಶೀರ್ವದಿಸಿದರು. ಶ್ರೀ ದೇವನೂರು ಪ್ರತಾಪ್, ಶ್ರೀ ಎಸ್. ಮಹದೇವಯ್ಯ, ಶಾಸಕರಾದ ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀಮತಿ ಮಂಗಳ ಸೋಮಶೇಖರ್ ಮೊದಲಾದವರಿದ್ದಾರೆ (1.6.2021)

78



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಸಚಿವರಾದ ಶ್ರೀ ಸಿ.ಪಿ. ಯೋಗೇಶ್ವರ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು (1.6.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ವಸತಿ ಸಚಿವರಾದ ಶ್ರೀ ವಿ. ಸೋಮಣ್ಣನವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು (13.6.2021)





ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಕೃಷಿ ಸಚಿವರಾದ ಶ್ರೀ ಬಿ.ಸಿ. ಪಾಟೀಲ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರವರಿದ್ದಾರೆ. (15.6.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಕೆಪಿಸಿಸಿ ಅಧ್ಯಕ್ಷರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪೂಜ್ಯರು ಸನ್ಮಾನಿಸಿದರು (15.6.2021)







ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಯೂಥ್ ಫಾರ್ ಸೇವಾ ಸಂಸ್ಥೆಯ ವತಿಯಿಂದ ಕೋವಿಡ್ ಸಾಂಕ್ರಾಮಿಕ ರೋಗ ಹರಡಿದ್ದ ಸಂದರ್ಭದಲ್ಲಿ ಜನಸಾಮಾನ್ಯರ ರಕ್ಷಣೆಯಲ್ಲಿ ತೊಡಗಿದ್ದ ಸ್ವಯಂ ಸೇವಕರಿಗೆ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಅಭಿನಂದನಾ ಪತ್ರಗಳನ್ನು ವಿತರಿಸಿದರು. ಶ್ರೀ ಹರೀಶ್ ಶೆಣೈ ಮೊದಲಾದವರಿದ್ದಾರೆ (27.6.2021)




ಶ್ರೀ ಸುತ್ತೂರು ಮಠದ ಪರಮಪೂಜ್ಯ ಜಗದ್ಗುರುಗಳು ಕೋವಿಡ್–19ರ ಎರಡನೇ ಡೋಸ್ ಲಸಿಕೆಯನ್ನು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಪಡೆದುಕೊಂಡರು. ಚಿತ್ರದಲ್ಲಿ ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರು, ವೈದ್ಯರು ಹಾಗೂ ಸಿಬ್ಬಂದಿಯನ್ನು ಕಾಣಬಹುದು (17.5.2021)




ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಮೈಸೂರು ನಾಗರಿಕರ ವೇದಿಕೆಯಿಂದ ಕೋವಿಡ್ ಸೋಂಕಿಗೆ ತುತ್ತಾಗಿ ಹೋಂ ಐಸೋಲೇಷನ್‌ನಲ್ಲಿರುವವರಿಗೆ ಮೈಸೂರು ನಾಗರಿಕರ ವೇದಿಕೆಯಿಂದ ವೈದ್ಯಕೀಯ ಕಿಟ್‌ಗಳನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ರವರಿಗೆ ಹಸ್ತಾಂತರಿಸಲಾಯಿತು. ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್. ಮಹದೇವಯ್ಯ, ಶ್ರೀ ಆರ್. ವಾಸುದೇವ್ ಭಟ್, ಶ್ರೀ ಜಿ.ಟಿ. ದೇವೇಗೌಡ, ಶ್ರೀಮತಿ ಶಿಲ್ಪಾ ನಾಗ್, ಶ್ರೀ ಅಪ್ಪಣ್ಣ, ಶ್ರೀ ಹೆಚ್.ವಿ. ರಾಜೀವ್, ಶ್ರೀ ತನ್ವೀರ್ ಸೇಠ್, ಶ್ರೀ ಎಸ್.ಎ. ರಾಮದಾಸ್ ಮತ್ತು ಶ್ರೀ ಪ್ರತಾಪ್ ಸಿಂಹ ಮೊದಲಾದವರುಗಳಿದ್ದಾರೆ (4.6.2021)

Registered with the Registrar of Newspapers in India Under No. 50622/86
'Prasada' Bi-Monthly, Vol. 36 Issue No. 3, May-June 2021



ಮೈಸೂರಿನಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮಹಾನಗರಪಾಲಿಕೆ ಹಾಗೂ ಹಸಿರು ಫೌಂಡೇಷನ್‌ಗಳ ಸಂಯುಕ್ತ ಆಶ್ರಯದಲ್ಲಿ 20 ಸಾವಿರ ಸಸಿಗಳನ್ನು ನೆಡುವ ಅಭಿಯಾನದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಮುಡಾ ಆಯುಕ್ತರಾದ ಶ್ರೀ ಡಿ.ಬಿ. ನಟೇಶ್‌ರವರಿಗೆ ಸಸಿಗಳನ್ನು ಹಸ್ತಾಂತರಿಸಿದರು. ಶ್ರೀ ಇ. ಶಂಕರ್, ಶ್ರೀ ಹೆಚ್.ವಿ. ರಾಜೀವ್, ಶ್ರೀ ಎಸ್.ಎ. ರಾಮದಾಸ್, ಶ್ರೀ ಪ್ರತಾಪ್ ಸಿಂಹ ಮೊದಲಾದವರಿದ್ದಾರೆ (5.6.2021)

ಬಿಡಿ ಪ್ರತಿ: ರೂ. 10

e-mail: prasadamagazine@gmail.com * www.jssonline.org